
ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 14

ಏಪ್ರಿಲ್ 6, 2003 ಬೆಲೆ ರೂ. 3.00

ಟೆಲಿಕಾಂ ದರಗಳ ಸಮರ ! ಗೆದ್ದವರು ಯಾರು ?



ಜನದ್ರೋಹಿ ಬಜೆಟ್ ಪ್ರತಿಭಟಿಸಿ



ಇರಾಕ್ ಯುದ್ಧ ವಿರೋಧಿ ತೊರೆಗಳೀಗ ಸಾಗರ !



ಕಾಶ್ಮೀರ ಪಂಡಿತರ ಹತ್ಯೆಗಳ ಹಿಂದೆ ...?

ಅವರ್ಣನೀಯ ಯಾತನೆ ತರುವ ಯುದ್ಧ......

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 21



ಕಳೆದ ಸಂಚಿಕೆಯಲ್ಲಿ ಅನಾರೋಗ್ಯದಿಂದ ಕುಸಿದುಬಿದ್ದ ಮೇಜರ್ ಜಯಪಾಲ್ ಸಿಂಗ್ ಬರೇಲಿ ಆಸ್ಪತ್ರೆಗೆ ದಾಖಲು ಮತ್ತೆ ಪೂನಾ ಆಸ್ಪತ್ರೆಗೆ. ಭಾರತೀಯ ಅಧಿಕಾರಿಗಳು ಉತ್ತಮರಲ್ಲವೆಂಬ ಹೇಳಿಕೆ ನೀಡಿದ ಸ್ವೀಟ್ ವೆಲ್, ಪಕ್ಕದ ಹಾಸಿಗೆಯಲ್ಲಿ ಕ್ಯಾಪ್ಟನ್ ತಿಮ್ಮಯ್ಯ ಮತ್ತು ಉತ್ತರದ ಚಳಿಯ ಸಂಜೆಗಿಂತ ಯುದ್ಧದ ಘೋರ ಅಸಹ್ಯತೆ ಮತ್ತು ನಿಷ್ಫಲತೆಯ ಬಗ್ಗೆ ಓದಿರುವಿರಿ ಮುಂದೆ ಓದಿ.....

ಕನ್ನಡಕ್ಕೆ: **ವಿಶ್ವ ಕುಂದಾಪುರ**

ರಂಗದಿಂದ ಅನತಿ ದೂರದಲ್ಲಿ ಇರಬೇಕಾದ ಈ ಪ್ರಸಂಗ ಯುದ್ಧದಿಂದ ಜರ್ಝರಿತವಾದ ಜಗತ್ತಿನ ಬಗ್ಗೆ ಚಿಂತಿಸುವಂತೆ ಮಾಡಿತು. ಲಕ್ಷಾಂತರ ಜನರು ತಮ್ಮ ಪ್ರಿಯತಮೆಯರಿಂದ, ತಾಯಂದಿರಿಂದ, ಮಕ್ಕಳಿಂದ ದೂರವಾಗಿದ್ದರು! ಸಾವಿರಾರು ಜನರು ಮತ್ತೆ ಅವರ ಮನೆಗೆ ಮರಳುವುದಿಲ್ಲ. ಮುಗ್ಧ ಮಕ್ಕಳು ಇನಿಲ್ಲವಾದ ತಮ್ಮ ತಂದೆಯರನ್ನು ಕಾಣುವ ಕುತೂಹಲ ದೊಂದಿಗೆ ದೊಡ್ಡವರಾಗುತ್ತಾರೆ. ಪ್ರಿಯತಮೆಯರು ದುಃಖದ ಕೋಡಿ ಹರಿಸುತ್ತಾರೆ. ಛಿದ್ರಗೊಂಡ ಆಶಾಗೋಪುರಗಳು ಹಾಗೂ ಭಾವನೆಗಳು, ನಾಶಗೊಂಡ ಮನೆಗಳು ಹಾಗೂ ಕುಟುಂಬಗಳು ಕ್ರೂರ ಯುದ್ಧದ ಹೇರಿಕೆಯಿಂದ ಉಂಟಾದ ಸುದೀರ್ಘ ಅಗಲಿಕೆಯಿಂದ ಗಂಡಂದಿರನ್ನು ತ್ಯಜಿಸಿದ ಪತ್ನಿಯರು, ಅಂಗಹೀನರಾದ ತಂದೆಯರ ಬರುವಿಕೆಯನ್ನು ಕಾದು ಬೇಸತ್ತು ಅಗಲಿದ ಮಕ್ಕಳು. ಓಹ್! ಯುದ್ಧವೇ! ಇದೆಂಥ ಕ್ರೂರ ಆಟ?

ನಾನು ನಿಧಾನವಾಗಿ ಅಳತೊಡಗಿದೆ. ಅಸ್ಸಾಂನಲ್ಲಿ ನಾನು ನೋಡಿದ್ದ ಘೋರ ಚಿತ್ರವೊಂದು ಹಠಾತ್ತನೆ ನನ್ನ ಸ್ಮೃತಿ ಪಟಲದಲ್ಲಿ ಹಾದುಹೋಯಿತು.

ಸ್ನಿಗ್ಧ ಸೌಂದರ್ಯದ, ಉದ್ದ ಕೂದಲಿನ ಮಣಿಪುರಿ ಜಾತಿಯದು. ದೂರ ಕಣಿವೆ ಪ್ರದೇಶಗಳಲ್ಲಿ ಸಾವಿರಾರು ವರ್ಷಗಳಿಂದ ಶಾಲೆಯಿಂದ ಬರುತ್ತಿದ್ದ, ಶುಭ್ರ ನೀಲಾಗಸದ ಕೆಳಗೆ ಸುಂದರವಾಗಿ ನರ್ತಿಸುತ್ತಿದ್ದ- ಆರಾಧಿಸುತ್ತಿದ್ದ ಈ ತರುಣಿಯರ ಮೇಲೆ ಕಾಮಪಿಪಾಸು ಸೈನಿಕರು ಅತ್ಯಾಚಾರ ಎಸಗುತ್ತಿದ್ದರು. ಈ ಸೈನಿಕರು ತಮ್ಮ ಮನೆಯಲ್ಲಿ ಸಮರ್ಪಣೆ ಭಾವದ ಗಂಡಂದಿರು, ಅಪ್ಪಂದಿರಾಗಿದ್ದರು. ಹಸಿದ ರಣಹದ್ದಿನಂತೆ ಸುಂದರ ತರುಣಿಯರ ಮೇಲೆ ಎರಗಿ ಮೃದುವಾದ ಪಕಳೆಗಳಂಥ ಈ ಹುಡುಗಿಯರನ್ನು ಅವರು ಹಾಳು ಮಾಡುತ್ತಿದ್ದರು.

ತೇಜಪುರ ಸಮೀಪ ದುರದೃಷ್ಟಕರ ಘಟನೆಯೊಂದಕ್ಕೆ ನಾನು ಸಾಕ್ಷಿಯಾದೆ. ಅದು ನೆನಪಿಗೆ ಬಂತು. ಅದೊಂದು ರೈತನ ಸಣ್ಣ ಗುಡಿಸಲು. ವಿಧವೆ ಪ್ರಾಯಕ್ಕೆ ಬರುತ್ತಿದ್ದ ತನ್ನ ಮಗಳ ಜತೆ ಅದರಲ್ಲಿ ವಾಸಿಸುತ್ತಿದ್ದಳು. ಸ್ನಿಗ್ಧ ಚೆಲುವಿನ, ಉದ್ದ ಕೂದಲಿನ ಆ ಬಾಲೆಗೆ ಗೊತ್ತಿಲ್ಲದಂತೆ ಯೌವ್ವನದ ಮಾದಕತೆ ಆಕೆಯಲ್ಲಿ ತುಂಬುತ್ತಿತ್ತು. ಅವಳ ಹೆಸರು ರುಕ್ಮಿಣಿ. ಅವಳ ಮನೆಯಿಂದ ಕೆಲವೇ ಗಜಗಳಷ್ಟು ದೂರದಲ್ಲಿ ನಮ್ಮ ಶಿಬಿರವಿತ್ತು. ಅವಳು ಆಗಾಗ ಶಿಬಿರಕ್ಕೆ ಬರುತ್ತಿದ್ದಳು. ಉದ್ದುದ್ದ ಅಡಿಕೆ ಮರಗಳ ತೋಟದಲ್ಲಿ ರುಕ್ಮಿಣಿ ಯುದ್ಧಪೂರ್ವ ದಿನಗಳಲ್ಲಿ ಏಕಾಂಗಿಯಾಗಿ ಆಡುತ್ತಿದ್ದಿರಬಹುದು. ಈಗ ಯುದ್ಧದ ದಿನಗಳಿಂದಾಗಿ ಪರಿಸ್ಥಿತಿ ಬದಲಾಗಿತ್ತು. ಅವಳ ಮನೆ ಮುಂದೆಯೇ ರಸ್ತೆ ನಿರ್ಮಾಣವಾಗಿತ್ತು. ಲಾರಿಗಳು ಸದ್ದು ಮಾಡುತ್ತ ಸಾಗುತ್ತಿದ್ದವು. ಇದರಿಂದಾಗಿ ಭತ್ತದ ಗದ್ದೆ ಹಾಗೂ ಅಡಿಕೆ ತೋಟ ಇವಿಷ್ಟರ ಮಂಜುಳ ನಿನಾದ ಆಲಿಸುತ್ತಿದ್ದ ಆ ಪ್ರದೇಶದಲ್ಲಿ ಗದ್ದಲ ಹೆಚ್ಚಾಗಿತ್ತು. ಆ ಏಕತಾನತೆಯನ್ನು ಮುರಿದಿತ್ತು.

ಅವಳು ಆ ಶಿಬಿರದ ದತ್ತು ಪುತ್ರಿಯಂತಿದ್ದಳು. ಪಂಜಾಬಿ ಸಿಪಾಯಿಗಳು ಆ ಬಾಲೆಯ ತಲೆಗೂದಲನ್ನು ನೇವರಿಸಿ ದೂರದಲ್ಲಿದ್ದ ತಮ್ಮ ಪುತ್ರಿಯರನ್ನು ನೆನಪು ಮಾಡಿಕೊಳ್ಳುತ್ತಿದ್ದರು. ಅವಳು ನನ್ನ ಸಿಖ್ ಆರ್ಡರ್ಲಿಯ ಗಡ್ಡವನ್ನು ತುಂಟತನದಿಂದ ತಟ್ಟುತ್ತಿದ್ದಳು. ಹಾಗೂ “ದಾದಾ, ನೀವು ಅವರ ಮುಖ ಕ್ಷೌರ ಮಾಡಿಸುವುದಿಲ್ಲವೇಕೆ?” ಎಂದು ನನ್ನನ್ನು ಪ್ರಶ್ನಿಸುತ್ತಿದ್ದಳು. ಇದಕ್ಕೆ ಆ ಸಿಂಗ್ ಹುಸಿ ಮುನಿಸು ತೋರಿಸಿ “ತೊಲಗಾಚೆ ರುಕ್ಮಿಣಿ, ಅಮ್ಮ ನಿನ್ನನ್ನು ಕಾಯುತ್ತಿದ್ದಾಳೆ. ನಿನಗೆ ಒಳ್ಳೆ ಗಂಡ ಸಿಗಲಿ” ಎಂದು ಕೂಗಿ ಕಿಚಾಯಿಸುತ್ತಿದ್ದ.

ಒಂದು ಮುಂಜಾನೆ ನಿಗ್ರೋ ಸೈನಿಕರ ತಂಡವೊಂದು ಹಾದುಹೋಗಿದ್ದನ್ನು ನಾವು ಕಂಡೆವು. ಅಲ್ಲೇ ಹತ್ತಿರದ ತೊರೆಯೊಂದರ ಹಿಂದೆ ರುಕ್ಮಿಣಿ ಸತ್ತುಬಿದ್ದಿದ್ದಳು. ಅತ್ತ ಮನೆಯಲ್ಲಿ ಅವಳ ತಾಯಿ ಹೆಣವಾಗಿದ್ದಳು. ಆ ಮಣ್ಣಿನ ಗುಡಿಸಲಿನಲ್ಲಿ ಒಂದು ಆಡು ಮಾತ್ರ ಕೂಗುತ್ತಿತ್ತು. ರುಕ್ಮಿಣಿ ಸಾಯುವವರೆಗೆ ಅವಳ ಮೇಲೆ ಕ್ರೂರವಾಗಿ ಅತ್ಯಾಚಾರ ನಡೆಸಲಾಗಿತ್ತು. ಬಹುಶಃ ತನ್ನ ಮಗಳ ಮೇಲಾಗುತ್ತಿದ್ದ ದೌರ್ಜನ್ಯವನ್ನು ತಡೆಯಲು ಹೋದ ತಾಯಿಯನ್ನು ಉಸಿರುಗಟ್ಟಿಸಿ ಸಾಯಿಸಲಾಗಿತ್ತು.

ಯುದ್ಧ ಯಾವ ಪುರುಷಾರ್ಥಕ್ಕೆ? ನಾವೆಲ್ಲ ಹೋರಾಡುತ್ತಿರುವುದು ಇದಕ್ಕಾಗಿಯೇ? ಇದೆಲ್ಲದರಿಂದ ರೋಸಿ ಹೋದ ನಾನು ಸಾಧುವೋ ಬೌದ್ಧ ಸನ್ಯಾಸಿಯೋ ಆಗಬೇಕೆಂದು ಯೋಚಿಸಿದೆ. ನನ್ನ ಹೊಟ್ಟೆ ನೋವು ಸಹಿಸಲಸಾಧ್ಯವಾಯಿತು. ತಲೆಸುತ್ತು ಬಂದು ಬಿದ್ದೆ.

ಹತ್ತು ದಿನಗಳ ನಂತರ ನಾನು ಪುಣೆಯ ಆಸ್ಪತ್ರೆಯಲ್ಲಿ ಎಚ್ಚರಗೊಂಡೆ. ನಾನು ಸಾಯುತ್ತೇನೆಂದು ವೈದ್ಯರು ಹೇಳಿದ್ದರು. ನನ್ನನ್ನು ಕಾಣಲೆಂದು ಹೆತ್ತವರು ಅಲ್ಲಿಗೆ ಬಂದಿದ್ದರು. ಜಿಎಚ್‌ಕ್ಯುನಿಂದ ಅವರಿಗೆ ಟೆಲಿಗ್ರಾಂ ಸಂದೇಶ ಹೋಗಿತ್ತು. ಗಾಬರಿ ಬಿದ್ದು ಓಡಿ ಬಂದಿದ್ದರು.

ಅಮ್ಮ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಅಪ್ಪ ಮೌನವಾಗಿ ನಿಂತಿದ್ದರು.

“ಸೈನ್ಯಕ್ಕೆ ಸೇರಬೇಡವೆಂದು ನಾನು ನಿನಗೆ ಪರಿಪರಿಯಾಗಿ ಹೇಳಿದೆ. ಆದರೆ ನೀನು ನನ್ನ ಮಾತನ್ನು ಕೇಳಲೇ ಇಲ್ಲ ಎಂದಳಮ್ಮ.

ಪ್ರಾಣವುಳಿಸಿದ ಯಹೂದಿ ವೈದ್ಯ

ಅಧಿಕಾರಿಗಳ ವಾರ್ಡ್‌ನಲ್ಲಿದ್ದ ಜರ್ಮನಿಯ ಯೆಹೂದಿ ವೈದ್ಯನೊಬ್ಬ ನನ್ನ ಪ್ರಾಣ ಉಳಿಸಿದ. ಆತ ನನಗೆ ಒಣಮೀನನ್ನಷ್ಟೆ ನೀಡಿದ ಹಾಗೂ ಬೇರೆ ಏನನ್ನೂ ತಿನ್ನದಂತೆ ನೋಡಿಕೊಂಡ. ಪಥ್ಯದಿಂದಾಗಿ ಕೇವಲ ಒಂದು ತಿಂಗಳಲ್ಲಿ ನಾನು ಗುಣಮುಖನಾದೆ. ಆಶೆ ಮತ್ತೆ ಚಿಗುರಿತು. ಆಸ್ಪತ್ರೆಯಲ್ಲಿ ಆರು ತಿಂಗಳ ನರಳಿಕೆ ನಂತರ 1944 ಡಿಸೆಂಬರ್‌ನಲ್ಲಿ ನನ್ನನ್ನು ಡಿಸ್‌ಚಾರ್ಜ್ ಮಾಡಲಾಯಿತು. ನನ್ನ ಡಿಪೋ ಚಕ್ಲಲಾಕ್ಕೆ ತೆರಳಿ ಅಲ್ಲಿ ಕ್ರಿಸ್‌ಮಸ್ ಆಚರಿಸಿದೆ.

ಸಂಘಟನೆಗೆ ಪೂರಕ

ಸನ್ನಿವೇಶ ಸಂಘಟನೆಗೆ ಅನುಕೂಲಕರವಾಗಿ ಬದಲಾವಣೆ ಆಗುತ್ತಿತ್ತು. ನಾವು ಯೋಚಿಸಿದಂತೆ, ಸೈನ್ಯದ ಹೊರಗಡೆಯು ನಮ್ಮ ಜನತೆ ಹಾಗೂ ಬ್ರಿಟೀಷ್ ಆಡಳಿತಗಾರರ ನಡುವಿನ ವೈರುಧ್ಯ ತೀವ್ರಗೊಳ್ಳುತ್ತಿತ್ತು. ಪ್ರತಿಯೊಂದು ಘಟಕದಿಂದ ಬ್ರಿಟೀಷ್ ವಿರೋಧಿ ಬೆಂಕಿಯ ಜ್ವಾಲೆ ಭುಗಿಲೆದ್ದಿತು. ಸಶಸ್ತ್ರ ಪಡೆಗಳ ಪೈಕಿ ಪದಾವೆ (ಕಾಲಾಳು) ದಳದಲ್ಲಿ, ಸೇನಾಪಡೆಗಳಲ್ಲಿ ಮತ್ತು ಡಬ್ಲ್ಯು.ಎ.ಸಿ(ಐ) ಶಿಬಿರಗಳಲ್ಲಿ ಭಾರತೀಯ ಸಿಬ್ಬಂದಿ ಹೆಚ್ಚೆಚ್ಚು ಬ್ರಿಟೀಷ್ ವಿರೋಧಿ ನಿಲುವನ್ನು ತಳೆಯತೊಡಗಿದ್ದರು.

ಯುದ್ಧ ಆರ್ಥಿಕತೆಯಿಂದಾಗಿ ಪರಿಸ್ಥಿತಿ ಭಯಾನಕವಾಗಿತ್ತು, ಬ್ರಿಟೀಷ್ ಭಾರತೀಯ ಸಶಸ್ತ್ರ ಪಡೆಗಳಲ್ಲಿನ ಜನಾಂಗೀಯ ಬೇಧ ನೀತಿಯ ಪರಿಣಾಮ ಬಾಡಿಗೆ ಸೈನ್ಯದಲ್ಲಿ ಸಹಿಸಲಸಾಧ್ಯ ಮಟ್ಟ ಮುಟ್ಟಿತ್ತು. ವಿದೇಶಿ ಆಡಳಿತದ ಈ ಜನಾಂಗ ತಾರತಮ್ಯ, ಯುದ್ಧ ಕಾಲದ ಭಯಾನಕ ಸ್ಥಿತಿ ಇವೆಲ್ಲವೂ ಅತೃಪ್ತಿಯ ಬೆಂಕಿಗೆ ಎಣ್ಣೆ ಸುರಿದಿತ್ತು.

1942 ರ ‘ಕ್ವಿಟ್ ಇಂಡಿಯಾ’ ಘೋಷಣೆ ಭಾರತದ ಸೇನೆಯ ಸ್ತ್ರೀ- ಪುರುಷರ ನೆನಪಿನಲ್ಲಿ ಇನ್ನೂ ಹಸಿರಾಗಿಯೇ ಇತ್ತು. ವರ್ಷ ಕಳೆದಂತೆ ಯುದ್ಧ ಮುಂದುವರಿಯುತ್ತಾ ಹೋಯಿತು. ಭಾರತೀಯ ಸೈನಿಕರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಈ ಹಂತದಲ್ಲಿ ‘ಭಾರತ ಬಿಟ್ಟು ತೊಲಗಿ’ ಘೋಷಣೆ ಮೂಲೆ ಮೂಲೆಯಲ್ಲಿದ್ದ ಸೈನಿಕ ಶಿಬಿರಗಳಲ್ಲಿ ಸ್ವಯಂ ಸ್ಫೂರ್ತಿಯಿಂದ ಅನುರಣಿಸಿತು. 1944 ರ ಡಿಸೆಂಬರ್‌ನಲ್ಲಿ ರಾವಲ್ಪಿಂಡಿಯಲ್ಲಿದ್ದ ಈ ಘೋಷಣೆ ನನ್ನ ಕಿವಿಗೂ ಬಿದ್ದಿತು. ಯುದ್ಧಪೂರ್ವ ದಿನಗಳ ದಬ್ಬಾಳಿಕೆಯನ್ನು ಎದುರಿಸಿಯೂ ಬಾಡಿಗೆ ಸೈನ್ಯ ಉಳಿಯ ಮುಂದುವರಿದಿತ್ತು. ಯುದ್ಧ, ವಿದೇಶಗಳಲ್ಲಿನ ಸಂಪರ್ಕಗಳು, ಯುದ್ಧದಲ್ಲಿ ಸ್ವತಃ ಇದರ ಮಹತ್ತರ ಪಾತ್ರ ಇವೆಲ್ಲದರಿಂದಾಗಿ ನಮ್ಮ ಸೇನೆಯಲ್ಲಿ ಆತ್ಮ ವಿಶ್ವಾಸದ ಹೊಸ ಹುರುಪು ತುಂಬಿತುಳುಕುತ್ತಿತ್ತು. ಹೊಸ ರೀತಿಯ ಪ್ರಜ್ಞೆ ಕೂಡ ಅದನ್ನು ಆವರಿಸಿದ್ದನ್ನು ನಾನು ರಾವಲ್ಪಿಂಡಿಯಲ್ಲಿದ್ದ ದಿನಗಳಲ್ಲಿ ಸ್ಪಷ್ಟವಾಗಿ ಗುರುತಿಸಿದೆ.

ಹೊಸಪಡೆ ರಚನೆಯ ಹೊಣೆ

1945 ಜನವರಿಯಲ್ಲಿ, ಹೊಸದೊಂದು ವೈಮಾನಿಕ ಸರಬರಾಜು ಘಟಕ- ನಂ.8 ಏರ ಡಿಸ್ಪ್ಯಾಚ್ - ರಚಿಸಲು ಜಿಎಚ್‌ಕ್ಯು (ವಾಯುಪಡೆ) ನನ್ನನ್ನು ಆಯ್ಕೆ ಮಾಡಿತು. ಇದು ನನಗೆ ಸಿಕ್ಕಿದ ಅಪೂರ್ವ ಗೌರವವಾಗಿತ್ತು. ಯಾಕೆಂದರೆ ಇಂಥ ಒಂದು ಕಷ್ಟದ ಹಾಗೂ ತೀರಾ ತಾಂತ್ರಿಕ ಕಾರ್ಯಾಚರಣೆಗೆ ಆಯ್ಕೆಯಾದ ಮೊದಲ ಭಾರತೀಯ ಅಧಿಕಾರಿ ನಾನಾಗಿದ್ದೆ.

600 ವೈಮಾನಿಕ ಸರಬರಾಜು ಪರಿಣತರು, ಏಳು ಬ್ರಿಟೀಷ್ ಅಧಿಕಾರಿಗಳು ಮತ್ತು ವೈಸ್‌ರಾಯ್‌ರ 12 ಕಮಿಷನ್ಡ್ ಅಧಿಕಾರಿಗಳುಳ್ಳ ಘಟಕವನ್ನು ಎರಡು ತಿಂಗಳೊಳಗೆ ರಚಿಸಬೇಕಿತ್ತು ಹಾಗೂ ಅದನ್ನು ಸಶಸ್ತ್ರಗೊಳಿಸಿ- ತರಬೇತಿ ನೀಡಿ ಬರ್ಮಾ ರಣರಂಗಕ್ಕೆ ಕಳುಹಿಸಬೇಕಾಗಿತ್ತು. ಅಲ್ಲಿ ಮುನ್ನುಗ್ಗುತ್ತಿದ್ದ ಸೇನಾ ತುಕಡಿಗೆ ಸರಬರಾಜು ಮಾಡುವ ಕೆಲಸವನ್ನು ನಿರ್ವಹಿಸಬೇಕಿತ್ತು.

ಕರ್ನಲ್ ಕಾಥ್ರಾನ ಒಂದು ದಿನ ಮುಂಜಾನೆ ನನ್ನನ್ನು ತಮ್ಮ ಕಚೇರಿಗೆ ಕರೆಸಿದರು.

“ಜೈಪಾಲ್, ನಂ.8 ಏರ್ ಡಿಸ್ಪ್ಯಾಚ್ ನಿಮಗೆ ನೀಡಲು ಅವರು ನಿರ್ಧರಿಸಿದ್ದಾರೆ. ಆ ಹೊಣೆ ಹೊರಲು ನೀವು ಸಿದ್ಧವೆ? ದೀರ್ಘ ಕಾಲದ ಅಸ್ವಸ್ಥತೆಯಿಂದ ಈಗಷ್ಟೆ ಗುಣಹೊಂದಿ ಬಂದಿರುವ ನಿಮಗೆ ವಿಶ್ರಾಂತಿ ಅಗತ್ಯವೆಂದು ನನಗೆ ಗೊತ್ತು. ಈ ಕೆಲಸವನ್ನು ನೀವು ಮಾಡಬಲ್ಲಿರೆಂದು ನನಗೆ ಗೊತ್ತು” ಎಂದು ಬೆಂಕಿಯ ಮುಂದೆ ಮೈಕಾಯಿಸಿಕೊಳ್ಳುತ್ತಾ ಕುಳಿತಿದ್ದ ಕರ್ನಲ್ ಹೇಳಿದರು.

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಏಪ್ರಿಲ್ 4 ರಿಂದ 6, 2003
ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ 5ನೇ ರಾಷ್ಟ್ರ ಸಮ್ಮೇಳನ, ತ್ರಿಚೂರು - ಕೇರಳ

ಏಪ್ರಿಲ್ 6, 2003
ಅಖಿಲ ಭಾರ ವಕೀಲ ಸಂಘದ ಬೆಂಗಳೂರು ಜಿಲ್ಲಾ ಸಮ್ಮೇಳನ
ಉದ್ಘಾಟನೆ : ಜಸ್ಟೀಸ್ ಕೆ.ಎಲ್.ಮಂಜುನಾಥ, ನ್ಯಾಯಾಧೀಶರು, ಹೈಕೋರ್ಟ್, ಬೆಂಗಳೂರು
ಸ್ಥಳ : ಯವನಿಕಾ, ನೃಪತುಂಗ ರಸ್ತೆ,
ಸಮಯ: ಬೆಳಗ್ಗೆ 10.30 ಕ್ಕೆ

ಏಪ್ರಿಲ್ 12, 13, 2003
ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ ರಾಜ್ಯ ಮಟ್ಟದ ಅಧ್ಯಯನ ಶಿಬಿರ, ಗಂಗಾವತಿ

ಏಪ್ರಿಲ್ 12, 13 - 2003
ಐಕ್ಯರಂಗ ಪತ್ರಿಕಾ ಬರಹಗಾರರ ಕಾರ್ಯಾಗಾರ, ಬೆಂಗಳೂರು

ಮೇ 5, 2003
ವಿದ್ಯುತ್ ಪಂಪ್‌ಸೆಟ್ ಹಾಗೂ ಭಾಗ್ಯಜ್ಯೋತಿ ಬಳಕೆದಾರರ ಸಂಘದಿಂದ ದರ ಏರಿಕೆ, ಮೀಟರೀಕರಣ, ಖಾಸಗೀಕರಣ ವಿರುದ್ಧ ರಸ್ತೆ ತಡೆ

ಮೇ 21, 2003
ಕೇಂದ್ರ ಸರ್ಕಾರದ ಆರ್ಥಿಕ ನೀತಿ, ಕೋಮುವಾದಿ ನೀತಿಗಳ ವಿರುದ್ಧ ಅಖಿಲ ಭಾರತ ಮುಷ್ಕರ

ಐಕ್ಯರಂಗ ಚಂದಾದಾರರಾಗಿ

ವಾರ್ಷಿಕ	ರೂ. 150
6 ತಿಂಗಳು	ರೂ. 80
ಆಜೀವ	ರೂ. 1000

ಕೃಷ್ಣರ ಬಜೆಟ್

ಕೃಷಿ ಬಂಡವಾಳಶಾಹಿ ಬೆಳವಣಿಗೆಗೆ ಉತ್ತೇಜನ

ಪ್ರಾದೇಶಿಕ ಅಸಮಾನತೆಯ ಪರಿಹಾರಕ್ಕೆ ನಾಮಕಾವಸ್ಥೆ ಪರಿಹಾರ

ಇತ್ತೀಚೆಗೆ ಕರ್ನಾಟಕದ ಮುಖ್ಯಮಂತ್ರಿ ಕೃಷ್ಣ ಮಂಡಿಸಿದ ಬಜೆಟ್ ಗ್ರಾಮಾಂತರ ಪ್ರದೇಶದಲ್ಲಿ ಕೃಷಿ ರಫ್ತು ಹೆಚ್ಚಿಸುವ ಹೆಸರಿನಲ್ಲಿ ಕೃಷಿ ಬಂಡವಾಳಶಾಹಿಗಳ ಬೆಳವಣಿಗೆಗೆ ಉತ್ತೇಜನ ನೀಡುವ, ಕರ್ನಾಟದ ರೈತರನ್ನು ಬಹುರಾಷ್ಟ್ರೀಯ ಕಂಪನಿಗಳ ಜೀತಕ್ಕೊಪ್ಪಿಸುವ ಉದ್ದೇಶ ಹೊಂದಿದೆ. ಕೃಷಿ ಉತ್ಪಾದನಾ ಸಂಬಂಧಗಳನ್ನು ಗಣನೀಯ ಕಲಕುವ ಉದ್ದೇಶ ಹೊಂದಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಜಿ.ಎನ್.ನಾಗರಾಜ್

ರಾಜ್ಯದ ಅಭಿವೃದ್ಧಿಯ ವಾಸ್ತವ ಸಮಸ್ಯೆಗಳಿಂದ ಪಲಾಯನ ಮಾಡಿದ ಅರ್ಥಸಚಿವರೂ ಆಗಿರುವ ಮುಖ್ಯಮಂತ್ರಿ ಕೃಷ್ಣ ಗ್ರಾಮಾಂತರ ಪ್ರದೇಶದ ಬಡವರ ಮೇಲೆ ಆರ್ಥಿಕ ದಾಳಿ ಮಾಡುತ್ತಿರುವುದನ್ನು ಈಗಾಗಲೇ ವಿವರಿಸಲಾಗಿದೆ. ಎಸ್.ಎಂ.ಕೃಷ್ಣ ಅಧಿಕಾರ ಸ್ವೀಕರಿಸಿದ ದಿನವೇ ಕರ್ನಾಟಕದ ಆಡಳಿತ ರಂಗದಲ್ಲಿ ಹಾಗೂ ರಾಜಕೀಯದಲ್ಲಿ ನಡೆಯುತ್ತಿದ್ದ ಬದಲಾವಣೆ ಅಂದು ಮುಖ್ಯ ಘಟ್ಟವನ್ನು ತಲುಪಿತು.

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯೊಬ್ಬರು ಬಹಿರಂಗವಾಗಿ ನಾನು ರಾಜ್ಯದ ಬಂಡವಾಳ ಶಾಹಿಗಳ ಮನೆ ಬಾಗಿಲಿಗೆ ಹೋಗಲು ಸಿದ್ಧ ಎಂದು ಘೋಷಿಸಿದರು. ಮಾತ್ರವಲ್ಲ ಮಂತ್ರಿಗಳನ್ನು ಮಂತ್ರಿಮಂಡಲವನ್ನು ಕಡೆಗಣಿಸಿ ಬಂಡವಾಳಶಾಹಿ ಕಂಪನಿಗಳ - ಕಂಪ್ಯೂಟರ್ ತಂತ್ರಜ್ಞಾನದ ಜೈವಿಕ ತಂತ್ರಜ್ಞಾನದ ಐ.ಟಿ, ಬಿ.ಟಿ.ಕಂಪನಿಗಳ ಮಾಲೀಕರುಗಳನ್ನು ತಂದು ಪಟ್ಟಕ್ಕೆ ಕೂರಿಸಿ ಅವರ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ಅಥವಾ ಕಾರ್ಯಪಡೆಗಳನ್ನು ರಚಿಸಿದರು. ಅವರುಗಳ ಪ್ರಚಾರದ ಅಬ್ಬರದಲ್ಲಿ ರಾಜ್ಯ ಮಂತ್ರಿಮಂಡಲ ಎಲ್ಲಿಯೋ ಮರೆಯಾಗಿ ಹೋಯಿತು. ಅಂದಿನಿಂದ ಆರಂಭವಾಗಿ ಐ.ಟಿ., ಬಿ.ಟಿ. ಕಂಪನಿಗಳ- ದೇಶಿ, ವಿದೇಶಿ ಖಾಸಗಿ ಬಂಡವಾಳದ ಸೇವೆಯೇ ತಮ್ಮ ಕರ್ತವ್ಯವೆಂಬಂತೆ - ಅವರಿಗೆ ಅನುಕೂಲ ಕಲ್ಪಿಸಿಕೊಡುವುದು ಸಾವಿರಾರು ಕೋಟಿ ರೂ.ಗಳ ರಿಯಾಯಿತಿಗಳನ್ನು ನೀಡುವುದು ಇವು ಕರ್ನಾಟಕದ ಸರ್ಕಾರದ ಸರ್ವಸ್ವವೆಂಬಂತಾಗಿತ್ತು.

ಇತ್ತೀಚಿನ ದಿನಗಳಲ್ಲಿ ಕಂಪ್ಯೂಟರ್ ತಂತ್ರಜ್ಞಾನ, ಸಾಫ್ಟ್‌ವೇರ್ ರಫ್ತು ಮೊದಲಾದವುಗಳಿಂದ ಸರ್ಕಾರದ ಗಮನ ಜೈವಿಕ ತಂತ್ರಜ್ಞಾನದೆಡೆಗೆ ವಿಸ್ತರಿಸಲ್ಪಟ್ಟಿದೆ. ಜೈವಿಕ ತಂತ್ರಜ್ಞಾನದ ಸಮಿತಿ ಜೈವಿಕ ತಂತ್ರ ಜ್ಞಾನದ ಪಾರ್ಕ್‌ಗಳು, ವಿಶೇಷ ಆದ್ಯತೆಗಳು ಇತ್ಯಾದಿ ಘೋಷಣೆಯಾಗಿದೆ. ರಾಜ್ಯದ ಕೃಷಿಗೆ ಜೈವಿಕ ತಂತ್ರಜ್ಞಾನವನ್ನು ಅಳವಡಿಸುವುದು ಆ ಮೂಲಕ ಕೃಷಿ ಉತ್ಪಾದನೆಯಲ್ಲಿ ಮಾನ್ಸಂಟೋನಂತಹ ಕಂಪನಿಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸುವುದು ಈ ಕ್ರಮಗಳಿಗೆ ಸರ್ಕಾರ ಕೈ ಹಾಕಿತ್ತು.

ರಫ್ತು - ರಫ್ತು - ರಫ್ತು

ಆದರೆ ಇಷ್ಟೇ ಸಾಲದೆಂದು ಕರ್ನಾಟಕದ ರೈತರ ಬದುಕನ್ನು ನಾಶ ಮಾಡುತ್ತಿರುವ ವಿಶ್ವ ವ್ಯಾಪಾರ ಸಂಸ್ಥೆಯ ಶರತ್ತುಗಳ ಪ್ರಯೋಜನ ಪಡೆಯುವುದೇ ತಮ್ಮ ಗುರಿಯೆಂದು ಘೋಷಿಸಿಕೊಂಡ ಸರ್ಕಾರ ಅದನ್ನು ಕಾರ್ಯರೂಪಕ್ಕಿಳಿಸಲು ಮುಂದಾಗಿದೆ. ಕರ್ನಾಟಕದಿಂದ ಕೃಷಿ ಉತ್ಪನ್ನಗಳನ್ನು ದೊಡ್ಡ ಪ್ರಮಾಣದಲ್ಲಿ ರಫ್ತು [illegible] ತಮ್ಮ ಕೃಷಿ ಯೋಜನೆ ಎಂದು ಕೃಷ್ಣ ಸರ್ಕಾರ ಭಾವಿಸಿದೆ.

ಕೃಷ್ಣ ಬಂಡವಾಳಶಾಹಿಗಳ ಬೆಳವಣಿಗೆ

ಹೀಗೆ ಕೃಷಿ ರಫ್ತನ್ನು ಹೆಚ್ಚಿಸಬೇಕಾದರೆ ಯುರೋಪ್, ಅಮೆರಿಕಾಗಳಿಗೆಬೇಕಾದ ಬೆಳೆಗಳನ್ನು ಹಾಗೂ ತಳಿಗಳನ್ನು ಬೆಳೆಯಬೇಕು, ಅವರ ರುಚಿಗೆ ಅವರ ಕಾನೂನುಗಳಿಗೆ ಒಗ್ಗುವಂತಿರಬೇಕು ಅದಕ್ಕೆ ತಕ್ಕಂತೆ ಕೃಷಿ ಉತ್ಪನ್ನ ಗಳನ್ನು ಸಂಸ್ಕರಿಸಬೇಕು. ಈ ಗುಣಮಟ್ಟಗಳಲ್ಲಿ ಕೃಷಿ ಉತ್ಪಾನೆಗೆ ತೊಡಗಬಲ್ಲವರು ಯಾರು? ಕೃಷಿ ಉತ್ಪನ್ನಗಳ ಸಂಸ್ಕರಣೆ ಮಾಡಬಲ್ಲವರು ರಫ್ತು ಮಾಡಬಲ್ಲವರುಯಾರು?

ಕರ್ನಾಟಕದ ಸಾಮಾನ್ಯ ರೈತ - ನಿರಕ್ಷರಿ ಅಥವಾ ಅರೆ ಅಕ್ಷರಿ ರೈತ ಇದನ್ನು ಮಾಡಬಲ್ಲನೇ? ಇದು ಸಾಧ್ಯವಿಲ್ಲವೆಂಬುದು ಎಸ್.ಎಂ.ಕೃಷ್ಣ ರವರಿಗೆ ಚೆನ್ನಾಗಿ ಗೊತ್ತು. ಆದ್ದರಿಂದ ತಮ್ಮ ಗುರಿಯನ್ನು ಸಾಧಿಸಬೇಕಾದರೆ ಶ್ರೀಮಂತ ರೈತರನ್ನು ಕೃಷಿ ಬಂಡವಾಳ ಶಾಹಿಗಳನ್ನಾಗಿ ಬೆಳೆಸಬೇಕು. ಈಗಾಗಲೇ ಶ್ರೀಮಂತರಾಗಿರುವ ಅವರಿಗೆ ರಾಜ್ಯದ ಸಾಮಾನ್ಯಜನರ ಹಣವನ್ನು ಕಸಿದುಕೊಂಡು ವರ್ಗಾವಣೆ ಮಾಡಬೇಕು.

ಅದಕ್ಕಾಗಿ ನೂರಾರು ಕೋಟಿ ರೂ.ಗಳ ಯಂತ್ರೋಪಕರಣಗಳ ಸಹಾಯಧನವನ್ನು ಘೋಷಿಸಲಾಗಿದೆ. ಕೂಲಿಕಾರರಿಗೆ ಬಡ ರೈತರಿಗೆ ಆಹಾರ ಸಬ್ಸಿಡಿಯ ಕಡಿತ, ಹಳದಿಕಾರ್ಡ್‌ಗಳ ಸಂಖ್ಯೆಯಲ್ಲಿ ತೀವ್ರ ಕಡಿತ, (65 ಲಕ್ಷದಿಂದ 27 ಲಕ್ಷಕ್ಕೆ) ವಿದ್ಯುತ್ ಸಹಾಯಧನ ಕಡಿತ ಇತ್ಯಾದಿ. ಆದರೆ ಶ್ರೀಮಂತರಿಗೆ ಹೆಚ್ಚು ಹೆಚ್ಚು ಸಹಾಯಧನ ಇದು ಸರ್ಕಾರದ ನೀತಿಯಾಗಿದೆ.

ಬಹುರಾಷ್ಟ್ರೀಯ ಕಂಪನಿಗಳ ಜೀತಕ್ಕೆ ಕರ್ನಾಟಕದ ರೈತರು

ಕೃಷಿ ಬಂಡವಾಳಶಾಹಿ ಗಳನ್ನು ಬೆಳೆಸುವುದು ರಫ್ತು ಮಾಡಲನುಕೂಲವಾಗುವ ಬೆಳೆಗಳ ಕೃಷಿಯನ್ನು ಹೆಚ್ಚಿಸಿದರು ಕರ್ನಾಟಕದಲ್ಲಿ ದೊಡ್ಡ ಪ್ರಮಾಣದಲ್ಲಿರುವ ಮಧ್ಯಮ ಹಾಗೂಸಣ್ಣ ರೈತರ ಭೂಮಿಯನ್ನು ರಫ್ತು ಕೃಷಿಗೆ ಬಳಸಿಕೊಳ್ಳುವುದು ಹೇಗೆ? ಇದಕ್ಕಾಗಿ ಮತ್ತೊಂದು ಕೃಷ್ಣ ತಂತ್ರ ಬಜೆಟ್ಟಿನಲ್ಲಡಗಿದೆ. ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಕೃಷಿ ಉತ್ಪನ್ನಗಳ ಸಂಸ್ಕರಣದಾರರು, ರಫ್ತುದಾರರು ಬಹುರಾಷ್ಟ್ರೀಯ ಕಂಪನಿಗಳು. ಆದ್ದರಿಂದ ಬಹುರಾಷ್ಟ್ರೀಯ ಕಂಪನಿಗಳ ವಶಕ್ಕೆ ಕರ್ನಾಟಕ ಈ ಫಲವತ್ತಾದ ಭೂಮಿಯನ್ನು ಒಪ್ಪಿಸುವುದು ಹೇಗೆ? ಇರುವ ರೈತರನ್ನು ಓಡಿಸಿ ಬಹುರಾಷ್ಟ್ರೀಯ ಕಂಪನಿಗಳ ಕೈಗೆ ಭೂಮಿ ಒಪ್ಪಿಸುವುದು ಈಗ ಸಾಧ್ಯವಿಲ್ಲ. ಆದ್ದರಿಂದ ಭೂಮಿಯ ಜೊತೆ ಭೂಮಿಯ ಮಾಲಕ ನೆಂದೆನಿಸಿಕೊಂಡ ರೈತನನ್ನು ಈಕಂಪನಿಗಳಿಗೆ ಒಪ್ಪಿಸಿಬಿಡಬೇಕು. ಇದಕ್ಕೊಂದು ಯೋಜನೆ - ಗುತ್ತಿಗೆ ಕೃಷಿ.

ಬಹುರಾಷ್ಟ್ರೀಯ ಕಂಪನಿಗಳು ಅಥವಾ ನಮ್ಮ ದೇಶದಪ್ರಬಲ ಕಂಪನಿಗಳು ಯುರೋಪು ಅಮೆರಿಕಾದ ರುಚಿಗಳಿಗೆ ತಕ್ಕ ತಳಿಯ ಬೀಜಗಳನ್ನು ಅದಕ್ಕೆ ಬೇಕಾಗುವ ರಸಗೊಬ್ಬರ, ಕ್ರಿಮಿನಾಶಕಗಳನ್ನು ಒದಗಿಸುತ್ತವೆ. ಅದನ್ನು ತೆಗೆದುಕೊಂಡ ರೈತ ತಾನು ಬೆಳೆದುದೆಲ್ಲವನ್ನು ಈ ಕಂಪನಿಗಳಿಗೆ ಅವರು ಹೇಳಿದ ಬೆಲೆಗೆ ಅವರಿಗೆ ಒಪ್ಪಿಸಬೇಕು. ಇದು ಗುತ್ತಿಗೆ ಕೃಷಿಯ ಸಾರಾಂಶ.

ಒಟ್ಟಿನಲ್ಲಿ ತನಗೆ ಬೇಕಾದ ಬೆಳೆ, ತಳಿ, ರಸಗೊಬ್ಬರ, ಔಷಧಿಗಳನ್ನು ಉಪಯೋಗಿಸಿ ಬೆಳೆದ ಬೆಳೆಯನ್ನು ತನಗೆ ಬೇಕಾದ ಮಾರುಕಟ್ಟೆಯಲ್ಲಿ ಮಾರುವ ರೈತನ ಸ್ವಾತಂತ್ರ್ಯಕ್ಕೆ ಧಕ್ಕೆ. ತಾನು ಬೆಳೆದುದರ ಒಂದು ಸಣ್ಣ ಭಾಗವನ್ನು ತನ್ನ ಕುಟುಂಬಕ್ಕಾಗಿ, ತನ್ನವರಿಗಾಗಿ ಇಟ್ಟುಕೊಳ್ಳುವಂತಿಲ್ಲ. ತಮ್ಮ ಪ್ರದೇಶದ ಜನರ ಉಪಯೋಗಕ್ಕಾಗಿ ಮಾರುವಂತಿಲ್ಲ. ಆ ಕಂಪನಿಗಳ ಗುತ್ತಿಗೆ ಕರಾರಿನ ಉಲ್ಲಂಘನೆಯಾಗಿದೆ ಎಂಬ ನೆಪದ ಮೇಲೆ ಫಸಲನ್ನು ಪೂರ್ತಿಯಾಗಿ ನಿರಾಕರಿಸಿದರೆ ಅದು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಿಕೊಳ್ಳಲಾಗುವುದಿಲ್ಲ. ಜೊತೆಗೆ ವಿದೇಶಗಳಲ್ಲಿ ಅತಿ ದುಬಾರಿ ಬೆಲೆಗೆ ಈ ಫಸಲನ್ನು ಮಾರಿದರೂ ನಮ್ಮ ರೈತರಿಗೆ ಅತಿ ಕನಿಷ್ಠ ಬೆಲೆಯನ್ನು ನಿಗದಿ ಮಾಡಿದರೆ ಏನೂ ಮಾಡುವಂತಿಲ್ಲ. ಹೀಗೆ ರೈತನ ಜುಟ್ಟುಪೂರ್ಣವಾಗಿ ಗುತ್ತಿಗೆ ಪಡೆದ ಕಂಪನಿಯ ಕೈಯಲ್ಲಿ. ಸಾಲಕೊಡುವವರು, ಕೃಷಿ ಸಾಮಗ್ರಿಗಳನ್ನು ಒದಗಿಸುವವರೂ, ಕೃಷಿ ಉತ್ಪನಾದನೆಯನ್ನೂ ಕೊಳ್ಳುವವರೂ ಎಲ್ಲರೂ ಒಬ್ಬರೇ. ಈ ಎಲ್ಲಾ ಶೋಷಣೆಯೂ ಒಬ್ಬರ ಕೈಯಲ್ಲೇ ಕೇಂದ್ರೀಕೃತ. ಹೀಗೆ ರೈತರ ಸ್ವಾತಂತ್ರ್ಯದ ಸಂಪೂರ್ಣ ನಾಶ ಗುತ್ತಿಗೆ ಕೃಷಿಯ ಉದ್ದೇಶ.

ಇಂತಹ ಗುತ್ತಿಗೆ ಕೃಷಿಗೆ ಕರ್ನಾಟಕದಲ್ಲಿ ಕೆಲವು ಖಾಸಗಿ ಕಂಪನಿಗಳು ಪ್ರಯತ್ನಿಸಿದರೂ ಹೆಚ್ಚು ಯಶಸ್ಸು ಕಾಣಲಿಲ್ಲ. ಜೊತೆಗೆ ಬಹುರಾಷ್ಟ್ರೀಯ ಕಂಪನಿಗಳು, ವಿಶ್ವ ವ್ಯಾಪಾರ ಸಂಸ್ಥೆಗಳ ಹಾವಳಿಯಿಂದ ನಷ್ಟವನ್ನನುಭವಿಸಿರುವ ರೈತನಿಗೆ ಈ ಸಂಸ್ಥೆಗಳ ಮೇಲೆಯೇ ಸಿಟ್ಟು ಮುಗಿಲಿಗೇರಿದೆ. ಇಂತಹ ಸಂದರ್ಭದಲ್ಲಿ ಬಹುರಾಷ್ಟ್ರೀಯ ಕಂಪನಿಗಳತ್ತ ರೈತ ಹೋಗಲಾರ.

ಬಹುರಾಷ್ಟ್ರೀಯ ಕಂಪನಿಗಳು ರೈತನನ್ನು ನೇರವಾಗಿ ಸಂಪರ್ಕಿಸಲು ಭಯ, ಆತಂಕಗಳು. ಇದಕ್ಕೆ ಕೃಷ್ಣ ಮತ್ತೊಂದು ತಂತ್ರ ಹುಡುಕಿದ್ದಾರೆ. ಎಲ್ಲಾ ಸಾರ್ವಜನಿಕ ಉದ್ಯಮಗಳನ್ನು ಮುಚ್ಚಲು ಹೊರಟಿರುವ ಸರ್ಕಾರ ಆರ್ಥಿಕ ವ್ಯವಹಾರವನ್ನೆಲ್ಲಾ ಕೈಬಿಡಬೇಕು, ಎಲ್ಲಾ ವ್ಯವಹಾರವನ್ನೂ ಖಾಸಗಿಯವರಿಗೊಪ್ಪಿಸಬೇಕು ಎಂದು ವಾದಿಸುತ್ತಿರುವ ಸರ್ಕಾರ ಹೊಸದೊಂದು ಸಾರ್ವಜನಿಕ ಉದ್ಯಮವನ್ನು ಸ್ಥಾಪಿಸುವುದಂತೆ. ಬಹುರಾಷ್ಟ್ರೀಯ ಕಂಪನಿಗಳನ್ನು ನೆಚ್ಚದ, ದ್ವೇಷಿಸುವ ಕರ್ನಾಟಕದ ರೈತರನ್ನು ತನ್ನ ಹೆಸರಿನಲ್ಲಿ ಹಿಡಿದು ಬಹು ರಾಷ್ಟ್ರೀಯ ಕಂಪನಿಗಳ ಕೈಗೆ ಒಪ್ಪಿಸುವುದು ಈ ಕಂಪನಿಯ ಕೆಲಸ. ಕೃಷ್ಣ ಸರ್ಕಾರವೇ ಬಹುರಾಷ್ಟ್ರೀಯ ಅಥವಾ ಇತರ ಖಾಸಗಿ ಕಂಪನಿಗಳ ಬ್ರೋಕರ್ ಆಗಿ ಕರ್ನಾಟಕದ ರೈತರನ್ನು ಅವರ ಜೀತದಾಳುಗಳನ್ನಾಗಿ ಮಾಡುವ ಕೆಲಸಕ್ಕೆ ಇಳಿದಿದೆ.

ಆಹಾರ ಸ್ವಾವಲಂಬನೆಯ ಸಂಚಕಾರ

ಹೀಗೆ ಕರ್ನಾಟಕದ ಕೃಷಿಯನ್ನು ಬಹುರಾಷ್ಟ್ರೀಯ ಬಂಡವಾಳಶಾಹಿಗಳಿಗೊಪ್ಪಿಸುವ ಈ ಹುನ್ನಾರವನ್ನು ಕರ್ನಾಟಕದ ರೈತರು ತೀವ್ರವಾಗಿ ಪ್ರತಿರೋಧಿಸಬೇಕಾಗಿದೆ. ಆದರೆ ಇದು ಕೇವಲ ರೈತರಿಗೆ ಮಾತ್ರ ಹಾನಿಕರ ಎನ್ನುವಂತಿಲ್ಲ. ಕೇವಲ ರಫ್ತಿಗಾಗಿಯೇ ಕೃಷಿ ನಡೆಸುವುದಕ್ಕೆ ಉತ್ತೇಜನ ನೀಡುವುದು ಕರ್ನಾಟಕದ ಜನತೆಗೆ ಈಗಾಗಲೇ ಕೊರತೆ ಇರುವ ಆಹಾರ ಧಾನ್ಯಗಳಲ್ಲಿ ಮತ್ತಷ್ಟು ಕೊರತೆಯುಂಟಾಗುವಂತೆ ಮಾಡುತ್ತದೆ. ಅಮೆರಿಕದ ಆಹಾರ ಧಾನ್ಯಗಳ ವ್ಯಾಪಾರವನ್ನೇ ಉದ್ಯೋಗ ಮಾಡಿಕೊಂಡ ಕಾರ್ಗಿಲ್‌ನಂತಹ ಕಂಪನಿಗಳ ಮುಷ್ಟಿಗೆ ಎಲ್ಲ ಜನತೆಯ ಆಹಾರದ ಲಭ್ಯತೆಯೂ ಸಿಕ್ಕಿ ಬೀಳುತ್ತದೆ. ದೇಶದ ಆಹಾರ ಸ್ವಾವಲಂಬನೆಗೆ ಆ ಮೂಲಕ ಸ್ವಾತಂತ್ರ್ಯಕ್ಕೆ ಸಂಚಕಾರ ಒದಗುತ್ತದೆ.



ಸಾಲ, ಸಾಲ, ಸಾಲ

ಈ ಬಾರಿ ಬಜೆಟ್‌ನಲ್ಲಿ ತೆರಿಗೆಗಳ ಏರಿಕೆಯೇ ಇಲ್ಲ ಎಂದು ಕರ್ನಾಟಕದ ಪತ್ರಿಕೆಗಳಲ್ಲವೂ ಹರ್ಷೋದ್ಗಾರಗಳನ್ನು ತೆಗೆದಿವೆ. ಈ ಬಾರಿ ಮಾರಾಟ ತೆರಿಗೆ ಪದ್ಧತಿಗೆ ಬದಲಾಗಿ ವ್ಯಾಟ್ ಎಂಬ ಹೊಸತೆರಿಗೆ ಪದ್ಧತಿಗೆ ರಾಜ್ಯ ಸರ್ಕಾರ ಹೋಗುತ್ತಿರುವುದರಿಂದ ಈ ಸ್ಥಿತ್ಯಂತರದ ಸನ್ನಿವೇಶದಲ್ಲಿ ಆಗುವ ತೆರಿಗೆ ಕೊರತೆಯನ್ನು ಪೂರ್ಣವಾಗಿ ಕೇಂದ್ರಸರ್ಕಾರ ಭರಿಸಬೇಕಾಗಿರುವುದರಿಂದ ಯಾವುದೇ ತೆರಿಗೆ ಹೆಚ್ಚಳಕ್ಕೆ ಸರ್ಕಾರ

ಪುಟ 10 ಕ್ಕೆ

ಯುದ್ಧದ ಪ್ರತಿಭಟನೆಯ ಸಾಗರಕ್ಕೆ ಸಾವಿರಾರು ನದಿಗಳು

ಯುದ್ಧ ವಿರೋಧಿ ಜನ ಪ್ರತಿಭಟನೆ ಅಮೇರಿಕಾ, ಬ್ರಿಟನ್, ಆಸ್ಟ್ರೇಲಿಯಾ ಮಾತ್ರವಲ್ಲ ಹಾಸನ, ತುಮಕೂರು ನಿಮ್ಮೂರು?

ಹಾಸನ ನಗರದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಬೃಹತ್ ಯುದ್ಧ ವಿರೋಧಿ ರ‍್ಯಾಲಿ ಜರುಗಿತು. ಒಂದು ಡಜನ್ ಸಂಘಟನೆಗಳು ದಿನಾಂಕ ಮಾರ್ಚ್ 23 ರಂದು ಜರುಗಿದ ರ‍್ಯಾಲಿಯಲ್ಲಿ ಹಾಸನ ಜಿಲ್ಲಾ ಡಿ.ವೈ.ಎಫ್.ಐ ಮತ್ತು ಎಸ್.ಎಫ್.ಐ.ಗಳ ನೇತೃತ್ವದಲ್ಲಿ ಭಾಗವಹಿಸಿ ಅಮೇರಿಕಾ ಇರಾಕ್ ಮೇಲೆ ನಡೆಸುತ್ತಿರುವ ಯುದ್ಧವನ್ನು ನಿಲ್ಲಿಸಬೇಕೆಂದು ಘೋಷಣೆ ಕೂಗಿದವು. 1000 ಕ್ಕೂ ಹೆಚ್ಚು ಜನರಿದ್ದ ರ‍್ಯಾಲಿಯಲ್ಲಿ ನೂರಾರು ಪ್ಲೆಕಾರ್ಡ್, ಫಲಕಗಳು, ಬ್ಯಾನರ್‌ಗಳು ಜನರ ಗಮನ ಸೆಳೆದವು. ಅಮೇರಿಕಾದ ಯುದ್ಧಕೋರ ನೀತಿಯನ್ನು ಖಂಡಿಸುವ ಧಿಕ್ಕಾರದ ಘೋಷಣೆ ಗಳು ಮುಗಿಲು ಮುಟ್ಟಿದವು. ಕೇವಲ ಕೆಲವೇ ನೂರು ಜನ



ಜನಾಕರ್ಷಿತ ರ‍್ಯಾಲಿ

ಭಾಗವಹಿಸುವ ನಿರೀಕ್ಷೆಯನ್ನು ಮೀರಿ ಸಾವಿರಾರು ಜನ ಸ್ವಯಂಸ್ಫೂರ್ತಿಯಿಂದ ಭಾಗವಹಿಸಿದ್ದು ವಿಶೇಷ.

ನಗರದ ಹೆಸರುವಾಸಿ ವೈದ್ಯರು ಮತ್ತು ಚಿಂತಕರಾದ ಡಾ.ಎ.ಜಿ.ಮುನಿವೆಂಕಟೇಗೌಡರು ಶಾಂತಿಧ್ವಜ ಬೀಸುವುದರೊಂದಿಗೆ ರ‍್ಯಾಲಿ ಹೊರಟಿತು. ರೈತರು, ದಲಿತ ಸಂಘಟನೆಗಳು, ವಿದ್ಯಾರ್ಥಿ, ಯುವಜನರು, ವಿಮಾನೌಕರರು, ವಿವಿಧ ಸಂಘಟನೆಗಳ ಕಾರ್ಯಕರ್ತರು, ನಗರದ ಹಿರಿಯ ಗಣ್ಯರು ಜಾರ್ಜ್ ಬುಷ್‌ರ ಮೂರು ಭೂತಗಳನ್ನು ದಹಿಸಿದರು. ಪರಿಶಿಷ್ಟ ವರ್ಗ ಮತ್ತು ಜಾತಿಯ ವಿದ್ಯಾರ್ಥಿಗಳ ಹಾಸ್ಟೆಲ್‌ನ ಎಸ್.ಎಫ್.ಐ ಘಟಕದ ಸದಸ್ಯರು ತಯಾರಿಸಿದ್ದ ಅಮೇರಿಕಾದ ಕ್ರೂಯಿಸ್ ಕ್ಷಿಪಣಿಯ ಮಾದರಿಯನ್ನು ದಹಿಸಲಾಯಿತು.

No war for oil, ಭಯೋತ್ಪಾದನೆ ಹೆಸರಲ್ಲಿ ಯುದ್ಧ ಬೇಡ, No blood for oil, ಯುದ್ಧವಿರೋಧಿಗಳೇ ನಿಜವಾದ ದೇಶಪ್ರೇಮಿಗಳು, ಅಳಿಯಲಿ ಹಗೆ, ಅರಳಲಿ ನಗೆ, ಯುದ್ಧ ಬೇಡ ಪ್ರಗತಿ ಬೇಕು, ಅಮೇರಿಕಾ ಜಗತ್ತಿನ ಕೆಟ್ಟ ಸ್ವಪ್ನ, ಬಾಂಬರ್ ಅಮೇರಿಕಾ ನಂ.1 ಭಯೋತ್ಪಾದಕ, Mad cowboy Mr.Bush, ರೆಕ್ಕೆ ಬಿಡಿಸಿ ಪಾರಿವಾಳಗಳೇ ಯುದ್ಧ ನಾಡಿನಲ್ಲಿ, 'ಇಂದು ಇರಾಕ್ ನಾಳೆ ಇಂಡಿಯಾ', world is not for sale, peace is patriotic, war is saste, ಡೀಸೆಲ್ ಬೆಲೆ ಏರಿಸುವ ಯುದ್ಧ ನಮಗೆ ಬೇಡ, ಯುದ್ಧಕೋರರಿಗೆ ನಾಚಿಕೆ ಆಗಲಿ ಇತ್ಯಾದಿ ಘೋಷಣೆಗಳಿದ್ದ ಫಲಕಗಳು ಮೆರವಣಿಗೆ ಯುದ್ದಕ್ಕೂ ರಾರಾಜಿಸಿದವು. ಬುದ್ಧ ನಗಲು ಅವಕಾಶ ಕೊಡಿ ಮತ್ತು ಸಹನೆ ಎನ್ನುವ ಸಂದೇಶವಿದ್ದ ಬುದ್ಧನ ಉಬ್ಬುಚಿತ್ರಗಳು ಎಲ್ಲರ ಗಮನ ಸೆಳೆದವು. ಬಣ್ಣಬಣ್ಣದ ಫಲಕಗಳು, ಭಿನ್ನ ಭಿನ್ನ ಬಗೆಯ ಘೋಷಣೆಗಳು ಹಾಸನದ ಜನತೆಗೆ ಹೊಸ ಅನುಭವ ನೀಡಿದವು. ಅಂಗಡಿ, ಕಛೇರಿ, ಹೊಟೇಲು ಮತ್ತು ಮನೆಗಳಿಂದ ಜನ ಹೊರಬಂದು ಬೆಕ್ಕಸ ಬೆರಗಾಗಿ ಮೆರವಣಿಗೆಯನ್ನು ವೀಕ್ಷಿಸಿದರು.

ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿದ ಮೆರವಣಿಗೆ ಹೇಮಾವತಿ ಪ್ರತಿಮೆಯ ಹಿನ್ನೆಲೆಗೆ ಇರುವ ಮಹಾರಾಜ ಪಾರ್ಕಿನಲ್ಲಿ ಸಮಾವೇಶ ಗೊಂಡಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಾಹಿತಿಗಳು ಹಾಗೂ ವಕೀಲರಾದ ಜ.ಹೋ. ನಾರಾಯಣಸ್ವಾಮಿ, ಪತ್ರಕರ್ತ ಆರ್.ಪಿ. ವೆಂಕಟೇಶ್ ಮೂರ್ತಿ, ಕರ್ನಾಟಕ ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕೋಡಿಹಳ್ಳಿ ಚಂದ್ರಶೇಖರ್, ಕೊಟ್ಟೂರು ಶ್ರೀನಿವಾಸ್, ಕೆಪಿಎಸ್‌ಎಸ್ ಮುಖಂಡ ಕುಮಾರ್ ಕಲವೀರ್, ಸಿಐಟಿಯು ಮುಖಂಡ ವಿ.ಸುಕುಮಾರ್, ನಾಜಿರ್ ಹುಸೇನ್ ಮುಬಾಷಿರ್ ಅಹಮದ್ ಮುಂತಾದವರು ಯುದ್ಧವನ್ನು ನಿಲ್ಲಿಸಬೇಕೆಂದದು ಒತ್ತಾಯಿರ ಮಾತನಾಡಿದರು. ಮಾಜಿ ನಗರಸಭಾ ಸದಸ್ಯ ಡಾ.ವೀರಭದ್ರಪ್ಪ, ಮಾಜಿ ಶಾಸಕ ಹೆಚ್.ಕೆ.ಕುಮಾರಸ್ವಾಮಿ, ದಳ(ಎಸ್) ರೈತ ವಿಭಾಗದ ಅಧ್ಯಕ್ಷ ಎಸ್.ಎನ್.ಮಂಜುನಾಥ್ ದತ್ತ, ಔಷಧಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಬಿ. ಗೋಪಾಲ್, ವನ್ಯಜೀವಿ ಸಂಘದ ಅಧ್ಯಕ್ಷ ಅತ್ತಿಹಳ್ಳಿ ದೇವರಾಜ್ ಮೆರವಣಿಗೆಯಲ್ಲಿ ಪಾಲ್ಗೊಂಡು ಪ್ರತಿಭಟನಾಕಾರರನ್ನು ಹುರಿದುಂಬಿಸಿದರು.

ಪ್ರತಿಭಟನೆಗೆ ಮುನ್ನಾದಿನ ಹಾಸನದ ಚಿನ್ನ ಬೆಳ್ಳಿ ವರ್ತಕರ ಸಂಘ, ಕರ್ನಾಟಕ ಟಿಪ್ಪು ಸಂಘರ್ಷ ಸಮಿತಿ, ಕರ್ನಾಟಕ ಪರಿಶಿಷ್ಟಜಾತಿ ಮತ್ತು ವರ್ಗಗಳ ಸಂಘಟನಾ ಸಮಿತಿ (ಕೆಪಿಎಸ್‌ಎಸ್) ಜಿಲ್ಲಾ ಸಾಂಸ್ಕೃತಿಕ ವೇದಿಕೆ ಮತ್ತು ಭಾರತ ವಿದ್ಯಾರ್ಥಿ ಫೆಡರೇಷನ್‌ಗಳು ಪತ್ರಿಕೆ ಹೇಳಿಕೆಯ ಮೂಲಕ ಡಿವೈಎಫ್‌ಐ ನೇತೃತ್ವದ ರ‍್ಯಾಲಿಗೆ ಬೆಂಬಲ ವ್ಯಕ್ತಪಡಿಸಿದ್ದವು. ಸ್ಥಳೀಯ ಪತ್ರಿಕೆಗಳು ಡಿವೈಎಫ್‌ಐ ಮತ್ತು ಎಸ್‌ಎಫ್‌ಐ ಸಂಘಟನೆಗಳು ಯುದ್ಧ ವಿರೋಧಿಸಿ ನೀಡಿದ್ದ ಪತ್ರಿಕಾ ಹೇಳಿಕೆಗಳನ್ನು ವಿಶೇಷ ಲೇಖನವಾಗಿಯೇ ಪರಿಗಣಿಸಿ ವಾಚಕರವಾಣಿ ವಿಭಾಗದಲ್ಲಿ ಮತ್ತು ಬಾಕ್ಸ್ ಐಟಮ್‌ಗಳಾಗಿ ನಿರಂತರ ಪ್ರಕಟಿಸಿ ರ‍್ಯಾಲಿಗೆ ಹುರಿದುಂಬಿಸಿದ್ದವು.

ಎಸ್‌ಎಫ್‌ಐ ವತಿಯಿಂದ ಜಮುನ, ಮಂಜುನಾಥ, ನಿಂಗರಾಜು, ಮಂಜು ಕಾಂತರಾಜ್ ಮತ್ತು ಎಚ್.ಆರ್.ನವೀನ್ ಕುಮಾರ್ ರ‍್ಯಾಲಿಯಲ್ಲಿ ನೇತೃತ್ವ ವಹಿಸಿದರೆ, ಜೆ.ಎಂ.ಎಸ್‌ನಿಂದ ಸುನೀತಾ, ಡಿವೈಎಫ್‌ಐ ನಿಂದ ಧರ್ಮೇಶ್, ರಾಜ್‌ಕುಮಾರ್, ಗಿರೀಶ್, ಪ್ರಕಾಶ್, ಅರವಿಂದ್, ಶಿವಣ್ಣ, ರವಿಕುಮಾರ್, ಹಮೀದ್, ಅನ್ವರ್ ಮುಂತಾದವರು ವಹಿಸಿದ್ದರು. ಸಿಐಟಿಯು ವಿನಿಂದ ಸತ್ಯನಾರಾಯಣ ಮತ್ತು ವಿ.ಸುಕುಮಾರ್ ಭಾಗವಹಿಸಿದ್ದರೆ, ಕರ್ನಾಟಕ ಮೆಡಿಕಲ್ ರೆಪ್ರೆಸೆಂಟೇಟಿವ್‌ಗಳ ವತಿಯಿಂದ ವೀರಣ್ಣಹಳ್ಳಿ ಹಾಗೇ 'ಜನಮತ'ದ ಪ್ರಸನ್ನ ಕುಮಾರ್, ಶಶಿಕುಮಾರ್ ಭಾಗವಹಿಸಿದ್ದರು. ಎಐಐಇಎನಿಂದ ಮುಖಂಡರಾದ ಸಿ.ಮಂಜುನಾಥ್, ಮತ್ತು ಎಸ್.ವಿಶ್ವನಾಥ್ ಭಾಗವಹಿಸಿದ್ದರು.

ರ‍್ಯಾಲಿಯಲ್ಲಿ ರಾಜ್ಯ ರೈತ ಸಂಘ, ಪ್ರಜಾವಿಮೋಚನಾ ಚಳುವಳಿ, ಗೆಳೆಯಾ ಸಮಿತಿ, ಮುಸ್ಲಿಂ ಸೇವಾ ಸಮಿತಿ, ಬಹುಜನ ಸಮಾಜ ಪಕ್ಷ ಮುಂತಾದ ಸಂಘಟನೆಗಳ ಕಾರ್ಯಕರ್ತರು ತಮ್ಮ ಬ್ಯಾನರ್‌ಗಳೊಂದಿಗೆ ಪಾಲ್ಗೊಂಡು ಶಾಂತಿಪರವಾದ ಘೋಷಣೆ ಕೂಗಿದರು. "ಪ್ರತಿಭಟನೆಯ ಸಾಗರಕ್ಕೆ ಸಾವಿರಾರು ನದಿಗಳು" ಎಂಬ ಹೆಸರಿನಡಿ ಸಂಘಟಿತಗೊಂಡ ಈ ಯುದ್ಧ ವಿರೋಧಿ ರ‍್ಯಾಲಿ ಹಾಸನ ಜಿಲ್ಲೆಯಲ್ಲಿ ಒಂದು ಅಭೂತಪೂರ್ಣ ರ‍್ಯಾಲಿಯೆನಿಸಿದೆ.

ಕೆ.ಎಸ್.ರವಿಕುಮಾರ್

ಮಹಿಳಾ ದಿನಾಚರಣೆ : ಬಲಿಸಂಸ್ಕೃತಿ ಅಳಿಸುವ ಅಸ್ತ್ರವಾಗಲಿ ಮಹಿಳೆ

ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಮಂಡ್ಯ ತಾಲ್ಲೂಕು ಜನವಾದಿ ಮಹಿಳಾ ಸಂಘಟನೆಯು ಸಂಘಟಿಸಿದ ರ‍್ಯಾಲಿ ಮತ್ತು ವಿಚಾರ ಸಂಕಿರಣದಲ್ಲಿ ವಿವಿಧ ಗ್ರಾಮಗಳಿಂದ ಆಗಮಿಸಿದ ಸಾವಿರಾರು ಸಂಖ್ಯೆಯ ಮಹಿಳೆಯರು ಮಂಡ್ಯದ ಸಿಲ್ವರ್ ಜ್ಯೂಬಿಲ್ ಪಾರ್ಕ್‌ನಿಂದ ಶಿಸ್ತು ಬದ್ಧ ಮೆರವಣಿಗೆ ನಡೆಸಿದರು. ಮೆರವಣಿಗೆ ಉದ್ದಕ್ಕೂ ಸಂಘಟನೆಯ ಸಂಕೇತವಾದ ಬಾವುಟ ಮತ್ತು ಪ್ಲೇಕಾರ್ಡುಗಳನ್ನು ಹಿಡಿದು ಮಹಿಳಾ ವಿರೋಧಿ ನೀತಿಗಳ ವಿರುದ್ಧ ಮತ್ತು ಕೋಮುವಾದ, ಯುದ್ಧದ ವಿರುದ್ಧ ಮತ್ತು ಬರಗಾಲದಲ್ಲಿ ಆಹಾರ ಭದ್ರತೆಗಾಗಿ ಘೋಷಣೆಗಳನ್ನು ಕೂಗುತ್ತಾ, ಸಂಜಯ ವೃತ್ತದಲ್ಲಿ ಮಾನವ ಸರಪಳಿ ರಚಿಸಿ, ಯಾವುದೇ ಶಕ್ತಿಗಳು ದೇಶವನ್ನಾಗಲಿ, ಮಾನವೀಯ ಸಂಬಂಧ ಗಳನ್ನಾಗಲೀ ಒಡೆಯಲು ಬಿಡುವುದಿಲ್ಲ ಎಂದು ಹೇಳುವ ಐಕ್ಯತೆಯನ್ನು ಬಿಂಬಿಸುವ ಘೋಷಣೆ ಗಳು ಮೊಳಗಿದವು. ನಂತರ ಕಲಾಮಂದಿರದಲ್ಲಿ ಸಮಾವೇಶಗೊಂಡಿತು.

ಸ್ತ್ರೀಶಕ್ತಿ ಸ್ವಸಹಾಯ ಮಹಿಳಾ ಸಂಘಟನೆಗಳು ಮಹಿಳೆಯರ ಮೇಲೆ ಪ್ರಭಾವ ಬೀರುತ್ತಿರುವ ಆತಂಕಕಾರಿ ಕೋಮುವಾದೀಕರಣದ ಬಗ್ಗೆ ಎಚ್ಚೆತ್ತು ಅದರ ನಿಗ್ರಹಕ್ಕಾಗಿ ಪ್ರಬಲವಾದ ಹೋರಾಟ ಕೈಗೊಂಡು ಸಮಾಜದ ದಿಕ್ಕನ್ನು ಪ್ರಗತಿಯತ್ತ ಕೊಂಡೊಯ್ಯಬೇಕೆಂದು ಅಖಿಲಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಎಸ್. ವಿಮಲ ಕರೆನೀಡಿದರು.

ದೇಶದಲ್ಲಿ ಸಾಮಾಜಿಕ ಪರಿವರ್ತನೆ ಆಗ ಬೇಕಾದರೆ ಮಹಿಳೆಯರುದಂಗೆ ಏಳಬೇಕು. ಸಾಂಸ್ಕೃತಿಕ ದಬ್ಬಾಳಿಕೆಯನ್ನು ಪ್ರತಿಭಟಿಸಬೇಕು ಎಂದು ವಿಚಾರವಾದಿ ಪ್ರೊ. ಕೆ. ರಾಮದಾಸ್ ಕರೆ ನೀಡಿದರು. ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಜರುಗಿದ ಮಹಿಳಾ ದಿನಾಚರಣೆ ಮತ್ತು ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು, ಅತ್ಯಾಚಾರಗಳು ಮತ್ತು ಕಾನೂನು ಕುರಿತ ವಿಚಾರ ಸಂಕೀರಣದಲ್ಲಿ ಅವರು ಮಾತನಾಡಿದರು.

ಸಾಂಪ್ರದಾಯಕತೆ ವಿರುದ್ಧ ಹೋರಾಡದೇ ಇದ್ದರೆ ಮಹಿಳೆಯರನ್ನು ಕೋಮುವಾದದ ತಾಯಿ ಬೇರುಗಳಾಗಿ ಉಳಿಸುತ್ತಾರೆ. ಹಾಗಾಗಬಾರದು, ಮಹಿಳೆಯರು ಕ್ರಾಂತಿದಾಯಕ ಸಮಾಜದ ಚಿಗುರು ಬೇರುಗಳಾಗಿ ನೀವು ಬೆಳೆಯಬೇಕು ಎಂದು ಕಿವಿಮಾತು ಹೇಳಿದರು.


ಕೋಮುವಾದ ಬಲಿ ಸಂಸ್ಕೃತಿಯನ್ನು ಪ್ರತಿ ಪಾದಿಸುವಂಥದ್ದು, ಅದನ್ನ ಅಳಿಸುವ ಅಸ್ತ್ರ ಮಹಿಳೆ ಯರಾಗಬೇಕು. ಪರಿವರ್ತನಾಶೀಲ ಸಮಾಜ ನಿರ್ಮಾಣ ಆಗಬೇಕು ಇದು ಮಹಿಳೆಯರ ಒಗ್ಗಟ್ಟು ಮತ್ತು ಸಂಘಟಿತ ಹೋರಾಟದಿಂದ ಮಾತ್ರ ಹಕ್ಕುಗಳನ್ನು ಪಡೆಯಲು ಸಾಧ್ಯ ಭಾರತದಲ್ಲಿ ಮಹಿಳೆಯನ್ನು ಬಲಿತೆಗೆದು ಕೊಳ್ಳುವ ಸಂಸ್ಕೃತಿ ಹಿಂದಿನಿಂದಲೂ ಇದೆ, ಮಹಿಳೆಯ ವೈಭವೀ ಕರಣದ ಜೊತೆಜೊತೆಗೆ ಬಲಿಪಶು ಮಾಡುವ ಪರಂಪರೆ ಕಾಣುತ್ತೇವೆ. ವ್ಯಾಪಾರೀಕರಣ ಸಂಸ್ಕೃತಿ ಇಂದು ರಾರಾಜಿಸುತ್ತಿದೆ ಕೋಮುದಳ್ಳುರಿಯಲ್ಲಿ ಬಲಿಪಶು ಮಹಿಳೆಯರು.

ಕೋಮುವಾದದ ಹಿಂದೆಯೂ ಬಂಡವಾಳ ಶಾಹಿ ಶಕ್ತಿ ಕೆಲಸ ಮಾಡುತ್ತದೆ, ಜಾತಿ ಪದ್ಧತಿ ಇರೋದ್ರಿಂದಲೇ ವರದಕ್ಷಿಣೆ ಇರೋದು ಕೋಮು ವಾದ ಇರೋದು, ಹೇಗೆ ಜಗತ್ತಿನಾದ್ಯಂತ ಜಾಗತೀಕರಣದಂತೆ ಕೋಮುವಾದಿ ಮನಸ್ಸುಗಳು, ಮತಾಂಧ ಮನಸ್ಸುಗಳು ಸೃಷ್ಟಿ ಆಗಿವೆ ಎಂದರು.

ಹೆಚ್.ಎನ್. ನಾಗಮೋಹನ್ ದಾಸ್‌ರವರು ಮಾತನಾಡುತ್ತಾ ಮಹಿಳೆ ಮತ್ತು ಆಸ್ತಿ ಹಕ್ಕಿನ ಬಗ್ಗೆ, ಆರ್ಥಿಕ ಸುಧಾರಣೆ ಹೆಸರಿನಲ್ಲಿ ಆರ್ಥಿಕ ಸಂಕಷ್ಟಕ್ಕೆ ದೇಶವನ್ನು ದೂಡುತ್ತಿದ್ದು ಸುಧಾರಣೆ ಹೆಸರಿನಲ್ಲಿ ಮಹಿಳೆಯರನ್ನು ಶೋಚನೀಯ ಸ್ಥಿತಿಗೆ ತಳ್ಳಲಾಗಿದೆ. ಜೀವನಾವಶ್ಯಕ ಬೆಲೆ ಗಗನಕ್ಕೇರಿದೆ. ಇಂತಹ ಸಂದರ್ಭದಲ್ಲಿ ಮಹಿಳೆ ಸುಮ್ಮನೆ ಕೂರದೆ ಸಂಘಟನಾತ್ಮಕವಾಗಿ ಜಾಗತೀಕರಣಕ್ಕೆ ಸವಾಲಾಗ ಬೇಕೆಂದರು. ಇರಾಕ್‌ಯುದ್ಧ ಖಂಡಿಸಿದರು.

ಎನ್. ಪ್ರಭಾ ಮಾತನಾಡುತ್ತಾ ದಿನನಿತ್ಯ ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳನ್ನೆತ್ತಿ ಕೊಂಡು ಮಹಿಳೆಯರು ಹೋರಾಟ ಮಾಡಬೇಕು ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ಜನವಾದಿ ಮಹಿಳಾ ಸಂಘಟನೆಯ ಮಂಡ್ಯ ತಾಲ್ಲೂಕು ಅಧ್ಯಕ್ಷೆ ಕುಮಾರಿ ವಹಿಸಿದ್ದರು.

ಸಮಾರಂಭದಲ್ಲಿ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ, ಬಿಜಿವಿಎಸ್‌ನ ಜಿಲ್ಲಾ ಕಾರ್ಯದರ್ಶಿ ಎಸ್. ರೇವಣ್ಣ, ಪತ್ರಕರ್ತ ರಮೇಶ ಹುಲ್ಲೆರೆ, ಕೃಷಿ ಕೂಲಿಕಾರರ ಸಂಘದ ಮುಖಂಡರ ಪುಟ್ಟಮಾದಯ್ಯ ವಕೀಲ ಬಿ.ಟಿ. ವಿಶ್ವನಾಥ್, ಜಿ. ರಾಮಕೃಷ್ಣ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.





ರಾಷ್ಟ್ರದ ಕಮ್ಯುನಿಸ್ಟ್ ಚಳುವಳಿಯ ಹಿರಿಯ ನೇತಾರ ಸಂಗಾತಿ ಕಾಂ.ಎಲ್.ಬಿ. ಬಾಲಗಂಗಾಧರ ರಾವ್‌ರವರ ನಿಧನಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ತನ್ನ ಶ್ರದ್ಧಾಂಜಲಿ ಅರ್ಪಿಸಿದೆ. ಎಲ್‌ಬಿಜಿ ಎಂದೇ ಪ್ರಖ್ಯಾತರಾಗಿದ್ದ ಅವರು ಪಕ್ಷದಲ್ಲಿ ಪಾಲಿಟ್‌ಬ್ಯೂರೋ ಸದಸ್ಯರಾಗಿ, ಕೇಂದ್ರ ಸಮಿತಿ ಸದಸ್ಯರಾಗಿ ಮತ್ತು ಆಂಧ್ರಪ್ರದೇಶ ರಾಜ್ಯ ಸಮಿತಿ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದರು. 1938 ರ ಹಿಂದೆಯೇ ಪಕ್ಷಕ್ಕೆ ಸೇರಿದ್ದ ಅವರು ಆಂಧ್ರಪ್ರದೇಶದಲ್ಲಿ ಕಮ್ಯುನಿಸ್ಟ್ ಚಳುವಳಿಯ ನಿರ್ಮಾಣಕರ್ತೃಗಳಲ್ಲೊಬ್ಬರಾಗಿದ್ದರು. ಅವರು 1938ರಲ್ಲಿ ಸಮರ್ಪಿತ ಪೂರ್ಣಾವಧಿ ಕಾರ್ಯಕರ್ತರಾದರು. ತೆಲಂಗಾಣ ಸಶಸ್ತ್ರ ಹೋರಾಟದ ಕಾಲದಲ್ಲಿ ಅತ್ಯಂತ ಪ್ರಮುಖ ನಲ್ಲ ಮಲ ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿಯಾಗಿದ್ದರು.

ಅವರ 65 ವರ್ಷಗಳ ಸುದೀರ್ಘ ಕಮ್ಯುನಿಸ್ಟ್ ಜೀವನದಲ್ಲಿ, ಕಾಮ್ರೇಡ್ ಎಲ್‌ಬಿಜಿಯವರು ಐದು ಬಾರಿ ಒಟ್ಟು ಹನ್ನೊಂದು ವರ್ಷ ಒಂಬತ್ತು ತಿಂಗಳ ಕಾಲ ಭೂಗತ ಜೀವ ನಡೆಸಿ ಪಕ್ಷದ ಚಟುವಟಿಕೆಗಳನ್ನು ಸಂಘಟಿಸಿದ್ದರು. ಅವರು ಮೂರು ಬಾರಿ ಸೆರೆವಾಸ ಅನುಭವಿಸಿದ್ದರು. ಅವರು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಭೂಮಾಲಿಕ ಹಿನ್ನೆಲೆಯಿಂದ ಬಂದಿದ್ದರೂ ಕಾಮ್ರೇಡ್ ಎಲ್‌ಬಿಜಿಯವರು ಅತ್ಯಂತ ಸರಳ ಕಮ್ಯುನಿಸ್ಟ್ ಜೀವನಕ್ಕೆ ಮತ್ತು ದೇಶದಲ್ಲಿ ಶೋಷಿತ ಜನರ ವಿಮೋಚನೆಗೆ ಕಂಕಣಬದ್ಧರಾಗಿದ್ದರು.

ತೆಲಂಗಾಣದ ಸಶಸ್ತ್ರ ಹೋರಾಟದ ಸಮಯದಲ್ಲಿ ನಿಜಾಮನ ರಜಾಕರು ಮತ್ತು ಭಾರತೀಯ ಸೇನೆಯನ್ನು ಎದುರಿಸಿ ಅತ್ಯಂತ ಸಮರಶೀಲತೆ ಮತ್ತು ಬದ್ಧತೆಯನ್ನು ಪ್ರದರ್ಶಿಸಿದ್ದರು. ಪಕ್ಷದ ಸಂಘಟನೆಯ ಮೇಲೆ ಅವರಿಗಿದ್ದ ಹಿಡಿತವು ಅತ್ಯಂತ ಗಂಭೀರ ಸಮಯವಾದ ಎಡ ಸಾಹಸವಾದ ಮತ್ತು ಬಲ ಸುಧಾರಣವಾದದ ವಿರುದ್ಧ ಪಕ್ಷವನ್ನು ಆಂಧ್ರ ಪ್ರದೇಶದಲ್ಲಿ ಮುನ್ನಡೆಸಲು ಸಾಧ್ಯವಾಯಿತು.

ಅನಾರೋಗ್ಯದ ಕಾರಣದಿಂದ ಅವರು ಪಕ್ಷದ ಪೊಲಿಟ್‌ಬ್ಯೂರೊ ಮತ್ತು ಕೇಂದ್ರ ಸಮಿತಿಯಿಂದ, 1998 ರಲ್ಲಿ ನಡೆದ 16ನೇ ಮಹಾಧಿವೇಶನದಲ್ಲಿ ನಿವೃತ್ತಿಹೊಂದಿದರು. ಆದರೂ ಅವರು ಪಕ್ಷದ ಚಳುವಳಿ ಮತ್ತು ಚಟುವಟಿಕೆಗಳ ಜೊತೆ ಉಳಿದಿದ್ದರು.

ಸಿಪಿಐ(ಎಂ) ಪಕ್ಷ ಪೊಲಿಟ್‌ಬ್ಯೂರೊ ಅವರ ನಿಧನಕ್ಕೆ ಶ್ರದ್ಧಾಂಜಲಿ ಅರ್ಪಿಸಿ ಪತ್ನಿ ಸರೋಜಿನಿ, ಮಗ ಸಾಗರ್ ಮತ್ತವರ ಕುಟುಂಬದ ಸದಸ್ಯರಿಗೆ ತನ್ನ ಸಂತಾಪಗಳನ್ನು ತಿಳಿಸಿದೆ.

ಅವರ ಅಂತ್ಯಕ್ರಿಯೆಯು 29.3.2003 ರಂದು ವಿಜಯವಾಡದಲ್ಲಿ ನಡೆಯಿತು. ಅಂದು ಪಕ್ಷದ ಭಾವುಟವನ್ನು ಅರ್ಧಕ್ಕೆ ಇಳಿಸಿ ಗೌರವ ಸಲ್ಲಿಸಲು ಪೊಲಿಟ್ ಬ್ಯೂರೊ ಕರೆ ನೀಡಿತ್ತು.

ಸಿಪಿಐ(ಎಂ) ಸೆಕ್ರೆಟರಿಯೇಟ್ ಶ್ರದ್ಧಾಂಜಲಿ

ಭಾರತದ ಕಮ್ಯುನಿಸ್ಟ್ ಚಳುವಳಿಯ ಅಗ್ರ ನಾಯಕ, ತೆಲಂಗ್ಟಣ ಸಶಸ್ತ್ರ ಸಮರದ ವೀರ ಸೇನಾನಿ ಕಾಮ್ರೆಡ್ ಎಲ್.ಬಿ.ಜಿಯವರ ನಿಧನಕ್ಕೆ ಅಪಾರ ಶೋಕ ವ್ಯಕ್ತಪಡಿಸಿರುವ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಅವರಿಗೆ ಶ್ರದ್ಧಾಂಜಲಿ ಅರ್ಪಿಸಿ ಸಂದೇಶವನ್ನು ಆಂಧ್ರಪ್ರದೇಶದ ಸಿಪಿಐ(ಎಂ) ಘಟಕಕ್ಕೆ ಕಳುಹಿಸಿದೆ.

ನದಿ ಮಾರ್ಗ ಕಗ್ಗೊಲೆ - ಬರ್ಬರ ಅಪರಾಧ

11 ಮಹಿಳೆಯರು, ಇಬ್ಬರು ಮಕ್ಕಳು ಸೇರಿದಂತೆ 24 ಕಾಶ್ಮೀರಿ ಪಂಡಿತರ ನದಿಮಾರ್ಗ ಕಗ್ಗೊಲೆ ಒಂದು ಬರ್ಬರ ಅಪರಾಧಿ ಕೃತ್ಯ. ಜಮ್ಮು-ಕಾಶ್ಮೀರದಲ್ಲಿನ ಕೋಮು ಧ್ರುವೀಕರಣವನ್ನು ಜೀವಂತವಿರಿಸಲು ಆ ಮೂಲಕ ಕೋಮು ಧಂಗೆಗಳಿಗೆ ಉತ್ತೇಜಿಸುವ ಉದ್ದೇಶದೊಂದಿಗೆ ಭಯೋತ್ಪಾದಕ ಸಂಘಟನೆಗಳು ಈ ದುಷ್ಕೃತ್ಯ ನಡೆಸಿವೆ.

ಈ ಬರ್ಬರತೆ ನಡೆದಿರುವ ಸಮಯ 2 ಕಾರಣಗಳಿಂದಾಗಿ ಪ್ರಮುಖವಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿನ ಮುಫ್ತಿ ಮೊಹಮ್ಮದ್ ಸೈಯದ್‌ರ ಸರ್ಕಾರವು ಭಯೋತ್ಪಾದಕತೆಯಿಂದ ಜರ್ಜರಿತವಾಗಿರುವ ಆ ರಾಜ್ಯದ ಜನತೆಗೆ ನೀಡಿರುವ ಸಾಂತ್ವನದ-ಸಮಾದಾನದ ನೀತಿಗಳ ಸಕಾರಾತ್ಮಕ ಆಡಳಿತದ ಪರಿಣಾಮಗಳನ್ನು ಕಡೆಗಣಿಸುವ ಮೊದಲನೆ ಉದ್ದೇಶದೊಂದಿಗೆ ನಡೆಸಲಾಗಿದೆ. ಸಕಾರಣವಿಲ್ಲದೆ ಕಾರಾಗೃಹವಾಸ ಅನುಭವಿಸುತ್ತಿರುವ ಉಗ್ರರನ್ನು ಸಮರ್ಪಕ ತನಿಖೆ ನಂತರ ಬಿಡುಗಡೆ ಮಾಡುವ, POTA ಜಾರಿ ಮಾಡದಿರುವ ಹಾಗೂ ಕುಖ್ಯಾತಿಯೊಂದಿರುವ "ವಿಶೇಷ ಕಾರ್ಯಾಚರಣೆ ಪಡೆ"ಯನ್ನು ವಿಸರ್ಜಿಸುವಂತಹ ಮುಫ್ತಿ ಸರ್ಕಾರದ ಕ್ರಮಗಳಿಂದಾಗಿ ಪ್ರತ್ಯೇಕಗೊಂಡಿದ್ದ ಜನ ವಿಭಾಗಗಳನ್ನು ನಾಗರೀಕ ಹಾಗೂ ಮುಖ್ಯ ವಾಹಿನಿಗೆ ಸೆಳೆಯುತ್ತಿದೆ. ಪರಿಣಾಮವಾಗಿ ರಾಜ್ಯವನ್ನು ಸದಾ ಆತಂಕ- ಭಯದಲ್ಲಿಡ ಬಯಸುವ ಭಯೋತ್ಪಾದಕರು ಮೇಲಿನ ಬರ್ಬರತೆಯನ್ನು ಪ್ರದರ್ಶಿಸಿದ್ದಾರೆ.

ಎರಡನೆಯದಾಗಿ ಈ ಹಿಂದೆ ಭಯೋತ್ಪಾದಕ ಚಟುವಟಿಕೆಗಳಿಂದಾಗಿ ರಾಜ್ಯ ತೊರೆದು ಹೋಗಿದ್ದ ಕಾಶ್ಮೀರಿ ಪಂಡಿತರ ಕುಟುಂಬಗಳನ್ನು ಮತ್ತೆ ವಾಪಸ್ಸು ರಾಜ್ಯಕ್ಕೆ ಕರೆತಂದು ನೆಲೆಸುವಂತೆ ಮಾಡುವ ಪ್ರಯತ್ನಗಳನ್ನು [illegible] ಸರ್ಕಾರ ತೀವ್ರಗೊಳಿಸಿತ್ತು. ಇದು ಯಶಸ್ವಿಯಾದಲ್ಲಿ ಕಾಶ್ಮೀರದಲ್ಲಿನ ಪರಿಸ್ಥಿತಿ ಎಲ್ಲಿ ಸಹಜ ಸ್ಥಿತಿಗೆ ಮರಳಿದಂತಾಗುತ್ತದೋ? ಅದು ಆಗಕೂಡದೆಂಬ ಉದ್ದೇಶದೊಂದಿಗೆ ಈ ಕಗ್ಗೊಲೆಗಳನ್ನು ಭಯೋತ್ಪಾದಕ ಸಂಘಟನೆಗಳು ನಡೆಸಿವೆ.

ಇಂತಹ ಪರಿಸ್ಥಿತಿಯಲ್ಲಿ ಭಯೋತ್ಪಾದಕ ಚಟುವಟಿಕೆಗಳ ಬಗ್ಗೆ ಕಟ್ಟೆಚ್ಚರ ವಹಿಸುವ ಅದನ್ನು ತೀವ್ರಗೊಳಿಸುವ ಅಗತ್ಯವಿದೆ. ಅಂತೆಯೇ ನದಿಮಾರ್ಗ ನಿರ್ವಹಣೆ ದುರ್ಘಟನೆ ಕುರಿತಂತೆ ತನಿಖೆ ನಡೆಸಿ ಪ್ರಾಮಾಣಿಕ ಕ್ರಮ ಕೈಗೊಳ್ಳಬೇಕಿದೆ.

ಬರ್ಬರ ಹತ್ಯೆಯ ಹಿಂದೆ ಭಯೋತ್ಪಾದಕರ ಹಲವು ಲೆಕ್ಕಾಚಾರಗಳಿವೆ. ಹಾಗೆಯೇ ಜಮ್ಮು-ಕಾಶ್ಮೀರದಲ್ಲಿನ ಒಟ್ಟು ಸಮಸ್ಯೆಗೆ ಸರಿಯಾದ ಪರಿಹಾರ ಸೂಚಿಸಿದಲ್ಲಿ ಕೇಂದ್ರ ಸರ್ಕಾರದ ಪೂರ್ವಗ್ರಹಪೀಡಿತ ದೃಷ್ಟಿ ತೊಡಕಾಗುತ್ತಿದೆ. ಆಗಬೇಕಿರುವ ಕ್ರಮಗಳು ದ್ವಿಮುಖವಾಗಿವೆ. ಅವು....!

ಇದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಸೂಕ್ತ ಹೊಂದಾಣಿಕೆ-ತಿಳುವಳಿಕೆಯೊಂದಿಗೆ ಕಾರ್ಯ ನಿರ್ವಹಿಸಬೇಕಿದೆ. ಜನತೆಯಲ್ಲಿನ ಪರಕೀಯತೆಯನ್ನು ಹೋಗಲಾಡಿಸಲು ರಾಜಕೀಯ ಪ್ರಕ್ರಿಯೆಗಳನ್ನು ಬಲಗೊಳಿಸಬೇಕಿದೆ.

ಕೇಂದ್ರದ ಪೂರ್ವಗ್ರಹಗಳ ತೊಡಕು


ಆದರೆ ಕೇಂದ್ರ ಸರ್ಕಾರದ ಪೂರ್ವಾಗ್ರಹಗಳು ಈ ನಿಟ್ಟಿನಲ್ಲಿ ದೊಡ್ಡ ತೊಡಕಾಗಿವೆ. ರಾಜಕೀಯ ಲಾಭ ಪಡೆಯುವ ಉದ್ದೇಶದೊಂದಿಗೆ ಆರ್.ಎಸ್.ಎಸ್ ಸಂಘ ಪರಿವಾರದ ಅನೇಕ ಸಂಘಟನೆಗಳು ಸರ್ಕಾರದ "ಸಾಂತ್ವನದ ಕ್ರಮ" ಗಳೇ ಕಾರಣವೆಂದು ದೂಷಿಸಲು ಆರಂಭಿಸಿವೆ. ಕೇಂದ್ರ ಸರ್ಕಾರವು ಸಹ ಇದೇ ನಿಲುವನ್ನು ತಳೆದಿದೆ.

ಜಮ್ಮು ಕಾಶ್ಮೀರದ ಸಮಸ್ಯೆ ಪರಿಹಾರಕ್ಕೆ ಇರುವ "ಸ್ವಾಯತ್ತತೆ" ನೀಡುವ ಕ್ರಮದ ಕುರಿತು, ಮಾತುಕತೆ ನಡೆಸಬೇಕಿರುವ ಕೇಂದ್ರ ಸರ್ಕಾರದ, ಉಪ ಪ್ರಧಾನಿಗಳಾದ ಎಲ್.ಕೆ.ಅಡ್ವಾನಿಯವರೇ, ಬಿಜೆಪಿಯ ಪ್ರಮುಖ ಅಜೆಂಡಾ ವಿಧಿ 370ನ್ನು ರದ್ದುಗೊಳಿಸುವುದೇ ಮಾರ್ಗ ಎಂದು ಪುನರುಚ್ಚರಿಸಿ ದ್ದಾರೆ. ಇದು ಪರಿಸ್ಥಿತಿ ಯನ್ನು ಮತ್ತಷ್ಟು ಹದಗೆಡಿಸಲಿದೆ.

ತನ್ನ ಪೂರ್ವನಿಯೋಜಿತ ಪಾಕಿಸ್ತಾನ ಕೇಂದ್ರಿತ ವಿದೇಶಾಂಗ ಹಾಗೂ ರಕ್ಷಣಾ ನೀತಿಗಳ ಪರಿಣಾಮವಾಗಿ ವಾಜಪೇಯಿ ಸರ್ಕಾರವು ಸಹಾ ಭಯೋತ್ಪಾದಕ ಚಟುವಟಿಕೆಗಳಿಗೆ ನೀಡಲಾಗುತ್ತಿರುವ ಗಡಿಯಾಚೆಗಿನ ಬೆಂಬಲಕ್ಕೆ ಮಾತ್ರ ಒತ್ತು ನೀಡುತ್ತಿದೆ. ಅದರಲ್ಲೇ ಮುಳುಗಿರುವ ಸರ್ಕಾರ ದೇಶದೊಳಗೆ ಪ್ರಮುಖವಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ವಹಿಸಬೇಕಾದ ರಾಜಕೀಯ ಕ್ರಮಗಳನ್ನು ಉದ್ದೇಶಪೂರ್ವಕವಾಗಿ ವಹಿಸದೆ ನಿರಾಕರಿಸುತ್ತಿದೆ. ಪಾಕ್ ಕೇಂದ್ರಿತ ತನ್ನ ನೀತಿಯ ರಾಜಕೀಯ ಲಾಭಕ್ಕಾಗಿ ಅಂತರಾಷ್ಟ್ರೀಯ ಬೆಂಬಲವನ್ನು ಪ್ರಮುಖವಾಗಿ ಸಾಮ್ರಾಜ್ಯಶಾಹಿ ಅಮೇರಿಕಾದ ಬೆಂಬಲ ಪಡೆಯಲು ಮುಂದಾಗಿದೆ. ಪಾಕಿಸ್ತಾನವನ್ನು ಭಯೋತ್ಪಾದಕ ರಾಷ್ಟ್ರವೆಂದು ಘೋಷಿಸಬೇಕೆಂದು ಅಮೇರಿಕಾ ಮತ್ತವರ ಮಿತ್ರ ರಾಷ್ಟ್ರಗಳನ್ನು ವಾಜಪೇಯಿ ಸರ್ಕಾರ ವರ್ಷಗಳಿಂದ ಕೋರುತ್ತಾ ಬಂದಿದೆ. ಆದರೆ ಅಮೇರಿಕಾವು ನದಿಮಾರ್ಗ ಕಗ್ಗೊಲೆಗಳ ನಂತರ ಪಾಕ್‌ನೊಂದಿಗೆ ಮಾತುಕತೆ ನಡೆಸುವಂತೆ ಭಾರತವನ್ನು ಕೇಳಿದೆ.

ಪಾಕಿಸ್ತಾನ-ಅಮೇರಿಕಾದ ಮಿತ್ರ ಆದರೆ.....

ಅಮೇರಿಕಾವು ಏಷ್ಯಾದ ಈ ಭಾಗದಲ್ಲಿ ತನ್ನ ನಿಕಟ ರಾಷ್ಟ್ರವನ್ನಾಗಿ ಪಾಕಿಸ್ತಾನವನ್ನು ಆಯ್ಕೆ ಮಾಡಿಕೊಂಡಿದೆ ಮಾತ್ರವಲ್ಲ ಇತ್ತೀಚೆಗೆ ಪಾಕ್ ಮೇಲಿನ ತನ್ನ ಎಲ್ಲಾ ನಿರ್ಬಂಧಗಳನ್ನು ತೆಗೆದು ಹಾಕಿದೆ ಹಾಗೂ ಭಾರತಕ್ಕೆ ತಾನು ಕೊಡುತ್ತೇನೆ ಎಂದು ಹೇಳಿರುವ ಸಹಾಯಕ್ಕಿಂತ ಹತ್ತು ಪಟ್ಟು ಹೆಚ್ಚು ಅನುದಾನವನ್ನು ಪಾಕ್‌ಗೆ ನೀಡಿದೆ. ಪಾಕ್ ಸ್ಥಾನವನ್ನು ಭಾರತಕ್ಕೆ ಪಡೆದುಕೊಂಡು, ಅಮೇರಿಕಾದ ಕಿರಿಯ ಪಾಲುದಾರನಾಗುವ ಉದ್ದೇಶದೊಂದಿಗೆ,



ಅಂತರಾಷ್ಟ್ರೀಯ ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಇರಾಕ್ ಮೇಲೆ ನಡೆಸಿರುವ ಏಕಪಕ್ಷೀಯ ದಾಳಿಯನ್ನು ಖಂಡಿಸಲು ಸಹಾ ವಾಜಪೇಯಿ ಸರ್ಕಾರ ಮುಂದಾಗಿಲ್ಲ.


ಆಗಲೇಬೇಕಾದದ್ದು

ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದಂತೆ ಸಧ್ಯ ಆಗಬೇಕಿರುವ ಕ್ರಮ ದ್ವಿಮುಖವಾದದ್ದು. ಒಂದೆಡೆ ಪಾಕ್ ಪ್ರಾಯೋಜಿತ ಗಡಿಯಾಚೆಗಿನ ಭಯೋತ್ಪಾದನೆಯನ್ನು ಹಿಮ್ಮೆಟ್ಟಿಸುವ ದೃಢ ಕ್ರಮವಹಿಸಬೇಕು ಅಂತೆಯೆ ಇನ್ನೊಂದೆಡೆ "ಸಾಂತ್ವನದ" ಕ್ರಮಗಳನ್ನು ಮುಂದುವರಿಸುತ್ತಲೇ, ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ರಾಜಕೀಯ ಮಾತುಕತೆಯನ್ನು ಮುಂದುವರಿಸಬೇಕಲ್ಲದೆ ವಿಧಿ 370 ನ್ನು ಸ್ವಾಯತ್ತತೆ ನೀಡುವ ನಿಟ್ಟಿನಲ್ಲಿ ಗಂಭೀರವಾಗಿ ಜಾರಿಗೊಳಿಸಬೇಕು.

ಫೋನು 'ದುನಿಯ

ಟೆಲಿಕಾಂ ದರಗಳ ಸ

ಟೆಲಿಕಾಂ ದರಗಳ ಸಮರ ನಡೆಯುತ್ತಿದೆ. ಮೊಬೈಲ್ ಫೋನು ಕಂಪನಿ ಮತ್ತು ಬಿಎಸ್‌ಎನ್‌ಎಲ್/ಎಂಟಿಎನ್‌ಎಲ್ ಗಳ ನಡುವೆ. ಭಾರತಿ/ಟಾಟಾ ಮತ್ತು ಬಿಎಸ್‌ಎನ್‌ಎಲ್‌ಗಳ ನಡುವೆ. ರಿಲೆಯನ್ಸ್ ಮತ್ತು ಇತರ ಎಲ್ಲಾ ಕಂಪನಿಗಳ ನಡುವೆ. ಈ ಸಮರದ ಫಲವಾಗಿ ದರಗಳು ಇಳಿಯುತ್ತಿವೆ. ಫೋನು ಗ್ರಾಹಕರಿಗೆ ಸುಗ್ಗಿಯೋ ಸುಗ್ಗಿ. ಆಯ್ಕೆ ಹೆಚ್ಚಾಗಿದೆ. ಗುಣಮಟ್ಟ ಉತ್ತಮವಾಗಿದೆ. ಬೆಲೆಯು ಇಳಿಯುತ್ತಿದೆ. ಟೆಲಿಕಾಂ ಸೇವಾ ಕ್ಷೇತ್ರ ವೇಗವಾಗಿ ಬೆಳೆಯುತ್ತಿದೆ. ಇದು ಕಳೆದ ಹತ್ತು ವರ್ಷಗಳ ಉದಾರೀಕರಣದ ನೀತಿಗಳ ಉತ್ತಮ ಫಲ - ಎಂದು ಟೆಲಿಕಾಂ ದರಗಳ ಸಮರದ ಬಗ್ಗೆ ಕೆಲವರ 'ವಿಶ್ಲೇಷಣೆ'. ಟೆಲಿಕಾಂ ದರಗಳ ಸಮರದಲ್ಲಿ ಗೆದ್ದವರು ಸಾಮಾನ್ಯ ಗ್ರಾಹಕರು ಖಂಡಿತಾ ಅಲ್ಲ. ಬರಿಗಣ್ಣಿಗೆ ಕಾಣುವ ಯಾವುದೂ ನಿಜವಲ್ಲ ಇಲ್ಲಿ. ಈ ಫೋನು 'ದುನಿಯಾ' ಯಾರ 'ಮುಟ್ಟಿ'ಯಲ್ಲಿ ಎಂಬ ಬಗ್ಗೆ ಸ್ಪರ್ಧೆ ನಡೆದಿದೆ. ಶ್ರೀಮಂತ ಗ್ರಾಹಕರು ಬಡ ಗ್ರಾಹಕರಿಗೆ ಸಬ್ಸಿಡಿ ಒದಗಿಸುವ ಬದಲು - ತಿರುವು ಮುರುವಾಗಿದೆ. ಟೆಲಿಕಾಂ ಕ್ಷೇತ್ರದ ಬೆಳವಣಿಗೆಗಳು ಆರೋಗ್ಯಕರವಾಗಿಲ್ಲ ಎಂದು ವಾದಿಸುತ್ತದೆ ಈ ಲೇಖನ.



ಶರತ್‌ಚಂದ್ರ

ಕಳೆದ ನಾಲ್ಕೈದು ವರ್ಷಗಳಲ್ಲಿ ಟೆಲಿಕಾಂ ಕ್ಷೇತ್ರದಲ್ಲಿ ಖಾಸಗಿ ಕಂಪನಿಗಳ ಪ್ರವೇಶ ಮತ್ತು ಪೈಪೋಟಿ ಆರಂಭವಾದದ್ದರಿಂದ ದರಗಳು ಇಳಿದಿವೆ - ಎನ್ನಲಾಗುತ್ತಿದೆ. ನಿಜ ಮೊಬೈಲ್ ಫೋನುಗಳ ಕರೆಗಳ ದರ ಇಳಿದಿದೆ. ಆರಂಭವಾದಾಗ 15 ರೂ. (ಪ್ರತಿ ಮಿನಿಟಿಗೆ) ಕ್ಕಿಂತಲೂ ಹೆಚ್ಚಿದ್ದ ದರ ಈಗ 2 ರೂ. ಗೆ ಇಳಿದಿದೆ. ದೂರ ಕರೆ (STD) ಯ ದರವೂ ಅರ್ಧಕ್ಕಿಂತಲೂ ಕಡಿಮೆಯಾಗಿದೆ. ಮೊಬೈಲ್ ಫೋನು ಸೇವೆಯಂತೂ ಕೇಳಿದ ಕೂಡಲೇ (On demand) ಲಭ್ಯವಿದೆ.

ಬಿಎಸ್‌ಎನ್‌ಎಲ್(BSNL) ಒಳಬರುವ ಕರೆಗಳಿಗೆ ಮೊಬೈಲ್ ಫೋನು ದರವನ್ನು ತೆಗೆದು ಹಾಕಿ ಇನ್ನೊಂದು ಪೈಪೋಟಿ ಆರಂಭಿಸಿದೆ. ರಿಲೆಯನ್ಸ್ ಮೊಬೈಲ್ ಮತ್ತು ದೂರಕರೆ ಎರಡರಲ್ಲೂ ಇನ್ನಷ್ಟು ಕಡಿಮೆ ದರ ಪ್ರಕಟಿಸಿದೆ.

ಮೂಲಭೂತ ಕನೆಕ್ಷನ್‌ನ ಕನಿಷ್ಟ ವೆಚ್ಚ ದುಬಾರಿ


ಆದರೆ ಇದು ಪೂರ್ಣ ಚಿತ್ರವಲ್ಲ. ಇದೇ ಅವಧಿಯಲ್ಲಿ ಫೋನು ಬಾಡಿಗೆ, ಕನಿಷ್ಟ ದರ ಪ್ರತಿ ಕರೆಯ ದರ - ಎಲ್ಲಾ ದುಬಾರಿಯಾಗಿವೆ. ಕನಿಷ್ಟ ದರಕ್ಕೆ ಇರುವ ಉಚಿತ ಕರೆಗಳನ್ನು ಕಡಿಮೆ ಮಾಡಲಾಗಿದೆ. ಟೆಲಿಫೋನು ಗ್ರಾಹಕರಲ್ಲಿ ಅತ್ಯಂತ ಕೆಳಗಿನ ಸ್ತರದಲ್ಲಿರುವವರಿಗೆ ಇದೇ ಅವಧಿಯಲ್ಲಿ ಫೋನು ಸೇವೆ ಮೂರು ಪಟ್ಟಿನಷ್ಟು ದುಬಾರಿಯಾಗಿದೆ. ಇದರಿಂದ ಹೊಸ ಕನೆಕ್ಷನ್‌ಗಳಿಗೆ ಬೇಡಿಕೆ ಕಡಿಮೆಯಾಗುವ ಪರಿಸ್ಥಿತಿ ಬಂದಿದೆ. ಕಳೆದ ಒಂದು ವರ್ಷದಲ್ಲಿ ಫೋನು ಕನೆಕ್ಷನ್ ಹಿಂತಿರುಗಿಸುವವರ ಸಂಖ್ಯೆ ಹೆಚ್ಚಿದೆ. ಫೋನು ಮಾರುಕಟ್ಟೆಯಲ್ಲಿ ಅತ್ಯಂತ ಕೆಳಸ್ತರದಲ್ಲಿರುವ ಬಹುಸಂಖ್ಯಾತರು ಸೀಮಿತ ಸಂಖ್ಯೆಯಲ್ಲಿ ಸ್ಥಳೀಯ ಕರೆ ಮಾತ್ರ ಮಾಡುವ (ಅದರಲ್ಲೂ ಕನಿಷ್ಟ ದರದೊಳಗೆ ಬರುವ ಉಚಿತಕರೆಗಳಷ್ಟು ಮಾತ್ರ) ಮತ್ತು ಹೆಚ್ಚಿನಕರೆಗಳನ್ನು ಸ್ವೀಕರಿಸಲು ಫೋನು ಬಳಸುವವರು. ಅವರಿಗೆ ದೂರದ ಕರೆಗಳಲ್ಲಿ ಮತ್ತು ಮೊಬೈಲ್ ಫೋನುಗಳಲ್ಲಿ ಆದ ಕಡಿತದ ಯಾವ ಪ್ರಯೋಜನವೂ ದಕ್ಕುವುದಿಲ್ಲ. ಇತ್ತೀಚೆಗೆ ನಡೆದ ಟೆಲಿಕಾಂ ದರದ ಮತ್ತು ಇದರ ಸಮರಗಳು, ಇವರಿಗೆ ಪ್ರಯೋಜನಕ್ಕಿಂತ ಹೆಚ್ಚು ತೊಂದರೆಯನ್ನೇ ಕೊಟ್ಟಿವೆ.

ಈ ಟೆಲಿಕಾಂ ಸಮರ ಆರಂಭವಾಗಿದ್ದು ಟ್ರಾಯ್ (TRAI-Telcom Regulation Authority Of India - ಟೆಲಿಕಾಂ ಕ್ಷೇತ್ರದಲ್ಲಿ ನಿಬಂಧನೆಗಳನ್ನು ವಿಧಿಸುವ ಸ್ವತಂತ್ರ ಸಂಘಟನೆ) ಟೆಲಿಕಾಂ ಮೂಲಭೂತ ಸೇವೆ ಒದಗಿಸುವ ಲೈಸೆನ್ಸ್ ಉಳ್ಳವರು ತಂತಿ-ರಹಿತ ರೇಡಿಯೋ ಆಧಾರಿತ ಕನೆಕ್ಷನ್‌ಗಳನ್ನೂ, ಕೊಡಬಹುದು - ಎಂಬ ಬಗ್ಗೆ ತನ್ನ ನಿರ್ಣಯ ಕೊಟ್ಟಾಗ ಇದನ್ನು WILL (Wirless In Local Loop) ಅಥವಾ ವಿಲ್ ಎಂದು ಕರೆಯುತ್ತಾರೆ. 'ವಿಲ್'ನ್ನು ಮೊಬೈಲ್ ಫೋನು ಸೇವೆ ಲೈಸೆನ್ಸ್ ಪಡೆದು ಆ ಸೇವೆ ಒದಗಿಸುತ್ತಿರುವ ಕಂಪನಿಗಳು ವಿರೋಧಿಸಿದವು. ಅವರ ವಾದಗಳನ್ನು ಟ್ರಾಯ್ ಒಪ್ಪದಿದ್ದಾಗ TDSAT ಎಂಬ ಟೆಲಿಕಾಂ ಟ್ರಿಬ್ಯೂನಲ್‌ಗೂ, ಆ ಮೇಲೆ ಕೋರ್ಟ್‌ನ ಕಟ್ಟೆಯನ್ನು ಹತ್ತಿದರು. ಟ್ರಿಬ್ಯುನಲ್ ಮತ್ತು ಸುಪ್ರೀಂ ಕೋರ್ಟು ಎರಡೂ 'ಟ್ರಾಯ್' ನಿರ್ಧಾರವನ್ನು ಅನುಮೋದಿಸಿದವು. ಕೋರ್ಟು ಪೈಪೋಟಿಯ ನೆಲೆ ನ್ಯಾಯಯುತವಾಗಿರುವಂತೆ ನೋಡಲು ಟ್ರಿಬ್ಯುನಲ್‌ಗೆ ಆದೇಶ ನೀಡಿತು. ಮೂಲಭೂತ ಸೇವೆ ಲೈಸೆನ್ಸ್ ಇರುವವರು ಮೊಬೈಲ್ ತಂತ್ರಜ್ಞಾನ ಬಳಸಲೇಬಾರದು ಎಂಬ ವಾದವನ್ನು ತಳ್ಳಿಹಾಕಿದರೂ, ಈ ಎರಡೂ ರೀತಿಯ ಸೇವಾ ಲೈಸೆನ್ಸ್ ಪ್ರಕಾರ ವಿಧಿಸಬಹುದಾದ ದರ ಮತ್ತು ಪರಸ್ಪರ ಸಂಪರ್ಕಕ್ಕೆ ವಿಧಿಸಬಹುದಾದ ದರ ಮತ್ತು ವಿಧಾನದ ಬಗ್ಗೆ ನ್ಯಾಯಯುತ ನಿರ್ಣಯಕ್ಕೆ ಬರಲು ಟ್ರಿಬ್ಯುನಲ್ ಮತ್ತು ಟ್ರಾಯ್ ಎರಡೂ ಕೆಲಸ ಆರಂಭಿಸಿದ್ದು, ಈ ತಿಂಗಳೊಳಗೆ ನಿರ್ಧಾರ ಪ್ರಕಟಿಸಲು ಯೋಜಿಸಿದ್ದವು.

ಮೊಬೈಲ್ ಕಂಪನಿಗಳ 'ಗೂಂಡಾಗಿರಿ'

ಆದರೆ ಮೊಬೈಲ್ ಕಂಪನಿಗಳು ಅದಕ್ಕೆ ಕಾಯದೆ, 'ಗೂಂಡಾಗಿರಿ'ಯ ರೀತಿಯ ಕಾರ್ಯಾಚರಣೆ ಆರಂಭಿಸಿದವು. ಎಂಟಿಎಸ್‌ಎಲ್, ರಿಲೆಯನ್ಸ್ ಮತ್ತು ಟಾಟಾಗಳಿಂದ ಬರುವ ಕರೆಗಳನ್ನು ಸ್ವೀಕರಿಸುವುದನ್ನು ನಿಲ್ಲಿಸಿದವು. ಇದಕ್ಕೆ ವಿರುದ್ಧವಾಗಿ ಎಂಟಿಎನ್‌ಎಲ್ (ಮಂತ್ರಿ ಪ್ರಮೋದ್ ಮಹಾಜನ್ ಕುಮ್ಮಕ್ಕಿನಿಂದ ಅಂತ ಸುದ್ದಿ) ಮೊಬೈಲ್ ಕಂಪನಿಗಳ ಕರೆಗಳನ್ನು ಸ್ವೀಕರಿಸುವುದನ್ನು ನಿಲ್ಲಿಸಿದವು. ಈಗ 'ಬಿಕ್ಕಟ್ಟು'ನ್ನು ಪರಿಹರಿಸಲು ಪ್ರಮೋದ್ ಮಹಾಜನ್, ಮೊಬೈಲ್ ಕಂಪನಿಗಳು, ಮೂಲಭೂತ ಸೇವೆ ಕಂಪನಿಗಳು ಮತ್ತು 'ಟ್ರಾಯ್' ಜಂಟಿ ಸಭೆಯನ್ನು ಕರೆದು ಹಲವು ಪ್ರಮುಖ ವಿಷಯಗಳ ಬಗ್ಗೆ ನಿರ್ಧಾರ ಕೈಗೊಂಡರು. ಇದರಲ್ಲಿ ದರಗಳು ಇತ್ಯಾದಿ ಸೇರಿವೆ. ಅದರ ಜತೆಗೆ ಬಿಎಸ್‌ಎನ್‌ಎಲ್/ಎಂಟಿಎನ್ ಎಲ್ ಗೆ ಮತ್ತು ಅದರ ಕೆಳದರ್ಜೆಯ ಗ್ರಾಹಕರಿಗೆ ಮಾರಕವಾಗಬಹುದಾದ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಮೂಲಭೂತ ಸೇವೆಯನ್ನು ಈ ನಿರ್ಧಾರ ದುಬಾರಿ ಮಾಡಿದೆ. ಈ ಸಮರ, ಬಿಕ್ಕಟ್ಟು ಮತ್ತು ಮಂತ್ರಿಗಳಿಂದ ಅದರ ಪರಿಹಾರ ಎಲ್ಲವೂ 1994 ರ ಟೆಲಿಕಾಂ ನೀತಿಯ ಎಲ್ಲಾ ಸೂತ್ರಗಳನ್ನು, ಉದ್ದೇಶಗಳನ್ನು ಗಾಳಿಗೆ ತೂರಿದಂತಾಗಿದೆ.

ನಿಬಂಧನೆಗಳಿಗೆ ತಿಲಾಂಜಲಿ



ಮೊದಲನೆಯದಾಗಿ ಯಾವುದೇ ಕಂಪನಿಯ 'ಗುಂಡಾಗಿರಿ'ಯ ಪ್ರದರ್ಶನ ಮತ್ತ ಕಾನೂನು ಉಲ್ಲಂಘಿಸಿ ತನ್ನ ಕೈಗೆ ತೆಗೆದುಕೊಳ್ಳುವ ಉದ್ಧಟತನವನ್ನು ಸಹಿಸಿದ್ದು ಮಾತ್ರವಲ್ಲ, ಅದಕ್ಕೆ ಬಹುಮಾನ ಕೊಟ್ಟಂತಾಗಿದೆ. ಇವುಗಳ ಮೇಲೆ ನಿಬಂಧನೆ ಹಾಕಬೇಕಾಗಿರುವ 'ಟ್ರಾಯ್' (TRAI) ವಿವಾದಗಳನ್ನು ಪರಿಹರಿಸಲು ಇವರು TDSA ಎಂಬ ಟ್ರಿಬ್ಯುನಲ್ - ಇವೆಲ್ಲದರ ಸ್ವಾತಂತ್ರ್ಯ ಮತ್ತು ಹಕ್ಕುಗಳ ಮೊಟಕು ಮಾಡಿದಂತಾಗಿದೆ ಸರ್ಕಾರ ಅದರಲ್ಲಿ ಅನಗತ್ಯ ಮಧ್ಯಪ್ರವೇಶ ಮಾಡಿದಂತಾಗಿದೆ. ಬಹು - ಕಂಪನಿ ಟೆಲಿಕಾಂ ಸೇವಾ ವ್ಯವಸ್ಥೆಯ ಮುಂದೆಯೂ ನಿರ್ದಿಷ್ಟ ನಿಬಂಧನೆಗಳನ್ನು ವಿಧಿಸುವ ಕೆಲಸ ಮಾಡಬೇಕಾದ ಟ್ರಾಯ್, ಟ್ರಿಬ್ಯುನಲ್‌ಗಳಿಗಿರಬೇಕಾದ ಗೌರವ ತೊಟ್ಟಿಗೆಸೆದು ಅರಾಜಕತೆಗೆ ಹಾದಿ ಮಾಡಿಕೊಟ್ಟಂತಾಗಿದೆ.

ಮಹಾಜನ್ 'ರಾಜಕೀಯ' ಮಧ್ಯಪ್ರವೇಶ

ಟ್ರಾಯ್ ಮತ್ತು ಟ್ರಿಬ್ಯುನಲ್‌ಗಳು ಯಾವುದೇ ರಾಜಕೀಯ ಒತ್ತಡ ಇಲ್ಲದೆ ಎಲ 'ಪಕ್ಷ'ಗಳ ಅಹವಾಲು ಕೇಳಿ ಸ್ವತಂತ್ರವಾಗಿ ತೆಗೆದುಕೊಳ್ಳಬೇಕಾಗಿದ್ದ ನಿರ್ಧಾರದಲ್ಲಿ ರಾಜಕೀಯ ಮಧ್ಯಪ್ರವೇಶ ಮಾಡಿದಂತಾಗಿದ ರಿಲೆಯನ್ಸ್‌ಗೆ ಅನುಕೂಲ ಮಾಡಿಕೊಡುವ, ಮೊಬೈಲ್ ಕಂಪನಿಗಳನ್ನು ಓಲೈಸುವ, ಅದೇ

ಈ ಸಮರದ ನಡುವೆ 1994 ರ ಟೆಲಿಕಾ ನೀತಿಯ ಮೂಲ ಉದ್ದೇಶಗಳನ ಪೂರ್ತಿಯಾಗಿ ಮರೆತು ಬಿಡಲಾಗಿದೆ. ಟೆಲಿಕಾ ಖಾಸಗೀಕರಣ ಮತ್ತು ಅಲ್ಲಿಗೆ ಪ್ರವೇಶ ಮಾಡು ಖಾಸಗಿ ಬಂಡವಾಳಕ್ಕೆ ಅತ್ಯಂತ ಹೆಚ್ಚಿನ ಲಾ ಒದಗಿಸುವುದಷ್ಟೇ ಸರ್ಕಾರದ ಎಲ ಮಧ್ಯಪ್ರವೇಶಗಳ ಹಿಂದಿರುವ ನೀ ಎನ್ನಬಹುದಾದಷ್ಟು ಪರಿಸ್ಥಿತಿ ಕೆಟ್ಟಿದೆ. ಮೊಬೈ ಮತ್ತು ಪೇಜರ್ ಸೇವೆಯನ್ನು ಖಾಸಗಿ ಮೀಸಲಿಡುವ ಮೂಲಕ ಇದ ಆರಂಭವಾಯಿತು. ಅಲ್ಲಿ ಪ್ರವೇಶಿಸಿದ ಖಾಸ ಬಂಡವಾಳಕ್ಕೆ ಅತ್ಯಂತ ಹೆಚ್ಚಿನ ಲಾಭ ಬರುವ ದರಗಳನ್ನು ನಿಗದಿಗೊಳಿಸಲಾಯಿತು. ಮೊಬೈ ಸೇವೆಯ ದರಕ್ಕೂ ಫೋನ್ ಲೈನಿನ ಸೇವೆ ದರಕ್ಕೂ ಬಹಳ ವರ್ಷಗಳ ಕಾಲ ಆರು-ಏ ಪಟ್ಟಿಗಿಂತಲೂ ಹೆಚ್ಚು. ನಿಗದಿತ ದರದಿಂದ ಭ ಲಾಭ ಹೊಡೆದ ಕಂಪನಿಗಳು,ಈಗ ಅದ ಕಳೆದುಕೊಳ್ಳಲು ಇಷ್ಟವಿಲ್ಲದೆ ಅರ್ಥವಿಲ ದಾಂಧಲೆ ಮಾಡುತ್ತಿದ್ದಾರೆ. ಈ ನಡು ಲಾಭದಾಯಕ ದೂರ(ರಾಷ್ಟ್ರೀಯ ಅಂತರ್ರಾಷ್ಟ್ರೀಯ) ಸೇವೆಗಳ ಖಾಸಗೀಕರಿಸಲಾಯಿತು. ಸಾರ್ವಜನಿಕ ಕ್ಷೇ ವಿಎಸ್‌ಎನ್‌ಎಲ್ ನ್ನು ಟಾಟಾಗ ಮಾರಲಾಯಿತು. ಭಾರತಿ ಮುಂತಾದ ಹ ಕಂಪನಿಗಳು ಈ ಕ್ಷೇತ್ರ ಪ್ರವೇಶಿಸಿದವು. ಅ ಹೆಚ್ಚಿನ ಲಾಭ ಮಾಡಿಕೊಡುವ ದೃಷ್ಟಿಯಿ ದೂರ ಕರೆಗಳ ದರವನ್ನು ಇಳಿಸಲಾಯಿ

...ರ 'ಮುಟ್ಟಿ'ಯಲ್ಲಿ ?

...ತೆ-ಯಾರು ಗೆದ್ದವರು?

ಸಮಯದಲ್ಲಿ ಸಾರ್ವಜನಿಕ ಕ್ಷೇತ್ರದ ಎಂಟಿಎನ್‌ಎಲ್ / ಬಿಎಸ್‌ಎನ್‌ಎಲ್ (MTNL / BSNL) ಮತ್ತು ಸಾಮಾನ್ಯ ಬಳಕೆದಾರರ ಹಿತಾಸಕ್ತಿಗಳನ್ನು ಬಲಿಕೊಡುವ ಆಪಾದನೆಗಳು ಪ್ರಮೋದ್ ಮಹಾಜನ್ ಮೇಲೆ ಬಂದಿವೆ.

ಈ 'ಬಿಕ್ಕಟು ಪರಿಹಾರ'ದ ನಂತರವೂ ಸಮರ ನಿಂತಿಲ್ಲ. ಮೊಬೈಲ್ ಕಂಪನಿಗಳು ರಿಲೆಯನ್ಸ್‌ನ ಮೇಲೆ ಅದರ ಲೈಸೆನ್ಸ್ ಶರತ್ತುಗಳನ್ನು ಉಲ್ಲಂಘಿಸಿದ ಆಪಾದನೆ ಮೇಲೆ ಕೋರ್ಟಿಗೆ ಹೋಗಿವೆ. ರಿಲೆಯನ್ಸ್ ಆಯಾ 'ಎಕ್ಸ್‌ಚೇಂಜ್' ಪ್ರದೇಶಕ್ಕೆ ಸೀಮಿತವಾಗಿರಬೇಕು. ಅಲ್ಲದೆ SMS, ವಿಡಿಯೋ, ಇಂಟರ್‌ನೆಟ್ ಮುಂತಾದ ಮೌಲ್ಯವರ್ಧಿತ ಸೇವೆಗಳನ್ನು ಕೊಡಲು ಲೈಸೆನ್ಸ್‌ನಲ್ಲಿ ಅವಕಾಶವಿಲ್ಲ. ರಿಲೆಯನ್ಸ್ ಮೇಲೆ 'ಟ್ರಾಯ್' ಈ ಉಲ್ಲಂಘನೆ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿವೆ.

ಟೆಲಿಕಾಂ ನೀತಿಗೆ ತಿಲಾಂಜಲಿ

1994, 1999 ರ ಟೆಲಿಕಾಂ ನೀತಿಗಳಲ್ಲಿ ಖಾಸಗೀಕರಣವಲ್ಲದೆ ಹಲವು ಸ್ಪಷ್ಟ ಗುರಿಗಳನ್ನು ಹೊಂದಲಾಗಿತ್ತು. ಈ ಟೆಲಿಕಾಂ ಸುಗ್ಗಿ ಮತ್ತು ಸಮರಗಳ ನಡುವೆ ಆ ಗುರಿಗಳ ಗತಿ ಏನಾಗಿದೆ ಎಂದು ನೋಡೋಣ.

ಟೆಲಿಕಾಂ ಜಾಲವನ್ನು ವ್ಯಾಪಕವಾಗಿ ದೇಶದ ಆರ್ಥಿಕದ ಎಲ್ಲಾ ಭಾಗಗಳಿಗೆ, ಜನಸಂಖ್ಯೆಯ ಹೆಚ್ಚಿನ ಭಾಗಗಳಿಗೆ ವಿಸ್ತರಿಸುವುದು. ಆರ್ಥಿಕಕ್ಕೆ ಕುಮ್ಮಕ್ಕು ಕೊಡುವ ಆಧುನಿಕ ಸೇವೆಗಳನ್ನು ಒದಗಿಸುವುದು ನೀತಿಯ ಭಾಗವಾಗಿತ್ತು.

2005 ರ ಹೊತ್ತಿಗೆ ಫೋನು ಸಾಂದ್ರತೆ (ನೂರು ಜನಗಳಿಗೆ ಫೋನುಗಳ ಸಂಖ್ಯೆ)ಯನ್ನು 7 ಕ್ಕೇರಿಸುವುದು, 2010ರ ಹೊತ್ತಿಗೆ ಅದನ್ನು 15 ಕ್ಕೇರಿಸುವುದು 2002 ರ ಹೊತ್ತಿಗೆ ಎಲ್ಲಾ 6 ಲಕ್ಷ ಹಳ್ಳಿಗಳಲ್ಲಿ ಕನಿಷ್ಠ ಒಂದು ಸಾರ್ವಜನಿಕ ಫೋನು ಇರುವಂತೆ ಮಾಡುವುದು, ಗ್ರಾಮೀಣ ಫೋನು ಸಾಂದ್ರತೆಯನ್ನು 2010 ರ ಹೊತ್ತಿಗೆ 4 ಕ್ಕೇರಿಸುವುದು - ಇವು 1999 ರ ಟೆಲಿಕಾಂ ನೀತಿಯ ಗುರಿಗಳಾಗಿದ್ದವು. 2002 ರ ಕೊನೆ ಹೊತ್ತಿಗೆ ಫೋನು ಸಾಂದ್ರತೆ ಸುಮಾರು 5 ಕ್ಕೇರಿದೆ.(ಫೋನು ಲೈನ್ ಮತ್ತು ಮೊಬೈಲ್ ಎರಡು ಸೇರಿ). ಆದರೆ ಅದರ ಭೌಗೋಳಿಕ ಮತ್ತು ಜನಸಂಖ್ಯೆಯಲ್ಲಿ ಅದರ ವಿಸ್ತಾರ ಆರೋಗ್ಯಕರವಾಗಿಲ್ಲ. ಈ ಎಲ್ಲಾ ಫೋನು ಸಾಂದ್ರತೆ ಹೆಚ್ಚಳ ಕೆಲವು ಮಹಾನಗರಗಳಲ್ಲಿ ಮತ್ತು ಕೆಲವೇ ರಾಜ್ಯಗಳಲ್ಲಿ ಕೇಂದ್ರೀಕೃತವಾಗಿವೆ. ಈ ವಿಸ್ತಾರದ ಸಿಂಹಪಾಲು ಮೊಬೈಲ್ ಫೋನಿನದ್ದು. ಮೊಬೈಲ್ ಫೋನಿನ ವಿಸ್ತಾರ ನಮ್ಮಂತಹ ದೇಶದಲ್ಲಿ ಫೋನು ಸಾಂದ್ರತೆಗೆ ಸೇರಿಸಬಹುದೆ ಎಂಬುದೇ ಸ್ವತಂತ್ರವೀಕ್ಷಕರನ್ನು ಕಾಡುತ್ತಿದೆ. ಕಳೆದ 5 ವರ್ಷಗಳಲ್ಲಿ ಫೋನು ಲೈನ್‌ಗಳು 3 ಪಟ್ಟು ಹೆಚ್ಚಿದರೆ ಮೊಬೈಲ್ ಫೋನುಗಳ ಸಂಖ್ಯೆ 30 ಪಟ್ಟು ಹೆಚ್ಚಿದೆ. ಆದರೆ ಒಂದು ಸ್ವತಂತ್ರ ಸಮೀಕ್ಷೆ ಪ್ರಕಾರ ಮುಕ್ಕಾಲು ಭಾಗ ಮೊಬೈಲು ಫೋನು ಗ್ರಾಹಕರು ಈಗಾಗಲೇ ಫೋನು ಲೈನ್ ಹೊಂದಿರುವುದು, ಅಥವಾ ಅಂತಹ ಕುಟುಂಬಕ್ಕೆ ಸೇರಿರುವ ಹಿನ್ನೆಲೆಯಲ್ಲಿ ಫೋನು ಸಾಂದ್ರತೆ 5 ಎಂದು ಹೇಳಬಹುದೆ ಎಂಬ ಪ್ರಶ್ನೆ ಎಲ್ಲರನ್ನು ಕಾಡುತ್ತಿದೆ. ಮೊಬೈಲ್ ಫೋನುಗಳ ಶೇಕಡಾ 80 ನಾಲ್ಕು ಮಹಾನಗರಗಳು, ಮತ್ತು ಆರು ರಾಜ್ಯಗಳ (ಮಹಾರಾಷ್ಟ್ರ, ಗುಜರಾತ್, ನಾಲ್ಕು ದಕ್ಷಿಣ ರಾಜ್ಯಗಳು) ನಗರಗಲ್ಲಿ ಕೇಂದ್ರೀಕೃತವಾಗಿವೆ. ಇಂತಹ ಟೆಲಿಕಾಂ ವಿಸ್ತಾರ ಕಂಪನಿಗಳಿಗೆ ಲಾಭ ಒದಗಿಸಬಹುದು. ಆದರೆ ಆರ್ಥಿಕ ಬೆಳವಣಿಗೆ ದೃಷ್ಟಿಯಿಂದ ಯಾವುದೇ ಪ್ರಯೋಜನ ಕೊಡುವುದಿಲ್ಲ. ಹಾನಿಕಾರಿಯೂ ಆಗಿದೆ ಎನ್ನಬಹುದು.

ಇನ್ನು ಎಲ್ಲಾ ಮೂಲಭೂತ ಸೇವಾ ಲೈಸೆನ್ಸ್ ಹೊಂದಿರುವವರಿಗೆ ನಿಬಂಧನೆಗಳ ಪ್ರಕಾರ ಈ ಬಗ್ಗೆ ಶರತ್ತುಗಳಿದ್ದರೂ ಇನ್ನೂ 1 ಲಕ್ಷ ಹಳ್ಳಿಗಳು ಒಂದೇಫೋನು ಇಲ್ಲದೆ ಕೂತಿವೆ. ಗ್ರಾಮೀಣ ಫೋನು ಸಾಂದ್ರತೆ 1 ರಲ್ಲಿಕೂತಿದೆ.


ಮುಕೇಶ್ ಅಂಬಾನಿ ಮತ್ತು ಪ್ರಮೋದ್ ಮಹಾಜನ್

ಟೆಲಿಕಾಂ ವಿಸ್ತಾರ ಆರೋಗ್ಯಕರವಲ್ಲ


ಕಳೆದ 4-5 ವರ್ಷಗಳಲ್ಲಿ ಆಗಿರುವ ಟೆಲಿಕಾಂ ವಿಸ್ತಾರ ಆರೋಗ್ಯಕರವಾಗಿಲ್ಲ ಎನ್ನುವುದು ಸ್ಪಷ್ಟ. ಅದೇ ನಿಜವಾದ ಟೆಲಿಕಾಂ ವಿಸ್ತಾರಕ್ಕೆ ಮಾರಕವೂ ಆಗುವಂತಹದು ಎಂಬುದು ಅಷ್ಟೇ ಸ್ಪಷ್ಟವಲ್ಲವೇನೋ. 1994 ಮತ್ತು 1995 ರ ಟೆಲಿಕಾಂ ನೀತಿಯ ಮುಖ್ಯ ವಾದ, ಟೆಲಿಕಾಂ ವಿಸ್ತಾರಕ್ಕೆ ಬೇಕಾದ ಬಂಡವಾಳ ಸರ್ಕಾರದ ಬಳಿ ಇಲ್ಲ. ಅದಕ್ಕಾಗಿ ಖಾಸಗೀ ಬಂಡವಾಳಕ್ಕೆ ಅನುವು ಮಾಡಿಕೊಡಬೇಕು. ಆದುವರೆಗೆ ಟೆಲಿಕಾಂ ವಿಸ್ತಾರಕ್ಕೆ ನಿಜವಾಗಿಯೂ ಸರ್ಕಾರ ಬಂಡವಾಳ ಹೂಡುತ್ತಿದ್ದಲ್ಲ. ಆಗಿನ ಟೆಲಿಕಾಂ ದರ ನೀತಿಯಿಂದ, ಅನುಕೂಲಸ್ಥರು ಬಳಸುವ ಸೇವೆಗಳಿಗೆ(ದೂರದ ಕರೆಗಳು ಇತ್ಯಾದಿ) ಹೆಚ್ಚಿನ ದರ, ಕಡಿಮೆ ದರದ ಸಾಮಾನ್ಯರು ಬಳಸುವ ಸೇವೆಗಳಿಗೆ ಸಬ್ಸಿಡಿ ಒದಗಿಸುತ್ತಿದ್ದವು. ಇದರಿಂದಾಗಿ ಪ್ರತಿ ಹೊಸ ಲೈನಿಗೆ ಆಗುವ ವೆಚ್ಚ (ಒಟ್ಟು ಜಾಲದ ವೆಚ್ಚವನ್ನು ಲೈನುಗಳ ಸಂಖ್ಯೆಯಿಂದ ಭಾಗ ಮಾಡಿದಾಗ ಬರುವ ಸಂಖ್ಯೆ) ಕ್ಕಿಂತ ಕಡಿಮೆ ಬೆಲೆಯಲ್ಲಿ ಸಾರ್ವಜನಿಕ ಕ್ಷೇತ್ರದ ಬಿಎಸ್‌ಎನ್‌ಎಲ್ ಸೇವೆ ಒದಗಿಸುತ್ತಿತ್ತು. ಈಗ ಅನುಕೂಲಸ್ಥರು ಬಳಸುವ ಸೇವೆಗಳ ಬೆಲೆ ಕಡಿಮೆಯಾಗುತ್ತಿದ್ದು, ಈ 'ಸಬ್ಸಿಡಿ'ಯ ಸಾಧ್ಯತೆ ಇಲ್ಲ. ಆದ್ದರಿಂದ ಸಾಮಾನ್ಯ ಗ್ರಾಹಕರು ಬಳಸುವ ಸೇವೆಗಳಿಗೆ 'ನಿಜ ವೆಚ್ಚ'ದ ಬೆಲೆ ತೆರಬೇಕು ಎನ್ನುವಾಗ, ನಿಜವಾಗಿಯೂ ಅವರು ಅನುಕೂಲಸ್ಥ ಗ್ರಾಹಕರಿಗೆ 'ಸಬ್ಸಿಡಿ' ಒದಗಿಸಲಾರಂಭಿಸಿದ್ದಾರೆ.

ಇಂತಹ ಸ್ಥಿತಿಯಲ್ಲೂ ಫೋನು ಲೈನಿನ ಹೆಚ್ಚಳ(ನಿಜವಾದ ಫೋನು ಸಾಂದ್ರತೆ ಹೆಚ್ಚಿಸುವ ಕೆಲಸ) ಮತ್ತು ಸಣ್ಣ ಪಟ್ಟಣಗಳಲ್ಲಿ ಹಿಂದುಳಿದ ರಾಜ್ಯಗಳಲ್ಲಿ ಮೊಬೈಲ್ ಸೇವೆ ಇವೆರೆಡೂ ಬಿಎಸ್‌ಎನ್‌ಎಲ್ ಸಾಧಿಸಿದ್ದು ಎಂಬ ವಸ್ತುಸ್ಥಿತಿಯನ್ನು ಹಲವರು ಮರೆತುಬಿಡುತ್ತಾರೆ. ಅದೇ ರೀತಿ ಯಾವುದೇ ಫೋನು ಜಾಲದ ಮಹತ್ವ, ಉಪಯುಕ್ತತೆ ಅದಕ್ಕೆ ಸೇರಿರುವ ಒಟ್ಟು ಗ್ರಾಹಕರ ಸಂಖ್ಯೆ ಜತೆ ವೇಗವಾಗಿ ಏರುತ್ತದೆ(ಗ್ರಾಹಕರ ಸಂಖ್ಯೆ ವರ್ಗದ ಪ್ರಮಾಣದಲ್ಲಿ). ಆದ್ದರಿಂದ ಮೂಲಭೂತ ಸೇವೆಗಳ ಬೆಲೆ ಏರಿಸುವ ನೀತಿ ಕೊನೆಗೆ ಜಾಲ ವಿಸ್ತಾರಕ್ಕೆ ಮಾರಕವಾಗುತ್ತದೆ.

ಈಗಿನ ನೀತಿಗಳು ನಿಜವಾದ ಟೆಲಿಫೋನು ಜಾಲ ವಿಸ್ತಾರಕ್ಕೆ ಅನುಕೂಲಕರವಾಗಿಲ್ಲ. ಸಣ್ಣ ಪ್ರಮಾಣದ ಅನುಕೂಲಸ್ಥರು ಬಳಸುವ ಲಾಭದಾಯಕ ಸೇವೆಗಳಲ್ಲಿ ಎಲ್ಲಾ ಪೈಪೋಟಿ, ಗಮನ ಕೇಂದ್ರೀಕೃತವಾಗಿದ್ದು, ಅಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಬಂಡವಾಳ ಹರಿದು ಆ ಕ್ಷೇತ್ರದಲ್ಲಿ ಕುಸಿತ ಕಾಣುವ ಅಪಾಯವಿದೆ. ಇದು ಹಲವು ಅಭಿವೃದ್ಧಿ ದೇಶಗಳಲ್ಲಿ ಆಗಿದೆ. ಹಾಗೇನೇ ಬಡ ಗ್ರಾಹಕರು ಶ್ರೀಮಂತ ಗ್ರಾಹಕರಿಗೆ 'ಸಬ್ಸಿಡಿ' ಒದಗಿಸುವುದು ಬಹಳ ದಿನ ನಡೆಯುವಂತಹುದೂ ಅಲ್ಲ. ಕೊನೆಯದಾಗಿ, ಸರ್ಕಾರ ಟೆಲಿಕಾಂ ಕ್ಷೇತ್ರದಲ್ಲಿ ಬಂಡವಾಳ ಹೂಡದೆ, ಅದನ್ನು ನೀಡಿದರೂ ನಿಬಂಧನೆಗೆ ಒಳಪಡಿಸದೆ ಆರೋಗ್ಯಕರ ಬೆಳವಣಿಗೆ ಸಾಧ್ಯವಿಲ್ಲ ಎಂದು ಕಳೆದ ಐದು ವರ್ಷಗಳ ಅನುಭವ ಹೇಳುತ್ತದೆ.

...ನ್ 'ದುನಿಯಾ' ಯಾರ 'ಮುಟ್ಟಿ'ಯಲ್ಲಿ

ಹೊಸದಾಗಿ ದೂರ ಸೇವೆ ಆರಂಭಿಸಿದ ಈ ಕಂಪನಿಗಳು ಬಿಎಸ್‌ಎನ್‌ಎಲ್ ಗಿಂತ ಕಡಿಮೆ ದರದಲ್ಲಿ ಸೇವೆ ಆರಂಭಿಸಿ, ಮಾರುಕಟ್ಟೆ ಭಾಗ ತಮ್ಮದಾಗಿಸಲು ಆರಂಭಿಸಿದವು.ಅದೇ ರೀತಿ ಮೂಲಭೂತ ಸೇವಾ ಕ್ಷೇತ್ರವನ್ನು ಪ್ರವೇಶಿಸಿದ ಟಾಟಾ, ರಿಲೆಯನ್ಸ್‌ಗಳಿಗೆ ಲಾಭ ಒದಗಿಸುವುದು ಹೇಗೆ ಎಂಬುದು ಸರ್ಕಾರದ ಮುಂದಿನ ಚಿಂತೆಯಾಯಿತು. ಇವೆರಡೂ ಕಂಪನಿಗಳಿಗೆ 'ವಿಲ್' ಸೇವೆ ಕೊಡಲು ನಿರ್ಧರಿಸಿದ್ದರಿಂದ, ಅವರಿಗೆ ಅನುವು ಮಾಡಿಕೊಡಲು ಮೊಬೈಲ್ ಸೇವೆ ಕೊಡುವ ಕಂಪನಿಗಳಿಗೆ ಕಡಿವಾಣ ಹಾಕುವುದು ಅಗತ್ಯವಾಯಿತು. ಅದಕ್ಕಾಗಿ ಎಂಟಿಎನ್‌ಎಲ್ ಮತ್ತು ಬಿಎಸ್‌ಎನ್‌ಎಲ್ ಮೊಬೈಲ್ ಸೇವೆಗೆ (ಹಿಂದೆ ಬಂಡವಾಳದ ಅಭಾವದ ಕಾರಣ ಹೇಳಿ ಅದನ್ನು ನಿರಾಕರಿಸಲಾಗಿತ್ತು) ಅವಕಾಶ ಮಾಡಿಕೊಡಲಾಯಿತು. ಅವನ್ನು ಬಳಸಿ ಮೊಬೈಲ್ ಕಂಪನಿಗಳ ದಾಂಧಲೆಗೆ ಕಡಿವಾಣ ಹಾಕಿದ್ದರ ಪ್ರಯೋಜನ ಟಾಟಾ-ರಿಲೆಯನ್ಸ್‌ಗಳಿಗೆ ಸಿಗಲಿದೆ. ಹಿಂದಿನಿಂದಲೂ ಲೈಸೆನ್ಸ್ ಪಡೆದ ಖಾಸಗಿ ಕಂಪನಿಗಳು ಅದರ ಶರತ್ತುಗಳನ್ನು ಪಾಲಿಸದೆ, ಅವನ್ನು ಬದಲಾಯಿಸಲು ಒತ್ತಡ ಹೇರಿದಾಗ ಸರ್ಕಾರ ಅದಕ್ಕೆ ಬಾಗುತ್ತಾ ಬಂದಿದೆ. ಲೈಸೆನ್ಸ್ ಫೀ ಕಂತುಗಳನ್ನು ಪೂರ್ತಿ ಕೊಡದೆ ಮಧ್ಯೆ, ರೆವಿನ್ಯೂ ಹಂಚಿಕೊಳ್ಳುವ ವ್ಯವಸ್ಥೆಗೆ ಸರ್ಕಾರ ಮಣಿದದ್ದನ್ನು ಇಲ್ಲಿ ಸ್ಮರಿಸಬಹುದು. ಹಾಗೇ ಅತ್ಯಂತ ಹೆಚ್ಚಿನ ಲೈಸೆನ್ಸ್ ಫೀಗೆ ಟೆಂಡರ್ ಪ್ರಸ್ತಾವ ಸಲ್ಲಿಸಿ ಗೆದ್ದ ಮೇಲೆ, ಅದನ್ನು ನಿರಾಕರಿಸಿದ ಕಂಪನಿಗಳ ಮೇಲೂ ಕ್ರಮ ಕೈಗೊಳ್ಳಲಿಲ್ಲ. ಹೀಗೆ ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ಖಾಸಗಿ ಕಂಪನಿಗಳ 'ಲಾಬಿ'ಗಳ ಒತ್ತಡಕ್ಕೆ ಸರ್ಕಾರ ಬಲಿಯಾಗುತ್ತಾ ಬಂದಿದೆ. ಈಗ ಸರ್ಕಾರ ರಿಲೆಯನ್ಸ್‌ಗೆ ಅನುಕೂಲವಾದ ರಂಗ ಸಿದ್ಧ ಮಾಡಲು ಪ್ರಯತ್ನಿಸುತ್ತಿದೆ ಎಂದು ತೀವ್ರ ಆಪಾದನೆಗಳು ಕೇಳಿ ಬಂದಿವೆ. ಪ್ರಮೋದ್ ಮಹಾಜನ್ ರಿಲೆಯನ್ಸ್‌ಗೆ ತೀರಾ ನಿಕಟವಾಗಿದ್ದಾರೆ. ಇದಕ್ಕಾಗೇ ಅವರನ್ನು ಟೆಲಿಕಾಂ ಮಂತ್ರಿಯಾಗಿದ್ದನ್ನು ಬದಲಾಯಿಸಲಾಯಿತು ಎಂದು ದಟ್ಟ ವದಂತಿಗಳಿವೆ. ರಿಲೆಯನ್ಸ್‌ನ ಇತ್ತೀಚಿನ 'ಕರ ಲೋ ದುನಿಯಾ ಮುಟ್ಟಿ ಮೇ' (ಇಡೀ ಜಗತ್ತನ್ನು ನಿನ್ನ ಮುಷ್ಟಿಯಲ್ಲಿಟ್ಟುಕೋ - ಮೊಬೈಲ್ ಫೋನ್ ಮುಷ್ಟಿಯಲ್ಲಿದ್ದರೆ ಇಡೀ ಜಗತ್ತೇ ನಿನ್ನ ಕೈಯಲ್ಲಿದೆ ಎಂಬ ಅರ್ಥದ) ಜಾಹೀರಾತು ವ್ಯಾಪಕವಾಗಿದೆ. ಈ ಫೋನು ಮಹಿಮಾಟನ 'ದುನಿಯಾ' (ಜಗತ್ತು) ಯಾರ 'ಮುಟ್ಟಿ (ಮುಷ್ಟಿ) ಯಲ್ಲಿರಬೇಕು ಎಂಬ ಬಗ್ಗೆ ಎಲ್ಲಾ ಸಮರ ಸಾಗಿರುವುದು ಎಂದು ಲೇವಡಿ ಮಾಡುವವರು ಇದ್ದಾರೆ.


ಬಿಎಸ್‌ಎನ್‌ಎಲ್‌ನ ಮೊಬೈಲ್ ಸೇವೆ

ಭಾರತ ದೇಶದಲ್ಲಿ ಕಾರ್ಷಿಕ ಕ್ರಾಂತಿಗೆ ಸನ್ನದ್ಧಗೊಳಿಸಲು ರೈತಾಪಿ ಸಮುದಾಯವನ್ನು ಸಂಘಟಿಸುತ್ತಿರುವ ಅಖಿಲ ಭಾರತ ಕಿಸಾನ್ ಸಭಾದ 30ನೇ ಐತಿಹಾಸಿಕ ಸಮ್ಮೇಳನದ ಕೆಲ ವಿವರಗಳನ್ನು ಹಿಂದೆ ಓದಿರುವಿರಿ. ಕಾರ್ಷಿಕ ರಂಗದ ಪ್ರಸಕ್ತ ಬಿಕ್ಕಟ್ಟು, ಚಳುವಳಿಯ ಮುನ್ನಡೆಗಳನ್ನು ವಿವರಿಸುವ ಲೇಖನವಿದು. ಹಾಗೇ ಸಮ್ಮೇಳನ ಸಂಘಟಿಸಿದ ಪಂಜಾಬ್‌ನ ಹೋರಾಟದ ಧೀರ ಪರಂಪರೆಯನ್ನು ಪರಿಚಯಿಸಲಾಗುತ್ತಿದೆ.

ಭೂಮಿ ಬಡವರಿಗಿಲ್ಲ ದೊಡ್ಡ ವ್ಯಾಪಾರಿಗಳು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಿಗೆ - ಹರಿಕಿಷನ್‌ಸಿಂಗ್ ಸುರ್ಜಿತ್

ಯು.ಬಸವರಾಜು

ಸ್ವಾತಂತ್ರ್ಯ ಪೂರ್ವದಲ್ಲಿ ಭೂಸಂಬಂಧ ಪ್ರಶ್ನೆಗಳಿಗಾಗಿ ಆಗಿನ ಭೂಮಾಲಕರ ಹಾಗೂ ಬ್ರಿಟೀಷರ ಆಡಳಿತವನ್ನು ವಿರೋಧಿಸಿ ತೀವ್ರವಾದ ಆಂದೋಳನಗಳು ಬೆಳೆದುಬಂದವು. ಬಂಗಾಳದಲ್ಲಿ ತೇಬಾಗ ಹೋರಾಟ ಆಸ್ಸಾಂದಲ್ಲಿ ಸುಮಾಲ್ ಕಣಿವೆ ಹೋರಾಟ ಮಹಾರಾಷ್ಟ್ರದಲ್ಲಿ ವಾರಲಿ ಆದಿವಾಸಿಗಳ ಹೋರಾಟ ಕೇರಳದ ಪುನ್ನಪ್ರ ವಯಲಾರ್ ಹೋರಾಟ ತ್ರಿಪುರಾದಲ್ಲಿ ಜಮಿಯೂಗಳ ಹೋರಾಟ ಉದ್ಭತಗೊಂಡವು. ಇವೆಲ್ಲವುಗಳ ಜೊತೆಯಲ್ಲಿ ಐತಿಹಾಸಿಕ ವೀರ ತೆಲಂಗಾಣ ಹೋರಾಟ ನಡೆಯಿತು.

ಇವುಗಳೆಲ್ಲ ಮೂಡಿಸಿದ ಜಾಗೃತಿ ಮತ್ತು ರೈತರ ತೀವ್ರಗೊಂಡ 'ಹೋರಾಟದ ಪರಿಣಾಮವಾಗಿ' ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ ಸರ್ಕಾರಗಳು ಭೂ ಸುಧಾರಣಾ ಕಾನೂನುಗಳನ್ನು ತಂದವು. ಇವು ಕೇವಲ ಬಾಯಿಮಾತಿನಲ್ಲೇ ಉಳಿದವು. ಕಾನೂನುಗಳಲ್ಲಿ ಅನೇಕ ದೋಷಗಳಿದ್ದವು ಅಲ್ಲದೇ ಇವುಗಳನ್ನು ಪ್ರಾಮಾಣಿಕವಾಗಿ ಜಾರಿಗೊಳಿಸಿ ಜನರಿಗೆ ಭೂಮಿ ಕೊಡಲು ಮುಂದಾಗಲಿಲ್ಲ.

ಈಗಿನ ಹೊಸ ಪರಿಸ್ಥಿತಿಯಲ್ಲಿ ಈ ಕಾನೂನುಗಳನ್ನು ತಿದ್ದುಪಡಿ ಮಾಡಿ ದೊಡ್ಡ ಬಂಡವಾಳದಾರರಿಗೆ, ಬಹುರಾಷ್ಟ್ರೀಯ ಸಂಸ್ಥೆಗಳು ದೊಡ್ಡ ಹಿಡುವಳಿಗಳನ್ನು ಹೊಂದಲು ಅವಕಾಶ ಮಾಡಲಾಗಿದೆ. ಬಡಜನರು ಸಾಗುವಳಿ ಮಾಡುತ್ತಿದ್ದ ಬಂಜರು ಜಮೀನನ್ನು ದೊಡ್ಡ ಪ್ರಮಾಣದಲ್ಲಿ ಇವರಿಗೆ ನೀಡಲಾಗುತ್ತಿದೆ.

ಅದೇ ರೀತಿ ಸ್ವಾತಂತ್ರ್ಯ ಬಂದು 55 ವರ್ಷಗಳೇ ಕಳೆದರೂ ಬಹುಸಂಖ್ಯಾತ ರೈತರ ಮತ್ತು ಕೃಷಿ ಅವಲಂಬಿತರ ಪರಿಸ್ಥಿತಿ ಈಗಲೂ ಶೋಚನೀಯವಾಗಿದೆ. ಸಣ್ಣ ಹಿಡುವಳಿಗಳು, ನೀರಾವರಿ ಕೊರತೆ ಕೃಷಿ ಹೂಡಿಕೆಗಳ ಬೆಲೆ ಏರಿಕೆ, ಬೆಳೆಗಳಿಗೆ ನ್ಯಾಯವಾದ ಬೆಲೆ ಸಿಗದೇ ಇರುವುದು ಮುಂತಾದವುಗಳು ಕೃಷಿ ಬೆಳವಣಿಗೆಯನ್ನು ಅಡ್ಡಿಪಡಿಸಿವೆ. ಇವುಗಳನ್ನೆಲ್ಲಾ ತೆಗೆದುಹಾಕಬೇಕಾಗಿದೆ.

ಈಗಲೂ ದೇಶದಲ್ಲಿ ಶೇ1.6 ರಷ್ಟಿರುವ ಭೂಮಾಲಿಕ ಹಿಡುವಳಿದಾರರು 17-3 ಶೇಕಡಾ ಜಮೀನು ಹೊಂದಿದ್ದಾರೆ. ಅದೇ ರೀತಿ ಶೇ.59.4 ರಷ್ಟಿರುವ ಹಿಡುವಳಿದಾರರು 15.1 ಶೇಕಡಾ ಜಮೀನು ಹೊಂದಿದ್ದಾರೆ.

8ನೇ ಪಂಚವಾರ್ಷಿಕ ಯೋಜನೆಯಲ್ಲಿ "ಭೂಮಿ ಗ್ರಾಮೀಣ ಪ್ರದೇಶದ ಬಹಳ ಮುಖ್ಯವಾದ ಆಸ್ತಿ" ಎಂದು ಹೇಳಿಕೊಂಡಿದ್ದೇವೆ. ಅಷ್ಟು ಮಾತ್ರವಲ್ಲಾ ಕಳೆದ 50 ವರ್ಷಗಳಲ್ಲಿ ಭೂಸುಧಾರಣೆ ಬಗ್ಗೆ ಬಹಳಷ್ಟು ಮಾತನಾಡಿದ್ದೇವೆ, ಆದರೆ ಸಾಧಿಸಿದ್ದು ಅತ್ಯಂತ ಕಡಿಮೆ, ಸ್ವಲ್ಪವೇ ಆಗಿದೆ.

ಭೂಮಿಯ ವಿಚಾರ ರಾಜ್ಯಗಳಿಗೆ ಸೇರಿದೆ. ಆದರೆ ನಾವು ಈ ಕಳೆದ ಅವಧಿಯಲ್ಲಿ ಕೇಂದ್ರದಲ್ಲೂ ಹಾಗೂ ಅನೇಕ ರಾಜ್ಯಗಳಲ್ಲೂ ಒಂದೇ ಪಕ್ಷ ಆಳ್ವಿಕೆ ಮಾಡಿದ್ದು ನೋಡಿದ್ದೇವೆ. ಕೊನೆಯ ಪಕ್ಷ ತಂದಂತಹ ಕಾನೂನುಗಳು ಜಾರಿಯಾಗಲಿಲ್ಲ.

ಮಾರುಕಟ್ಟೆಯನ್ನು ಸೃಷ್ಟಿಸುವುದಷ್ಟೇ ಅಲ್ಲ ಬಂಡವಾಳಶಾಹಿ ಆರ್ಥಿಕತೆ ಬೆಳೆಯಲು ಇದು ಅವಶ್ಯವಿದೆ. ಭೂಸುಧಾರಣೆ ಬಡವರನ್ನು ಶೋಷಿತರನ್ನು ಮೇಲೆತ್ತಲಿದೆ.

ನಮ್ಮೆಲ್ಲರ ಮುಂದೆ ಪಶ್ಚಿಮ ಬಂಗಾಳದ ಜೀವಂತ ಅನುಭವವಿದೆ. ಒಂದು ಕಾಲದಲ್ಲಿ ಅದು ಹಿಂದುಳಿದ, ಕೊರತೆಯ ರಾಜ್ಯವಾಗಿತ್ತು. ಈಗ ಬಂಗಾಳ ಆಹಾರದಲ್ಲಿ ಸ್ವಂತಿಕೆಯನ್ನು ಸಾಧಿಸಿದೆ. ದೇಶದ GDP ಯಲ್ಲಿ 5ನೇ ಸ್ಥಾನ ಹೊಂದಿದೆ. ಕಳೆದ ಹಲವಾರು ವರ್ಷಗಳಿಂದ ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ ಜನರ ಮೇಲೆ ದಬ್ಬಾಳಿಕೆಯ ಒಂದೇ ಒಂದು ಪ್ರಕರಣ ಬಂಗಾಳದಲ್ಲಿ ನಡೆದಿಲ್ಲವೆಂದು ಕೇಂದ್ರ ಸರ್ಕಾರದ ಗೃಹಮಂತ್ರಿಗಳ ಕಾರ್ಯಾಲಯ ಸ್ಪಷ್ಟಪಡಿಸಿದೆ.

ಭೂಸುದಾರಣೆ ಗ್ರಾಮೀಣ ಪ್ರದೇಶದಲ್ಲಿ ಬದಲಾವಣೆಯನ್ನು ತಂದಿದೆ. ಗ್ರಾಮೀಣ ಆರ್ಥಿಕತೆ ಬೆಳೆದಿದೆ. ಸಾಮಾಜಿಕ ಸ್ವರೂಪದಲ್ಲಿ ಬದಲಾವಣೆ ಕಂಡಿದೆ. ಪಟ್ಟಭದ್ರ ಹಿತಾಸಕ್ತಿಗಳನ್ನು ಸೋಲಿಸಿ ಗ್ರಾಮೀಣ ಪ್ರದೇಶದ ಬೆಳವಣಿಗೆಗೆ ಹಾಗೂ ಕೃಷಿಯ ಬೆಳವಣಿಗೆಗೆ ಭೂಸುಧಾರಣೆ ಕಾರಣವಾಗಿದೆ.

ಭೂಮಿ ಹಂಚಿಕೆಯ ವಿಚಾರದಲ್ಲಿ ದೇಶದಲ್ಲಿಯೇ ಮೊದಲ ಸ್ಥಾನವನ್ನು ಪಶ್ಚಿಮ ಬಂಗಾಳ ಪಡೆದಿದೆ. ಒಟ್ಟು ದೇಶದಲ್ಲಿ 52, 68,584 ಎಕರೆ ಭೂಮಿ ಹಂಚಿದರೆ ಪಶ್ಚಿಮ ಬಂಗಾಳವೊಂದೇ 10,34, 273 ಎಕರೆ ಹಂಚಿದೆ.

ಭೂಮಿ ಹಂಚಿಕೆಯಿಂದ ಲಾಭ ಹೊಂದಿದ ಫಲಾನುಭವಿಗಳ ಸಂಖ್ಯೆ ದೇಶದಲ್ಲಿ ಒಟ್ಟು 54,65,174 ಜನರಿದ್ದರೆ ಪಶ್ಚಿಮ ಬಂಗಾಳದಲ್ಲಿ 25,01,533 ಜನರಿದ್ದಾರೆ.

ಹೀಗೆ ಭೂಮಿಯ ಪ್ರಶ್ನೆ ದೇಶದಲ್ಲಿ ಉದಾಸೀನತೆಗೊಳಗಾದರೆ ಮತ್ತೊಂದೆಡೆ ಸಾರಿಗೆ, ಸಂಪರ್ಕ ಮತ್ತಿತರೆ ಅನುಕೂಲಗಳಿಗೆ ಹಣ ನೀಡಲಿಲ್ಲ. ಈಗಲೂ ನೀರಾವರಿ ಕೇವಲ ಶೇ.36 ಮಾತ್ರವೇ. ಈ ಕ್ಷೇತ್ರ ಅತ್ಯಂತ ಉಪೇಕ್ಷೆಗೊಳಗಾಗಿದೆ. ಈಗಲೂ ಒಟ್ಟು ಸಾಗುವಳಿಭೂಮಿಯ ಶೇ.25 ಕ್ಕಿಂತ ಕಡಿಮೆ ಜಮೀನಿನಲ್ಲಿ ಮಾತ್ರವೇ ಎರಡು ಅಥವಾ ಅದಕ್ಕಿಂತ ಹೆಚ್ಚು ಬೆಳೆಯಲು ಸಾಧ್ಯ. ಅಂದರೆ ಉಳಿದ ಶೇ.75 ಭೂಮಿಯಲ್ಲಿ ಒಂದು ಬೆಳೆ ಮಾತ್ರ ಸಾಧ್ಯ ಅದೂ ಕೂಡ ಸಮಯಕ್ಕೆ ಮಳೆ ಬಂದರೆ ಮಾತ್ರ !


ಪ್ರತಿನಿಧಿ ಅಧಿವೇಶನದಲ್ಲಿ ಕಾಂ. ಜಿ.ಸಿ.ಬಯ್ಯಾರೆಡ್ಡಿ

2/3 ಭಾಗ ಮಳೆಯಾಧಾರಿತ ವಾಗಿರುವುದರಿಂದ ಮಾನ್‌ಸೂನ್‌ಗಳ ಅಭಾವದಿಂದ ಬರಗಾಲವನ್ನು ಈ ಜನರು ಪದೇ ಪದೇ ಎದುರಿಸ ಬೇಕಾಗಿದೆ.

ಅದೇ ರೀತಿ ಇದು ವರ್ಷದಲ್ಲಿ 4 ರಿಂದ 6 ತಿಂಗಳು ನಿರುದ್ಯೋಗವನ್ನು ಈ ವಲಯದಲ್ಲಿ ಸೃಷ್ಟಿಸಿದೆ.

ಇರುವಂತಹ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಳ್ಳಲಾಗುತ್ತಿಲ್ಲ.

ಇದನ್ನೆಲ್ಲ ಸರಿಪಡಿಸಲು ನೀರಾವರಿಗಾಗಿ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ನಿಗದಿಸಬೇಕಾಗಿದೆ. ಅದೇ ರೀತಿ ಸಮುದಾಯದ ಮಟ್ಟದಲ್ಲಿ ಸೂಕ್ತ ಬಳಕೆಗೆ ಗಮನಹರಿಸಿದಲ್ಲಿ ಇದನ್ನೂ ಸಮತೋಲನಗೊಳಿಸಲು ಸಾಧ್ಯ.

ಇದರ ಜೊತೆ ಹೊಸ ಕೃಷಿ ನೀತಿಗಳು ಮತ್ತಷ್ಟು ಬಿಕ್ಕಟ್ಟನ್ನು ಸೃಷ್ಟಿಸಿದೆ.

ಉದಾರೀಕರಣದ ನೀತಿಗಳು ರೈತರನ್ನು ಆಹಾರದ ಬೆಳೆಗಳಿಂದ ವಾಣಿಜ್ಯ ಬೆಳೆಗಳನ್ನು ಬೆಳೆಯುವಂತೆ ಬದಲಾಯಿಸಿವೆ. ಇದು ಆಹಾರ ಧಾನ್ಯ ಉತ್ಪಾದನೆಯ ಬೆಳವಣಿಗೆಯ ದರ ಕುಸಿಯುವಂತೆ ಮಾಡಿದೆ. ಅನುದಾನ ಪ್ರಮಾಣಾತ್ಮಕ ನಿರ್ಬಂಧಗಳನ್ನು ಹಲವಾರು ಕೃಷಿ ಉತ್ಪನ್ನ ಗಳನ್ನಗಳ ಮೇಲೆ ತೆಗೆದು ಹಾಕಿದುದು ರೈತರನ್ನು ಹೊಡೆದುಹಾಕಿದೆ.

1995 ರಿಂದ 2000ದ ಅವಧಿಯಲ್ಲಿ ಕೃಷಿ ರಂಗದಲ್ಲಿ ಆಮದು 4 ಪಟ್ಟು ಹೆಚ್ಚಾಗಿದೆ.

ತೆಂಗು, ರಬ್ಬರ್, ಅಡಿಕೆ ಶೇಂಗಾ, ತಂಬಾಕು, ಹತ್ತಿ, ಟೀ, ಕಬ್ಬು, ಕಾಫಿ, ಸೇಬು, ಪೆಪ್ಪರ್ ಮುಂತಾದ ಬೆಳೆಗಳ ಬೆಲೆ ಕುಸಿದು ಹೋಗಿದೆ.

ಕೇಂದ್ರಸರ್ಕಾರ ರೈತರಿಂದ ಬೆಂಬಲ ಬೆಲೆಗೆ ಕೃಷಿ ಉತ್ಪನ್ನ ಖರೀದಿಸುವುದನ್ನು ನಿಲ್ಲಿಸಿದೆ. ರೈತರು ಈಗ ದೊಡ್ಡ ವ್ಯಾಪಾರಿಗಳ ಕರುಣೆಗೆ ಒಳಗಾಗುವಂತೆ ಮಾಡಲಾಗಿದೆ.

ಈ ಎಲ್ಲಾ ಸಮಸ್ಯೆಗಳ ಜೊತೆ ರೈತರ ಸಾಲ ಬೆಳೆದಿದೆ. ಸಾಲದ ಬಲೆಯಲ್ಲಿ ಸಿಲುಕಿದ್ದಾರೆ. ಇದರ ಜೊತೆ ಬೆಳೆ ವೈಫಲ್ಯ ಕಳಪೆಬೀಜ, ಗೊಬ್ಬರ, ಕ್ರಿಮಿನಾಶಕಗಳ ಹಾವಳಿಯು ಕರ್ನಾಟಕ, ಮಹಾರಾಷ್ಟ್ರ ಆಂಧ್ರಪ್ರದೇಶ ಮುಂತಾದ ರಾಜ್ಯಗಳಲ್ಲಿ ರೈತರು ದೊಡ್ಡ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಒತ್ತಾಯಿಸಿದೆ.

ಇದೆಲ್ಲವು ಒಟ್ಟಾರೆ ಗ್ರಾಮೀಣ ಪ್ರದೇಶವನ್ನು ಶ್ರೀಮಂತರು - ಬಡವರೆಂದು ದೊಡ್ಡ ಪ್ರಮಾಣದಲ್ಲಿ ವಿಭಜಿಸುತ್ತಿದೆ. ಬಡವರ ಸಂಖ್ಯೆಯನ್ನು ವ್ಯಾಪಕವಾಗಿ ಬೆಳೆಸುತ್ತಿದೆ. ಅದೇ ರೀತಿ ಆಹಾರದ ಉತ್ಪಾದನೆ ಕುಸಿದು ವಿದೇಶದ ಮೇಲೆ ಹೆಚ್ಚೆಚ್ಚು ಅವಲಂಬಿಸುವಂತೆ ಮಾಡಿದೆ.

ಈಗ ರೈತರ ಸಮಸ್ಯೆಗಳ, ಅದರ ಪರಿಹಾರ ಮುಂದೆ ಬಾರದೇ, ವಿದೇಶಿ ಹೂಡಿಕೆ, ರಫ್ತುಗಾಗಿ ಕೃಷಿ ಉತ್ಪಾದನೆ ಮತ್ತು ಕೃಷಿ ಸಂಬಂಧಿ ಕೈಗಾರಿಕಾ ಉತ್ಪನ್ನಗಳ ವಿಚಾರ ದೇಶದ ಮುಂದೆ ಬರುತ್ತಿವೆ.

ಇದೀಗ ಸಾಮ್ರಾಜ್ಯಶಾಹಿಯು ಜಗತ್ತಿನ ಮೇಲೆ ಪ್ರಾಬಲ್ಯ ಸ್ಥಾಪಿಸಲು ಆಕ್ರಮಣಕಾರಿಯಾಗಿದೆ ಜಗತ್ತಿನಾದ್ಯಂತ ತೀವ್ರ ಪ್ರತಿಭಟನೆ ನಡೆದಿದ್ದಾಗಲೂ ಇರಾಕ್‌ಮೇಲೆ ದಾಳಿ ಮಾಡಲು ಸಜ್ಜಾಗಿದೆ. ಇಂತಹ ಪರಿಸ್ಥಿತಿ ಸೋವಿಯತ್ ಯೂನಿಯನ್ ಹಾಗೂ ಸಮಾಜವಾದಿ ಇರುವ ತನಕ 80 ರ ದಶಕದವರೆಗೆ ಕಂಡಿರಲಿಲ್ಲ. ಮಾತ್ರವಲ್ಲ ಯಾರೂ ಇದನ್ನು ಊಹಿಸಿಯೂ ಇರಲಿಲ್ಲ. 2ನೇ ಜಾಗತಿಕ ಯುದ್ಧದ ನಂತರ 4 ದಶಕಗಳಲ್ಲಿ ಶಾಂತಿ ಭಂಗವಾಗಿರಲಿಲ್ಲ. ಈ ಅವಧಿಯಲ್ಲಿ ಯಾವುದೇ ದೊಡ್ಡ ಯುದ್ಧ


ಧ್ವಜಾರೋಹಣದಲ್ಲಿ ಕಾಂ.ಸುರ್ಜಿತ್

ನಡೆದಿರಲಿಲ್ಲ. ಇಂತಹ ಪರಿಸ್ಥಿತಿ ಉಳಿಯುವಲ್ಲಿ ಸಾಮ್ರಾಜ್ಯಶಾಹಿ ಯಂತ್ರವನ್ನು ನಿಯಂತ್ರಿಸಿದ ಸೋವಿಯತ್ ಯೂನಿಯನ್‌ಗೆ ಧನ್ಯವಾದಗಳು. ಆದರೆ ಸೋವಿಯತ್ ಯೂನಿಯನ್ ಒಡೆದು ಹೋದುದರಿಂದ ಮತ್ತು ಸಮಾಜವಾದಿ ವ್ಯವಸ್ಥೆಗೆ ಹಿನ್ನಡೆಯಾದುದರಿಂದ ಸಾಮ್ರಾಜ್ಯಶಾಹಿ ಹೊಸದೊಂದು ವಿಶ್ವವ್ಯವಸ್ಥೆಗೆ ಮುಂದಾಗುತ್ತಿದೆ. ಇದೂ ಬಹಳ ದಿನ ನಡೆಯಲಾರದುದೆಂಬುದಕ್ಕೆ ತನ್ನ ಸ್ವಂತ ಸಹಚರರು ಹಾಗೂ ಜಗತ್ತಿನ ಜನತೆ ಇರಾಕ್ ವಿರುದ್ಧದ ಯುದ್ಧ ವಿರೊಧಿ ನಿಲುವು ತಾಳಿದುದೇ ಸಾಕ್ಷಿಯಾಗಿದೆ.

ಸಾಮ್ರಾಜ್ಯಶಾಹಿ ನೀತಿಗಳ ವಿರುದ್ಧ ಜಾಗತಿಕವಾಗಿ ಹೋರಾಟಗಳು ಬೆಳೆಯುತ್ತಿವೆ. ಹಲವಾರು ದೇಶಗಳಲ್ಲಿ ಎಡಶಕ್ತಿಗಳು ಜನಗಳ ಬೆಂಬಲ ಪಡೆದು ಅಧಿಕಾರಕ್ಕೆ ಬಂದಿವೆ.

ಅದೇ ಸಂದರ್ಭದಲ್ಲಿ ದೇಶದಲ್ಲಿ ಎನ್.ಡಿ.ಎ. ನಾಯಕತ್ವದ ಬಿಜೆಪಿ ಹೀಗೆಯೇ ಅಧಿಕಾರದಲ್ಲಿ ಮುಂದವರೆಯುವುದು ದೇಶದ ಜಾತ್ಯಾತೀತ ಪ್ರಜಾಸತ್ತೆಯ ಸ್ವರೂಪಕ್ಕೆ ಗಂಡಾಂತರಕಾರಿಯಾಗಿದೆ. ಬಹುಭಾಷೆಯ, ಬಹುಜನಾಂಗೀಯ ಮತ್ತು ಬಹುಸಾಂಸ್ಕೃತಿಕ ಸ್ವರೂಪವನ್ನು ಬೆದರಿಸಿದೆ.

ಸಾವಿರಾರು ಅಮಾಯಕರ ಅಮಾನವೀಯ ಕಗ್ಗೊಲೆಯಿಂದ ಗುಜರಾತ್ ಚುನಾವಣೆ ಗೆದ್ದ ನಂತರ ನಾಚಿಕೆಯಿಲ್ಲದೆ ಹಿಂದುತ್ವ ನಮ್ಮ ಅಜೆಂಡಾವೆಂದು ಬಿಜೆಪಿ ಹೇಳಿಕೊಳ್ಳುತ್ತಿದೆ.

ಹಿಮಾಚಲ ಪ್ರದೇಶದ ಸೋಲು ಆಕ್ರಮಣಕಾರಿ ಕೋಮುವಾದಿ ಪ್ರಚಾರವಿಲ್ಲದೆ ಬಿಜೆಪಿ ಗೆಲ್ಲಲಾರದೆಂದು ಸಾಬೀತಾಗಿದೆ.

ಇವೆಲ್ಲವನ್ನು ದೇಶದಲ್ಲಿ ಮುಖ್ಯವಾಗಿ ಕೃಷಿ ರಂಗದಲ್ಲಿ ಪರಿಣಾಮಕಾರಿಯಾಗಿ ಎದುರಿಸಲು ಈ ಸಮ್ಮೇಳನ ಸರಿಯಾದ ಘೋಷಣೆ ರೂಪಿಸಲು ನೆರವಾಗಲಿದೆ ಪ್ರಧಾನ ಕಾರ್ಯದರ್ಶಿ ವರದಿ ಮೇಲೆ ಚರ್ಚಿಸಿ ಘೋಷಣೆಗಳನ್ನು ರೂಪಿಸೋಣ. ಚಳುವಳಿಯನ್ನು ದೇಶವ್ಯಾಪಿ ಕಟ್ಟೋಣ.

ಮುಂದಿನ ಪುಟಕ್ಕೆ

ಸಮ್ಮೇಳನದ ಈ ನೆಲ ರಾಷ್ಟ್ರೀಯ ವಿಮೋಚನಾ ಚಳುವಳಿಯ ಮಹಾನ್ ಬಿರುಗಾಳಿಯೆಬ್ಬಿಸಿದ ಕೇಂದ್ರ

ಅಖಿಲ ಭಾರತ ಕಿಸಾನ್ ಸಭಾದ 30ನೇ ಸಮ್ಮೇಳನವನ್ನು ಸಂಘಟಿಸಿದ ಪಂಜಾಬ್ ರಾಜ್ಯದ ಜಲಂದರ್‌ಗೆ ರಾಷ್ಟ್ರೀಯ ವಿಮೋಚನಾ ಚಳುವಳಿಯ ಮಹಾನ್ ಬಿರುಗಾಳಿಯೆಬ್ಬಿಸಿದ ಕೇಂದ್ರಕ್ಕೆ ದೇಶವ್ಯಾಪಿ ರೈತರನ್ನು ಹೋರಾಟದ ಕಣಕ್ಕಿಳಿಸುತ್ತಿರುವ ರೈತರ ನಾಯಕರಿಗೆ ಸ್ವಾಗತವೆಂದು ರಾಚಪಾಲ್‌ಸಿಂಗ್, ಸ್ವಾಗತ ಸಮಿತಿಯ ಅಧ್ಯಕ್ಷರು ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಪಂಜಾಬ್ ಜನತೆಯ ಮಹಾನ್ ತ್ಯಾಗಬಲಿದಾನಗಳ ಕಥೆಯನ್ನು ವಿವರಿಸಿದರು.

ಗದ್ದರ್ ಪಕ್ಷದ ಕ್ರಾಂತಿಕಾರಿಗಳಿಗೆ ಬಬ್ಬರ್ ಅಕಾಲಿಗಳಿಗೆ ಮತ್ತು ಮಹಾನ್ ಕ್ರಾಂತಿಕಾರಿ ಶಾಹಿದ್ ಭಗತ್‌ಸಿಂಗ್ ಹಾಗೂ ಮಹಾನೇತಾರ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ, ಎ.ಐ.ಕೆ.ಎಸ್‌ನ ಅಖಿಲ ಭಾರತ ಉಪಾಧ್ಯಕ್ಷರಾದ ಹರಿಕಿಶನ್‌ಸಿಂಗ್ ಸುರ್ಜಿತ್ ಅವರಿಗೆ ಜನ್ಮ ನೀಡಿದ ಪ್ರದೇಶವಿದೆಂದು ಅವರು ತಿಳಿಸಿದರು.

20ನೇ ಶತಮಾನದ ಆರಂಭದಿಂದಲೇ ರೈತರ ಚಳುವಳಿಯ ಧೀರ, ಹಾಗೂ ಭವ್ಯ ಪರಂಪರೆ ಪಂಜಾಬ್ ರಾಜ್ಯಕ್ಕಿದೆ.

ಬ್ರಿಟೀಷರು 1906 ರಲ್ಲಿ ರಾವಲ್ಪಿಂಡಿ ಜಿಲ್ಲೆಯ ರೈತರ ಭೂಮಿಗಳಿಗೆ ಭೂ ತೆರಿಗೆಯನ್ನು ಶೇ.25ರಷ್ಟು ಹೆಚ್ಚಿಸಿದರು. ಅದೇ ರೀತಿ ನೀರಾವರಿ ಛಾರ್ಜ್‌ಗಳನ್ನು ಬರೀದೋಡ್ ಮೇಲ್ಪಟ್ಟದ ಕಾಲುವೆಯ ಫಲಾನುಭವಿಗಳಿಗೆ ಹೆಚ್ಚಿಸಿದರು. ಮತ್ತು ಬ್ರಿಟೀಷರ ಅಧಿಪತ್ಯಕ್ಕೆ ಒಳಪಟ್ಟ ಈ ಪ್ರದೇಶದಲ್ಲಿ ರೈತರು ತಮ್ಮ ಜಮೀನುಗಳಲ್ಲಿ ತಾವುಗಳೇ ಬೆಳೆಸಿದ ಮರಗಳನ್ನು ಕಡಿಯಬಾರದೆಂದು ತಾಕೀತು ಮಾಡಿದರು. ಈ ಅಸಮಾಧಾನವು ಈ ಪ್ರದೇಶದಲ್ಲಿ ಭಾರಿ ಪ್ರತಿಭಟನೆಗೆ ಆಧಾರವಾಯಿತು.

ಇದರ ವಿರುದ್ಧ ಅಂದಿನ ಸುದ್ದಿ ನೀಡುವ ಪತ್ರಿಕೆಯಾಗಿದ್ದ 'ಝಾಂಗ್ ಸಿಯಾಲ್'ನ ಸಂಪಾದಕರಾದ ಶಾಹೀದ್ ಬಂಕೆ ದಯಾಳ್ ಬರೆದ ಐತಿಹಾಸಿಕ ಕ್ರಾಂತಿಕಾರಿ ಗೀತೆಯು ಲಕ್ಷಾಂತರ ರೈತರನ್ನು ಬಡಿದೆಬ್ಬಿಸಿತು. ಕ್ರಾಂತಿಕಾರಿ ಗೀತೆಯ ಹೆಸರು 'ಪಾಗ್ರೀ ಸಂಭೂತ್ ಜಟ್ಟಾ'

ಇದೊಂದು ಆಕ್ರಮಣಕಾರಿ ಹೋರಾಟವಾಗಿ ಬೆಳೆಯಿತು. ಪರಿಣಾಮವಾಗಿ ಬ್ರಿಟೀಷರು ಲಕ್ಷಾಂತರ ಕುದಿಯುವ ರೈತರನ್ನು ಎದುರಿಸಲಾಗದೇ ರೈತ ವಿರೋಧಿ ಧೋರಣೆಯನ್ನು ವಾಪಾಸು ಪಡೆಯಬೇಕಾಯಿತು. ಲಾಲಾಲಜಪತ ರಾಯ್ ಹಾಗೂ ಶಾಹೀದ್ ಭಗತ್‌ಸಿಂಗರ ಚಿಕ್ಕಪ್ಪನಾದ ಅಜಿತ್‌ಸಿಂಗ್‌ರ ನಾಯಕತ್ವದಲ್ಲಿ 1906-07 ರಲ್ಲಿ ಈ ಚಳುವಳಿ ನಡೆಯಿತು.

ಬ್ರಿಟೀಷರ ಆಳ್ವಿಕೆಯಿಂದ ರೋಸಿಹೋದ ಹಾಗೂ ಅವರ ದಿವಾಳಿಕೋರ ನೀತಿಯಿಂದ ದಿವಾಳಿಯೆದ್ದ ರೈತರು ಕೆನಡಾ, ಅಮೇರಿಕಾಕ್ಕೆ ಬದುಕಲು ವಲಸೆ ಹೋಗಿದ್ದರು. ಅಮೇರಿಕಾದ ನೆಲದಲ್ಲಿ ಬ್ರಿಟೀಷರನ್ನು ಭಾರತದ ನೆಲದಿಂದ ಹೊಡೆದೋಡಿಸಲು ಅವರು ಗದ್ದರ್‌ಪಕ್ಷವನ್ನು ಸಂಘಟಿಸಿದ್ದರು. ಇದರ ಹಲವು ನಾಯಕರು ಬ್ರಿಟೀಷರ ವಿರುದ್ಧದ ಕ್ರಾಂತಿಕಾರಿ ಕೆಲಸದಲ್ಲಿ ತ್ಯಾಗ - ಬಲಿದಾನಗಳನ್ನು ಗೈದಿದ್ದಾರೆ. ಗದ್ದರ್ ಪಕ್ಷದ ಸ್ಥಾಪಕ- ಅಧ್ಯಕ್ಷರಾದ ಸೋಹಾನ್ ಸಿಂಗ್ ಭಾತನಾ ನಂತರ ಭಾರತಕ್ಕೆ ಮರಳಿ ಮರಳಿ ಬಂದು ಬಲವಾದ ರೈತ ಚಳುವಳಿಯನ್ನು ಸಂಘಟಿಸಿದರು. ಮಾತ್ರವಲ್ಲ ಅಖಿಲ ಭಾರತ ಕಿಸಾನ್ ಸಭಾದ ಸಮ್ಮೇಳನ (1940- ಆಂದ್ರಪ್ರದೇಶದ ಪುಲಸಾದಲ್ಲಿ ನಡೆದುದು) ದಲ್ಲಿ ಅಖಿಲ ಭಾರತ - ಅಧ್ಯಕ್ಷರಾಗಿದ್ದಾರೆ. (ಸಮ್ಮೇಳನ ನಡೆಯುವ ಗದ್ದರ್ ಹಿರೋಗಳ ನನಪಿನಾರ್ಥವಾಗಿ ಕಟ್ಟಲಾಗಿರುವ ಕಟ್ಟಡದ ಪ್ರದೇಶವನ್ನು ಬಾಬಾ ಸೋಹಾನ್‌ಸಿಂಗ್ ನಗರವೆಂದು ಕರೆಯಲಾಗಿದೆ.)

ಜೈಲಿಂದ ಹೊರಬಂದ ನಂತರ ಬಾಬಾ ಜಯಸಿಂಗ್, ಬಾಬಾ ಸಂತಸಿಂಗ್, ಗೋವಿಂದ ಮುಂತಾದವರು ರೈತರನ್ನು ಸಂಘಟಿಸಲು ಮುಂದಾದರು ಮಾತ್ರವಲ್ಲ ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಚಳುವಳಿ ಪರಿಣಾಮಕಾರಿ ಪಾತ್ರವಹಿಸುವಂತೆ ಮಾಡಿದರು.

ಪರಿಣಾಮವಾಗಿ 1932 ರಲ್ಲಿ ಪಂಜಾಬ್ ಕಿಸಾನ್ ಸಮಿತಿಯನ್ನು ಬ್ರಿಟಿಷ್ ಆಡಳಿತ ನಿಷೇಧಿಸಿತು. ಮುಂದೆ ಇದು ಅಖಿಲ ಭಾರತ ಕಿಸಾನ್ ಸಭಾ 1936 ಲಕ್ನೋದಲ್ಲಿ ರೂಪುಗೊಂಡಾಗ ಇದರ ಮೊದಲ ಶಾಖೆಯಾಗಿ ಪಂಜಾಬ್ ಕಾರ್ಯನಿರ್ವಹಿಸಿತು. ಹರಿಕಿಷನ್ ಸಿಂಗ್ ಸುರ್ಜಿತ್ ಎ.ಐ.ಕೆ.ಎಸ್. ಕೆಲಸಕ್ಕಾಗಿ ಆಗಿನಿಂದಲೇ ದುಡಿದರು.

1938 ರಲ್ಲಿ ಬ್ರಿಟೀಷರು ಭೂಮಿ ತೆರಿಗೆ ಹೆಚ್ಚಿಸಿದುದನ್ನು ಪ್ರತಿಭಟಿಸಿ ಹಾಗೂ ಕಾಲುವೆ ನೀರನ್ನು ಸಮಾನವಾಗಿ ಹಂಚಲು ಒತ್ತಾಯಿಸಿ ಮತ್ತು ನೀರಾವರಿ ಬೆಲೆ ಏರಿಕೆ ವಾಪಸಾತಿಗಾಗಿ ಸುಮಾರು 8 ವರ್ಷಗಳ ಪ್ರಬಲವಾದ ಹೋರಾಟವನ್ನು ಪಂಜಾಬ್ ಕಿಸಾನ್ ಸಭಾ ಸಂಘಟಿಸಿತು.

1947 ರ ಸ್ವಾತಂತ್ರ್ಯದ ಸಂದರ್ಭದಲ್ಲಿ ತೀವ್ರವಾಗಿ ಬೆಳೆದುಬಂದ ಕೋಮುವಾದದ ಅಲೆಯಿಂದ, ಕೋಮುಗಲಬೆಯ ದಳ್ಳುರಿಯಿಂದ ಅಲ್ಪಸಂಖ್ಯಾತರನ್ನು ರಕ್ಷಿಸಲು ಮುಂದಾಯಿತು. ಇದರಲ್ಲಿ ಹಲವು ಕಾರ್ಯಕರ್ತರೂ ತಮ್ಮ ಪ್ರಾಣವನ್ನು ಸಮರ್ಪಿಸಬೇಕಾಗಿ ಬಂದಿತು. ಮತ್ತೊಂದು ದೀರೋದಾತ್ತ ಚಳುವಳಿಯನ್ನು ಸ್ವಾತಂತ್ರ್ಯ ನಂತರ ಕಿಸಾನ್ ಸಭಾ ಇಲ್ಲಿ ಸಂಘಟಿಸಿತು.


ಜಲಂಧರ್‌ನ ತ್ಯಾಗ ಬಲಿದಾನಗಳ ಪ್ರತೀಕ ಈ ಪ್ರತಿಮೆ

1959 ರಲ್ಲಿ ಪ್ರತಾಪ್‌ಸಿಂಗ್, ನಾಯಕತ್ವದ ಅತ್ಯಂತ ನಿರ್ದಯಿಯಾಗಿದ್ದ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿಕರವನ್ನು ರೈತರ ಮೇಲೆ 104 ಕೋಟಿಯಷ್ಟು ಹೇರಿತು. ಇದರ ವಿರುದ್ಧ ಬೃಹತ್ ಆಂದೋಳನ ಬೆಳೆಯಿತು. ಸಾವಿರಾರು ಸಂಖ್ಯೆಯಲ್ಲಿ ರೈತರು ಭಾಗವಹಿಸುತ್ತಿದ್ದರು. ನಿರಾಹಾರ ಸತ್ಯಾಗ್ರಹ ನಡೆಸುತ್ತಿದ್ದ ಸಾವಿರಾರು ಜನರ ಮೇಲೆ ಕ್ರೂರ ಪೋಲೀಸ್ ದಾಳಿ ನಡೆಸಿತು. 9 ಜನ ಪುರುಷರು ಮತ್ತು ಮಹಿಳೆಯರನ್ನು ಬಲಿತೆಗೆದುಕೊಂಡಿತು. ಮಟ್ಟಹಾಕಬೇಕೆಂದು ನಡೆಸಿದ ಕ್ರೂರ ದಾಳಿಯ ಪರಿಣಾಮ ಚಳುವಳಿಯನ್ನು ತಡೆಯುವ ಬದಲು ಜನರ ನಡುವೆ ಆಕ್ರೋಶವನ್ನು ಬೆಳೆಸಿತು. ವಿಶಾಲ ಪ್ರಮಾಣದಲ್ಲಿ ಜನರು ಕ್ರೋಧಭರಿತರಾಗಿ ಭಾಗವಹಿಸಿದರು. ಜಿಲ್ಲೆ, ಜಿಲ್ಲೆಗಳಲ್ಲಿ ಸರ್ಕಾರದ ಧಮನಕಾರಿ ನೀತಿಯನ್ನು ಪ್ರತಿಭಟಿಸಿ ಸಾವಿರ ಸಾವಿರ ಸಂಖ್ಯೆಯಲ್ಲಿ ಭಾಗವಹಿಸಿ ಸರ್ಕಾರ ಸುಮಾರು 54 ಕೋಟಿ ಅಭಿವೃದ್ಧಿ ಕರ ಅನ್ಯಮಾರ್ಗವಿಲ್ಲದೇ ವಾಪಾಸು ಪಡೆಯುವಂತೆ ಮಾಡಿದೆ.

ಸಾಮ್ರಾಜ್ಯಶಾಹಿ ಪ್ರೇರಿತ- ಖಾಲಿಸ್ತಾನಿ ಪ್ರತ್ಯೇಕವಾದಿ ಉಗ್ರಗಾಮಿಗಳ ಹಾವಳಿ ವಿರುದ್ಧ ದೇಶದ ಸಮಗ್ರತೆ ಹಿಂದೂ-ಸಿಖ್ ಭಾವೈಕ್ಯತೆ ಮತ್ತು ಜಾತ್ಯಾತೀತೆಗಾಗಿ ಬಲವಾದ ಹೋರಾಟ ವನ್ನು ಕಿಸಾನ್ ಸಭಾ ಮತ್ತು ಎಡ ಚಳುವಳಿ ಈ ಪ್ರದೇಶದಲ್ಲಿ ನಡೆಸಿದೆ. ನೂರಾರುಕಾರ್ಯಕರ್ತರು ನಾಯಕರು ದೇಶಕ್ಕಾಗಿ ಸಮರ್ಪಿಸಿಕೊಂಡಿದ್ದಾರೆ. ಪಂಜಾಬ್ ಕಿಸಾನ್ ಸಭಾದ ರಾಜ್ಯ ಕಾರ್ಯದರ್ಶಿ "ಸರವಣ ಸಿಂಗ್ ಚೀಮಾ' ಉಗ್ರಗಾಮಿಗಳಿಗೆ ಬಲಿಯಾಗಿದ್ದಾರೆ.

ಜಲಿಯನ್‌ವಾಲಾಭಾಗ್‌ನಲ್ಲಿ ಸೇರಿದ್ದ ಜನತೆ ಶಾಂತಿಯುತ ಸಭೆ ನಡೆಯಲು (ಬ್ರಿಟೀಷರ ವಿರುದ್ಧ) ಜನರಲ್ ಡಯರ್ ಬಡಲಾರನೆಂದಾಗ, ತಮ್ಮ ಸಭೆ ಸೇರುವ ಹಕ್ಕನ್ನು ಉಳಿಸಿಕೊಳ್ಳಲು ಅವರು ಮುಂದಾಗಿ, ಸಭೆ ಸೇರಿದಾಗ ಜಗತ್ತು ಕಂಡರಿಯದ ದುರಂತವನ್ನು ಬ್ರಿಟೀಷರ ಅಧಿಕಾರಿ ನಡೆಸಿದುದು, ಹಸುಗೂಸುಗಳು ಸೇರಿದಂತೆ ಮಹಿಳೆಯರು 20000 ನಿರಾಯುಧ ಜನರ ಮಾರಣ ಹೋಮ ಇಲ್ಲಿಯ ಜನರ ತ್ಯಾಗ ಬಲಿದಾನದ ಪರಂಪರೆಯ ಪ್ರತೀಕ. ಜಲಿಯನ್‌ವಾಲಾಬಾಗ್ ಸಭೆಯ ಬಾಲ ಸ್ವಯಂ ಸೇವಕರಾಗಿದ್ದ ಉದಾಮಸಿಂಗ್‌ರ ಪ್ರತೀಕಾರ, ಭಗತ್‌ಸಿಂಗ್‌ನ ಕ್ರಾಂತಿಕಾರಿ ಕೆಲಸ ಎಲ್ಲವೂ ಈ ನೆಲದ ಮಣ್ಣೊಳಗೆ ಹಾಸು ಹೊಕ್ಕಾಗಿರುವುದನ್ನು ಎಳೆ ಎಳೆಯಾಗಿ ರಾಚಪಾಲ್‌ಸಿಂಗ್ ಪ್ರತಿನಿಧಿಗಳಿಗಾಗಿ ಬಿಡಿಸಿಟ್ಟರು.

ಬೀಡಿ ಕಾರ್ಮಿಕರ ಸಮಸ್ಯೆ ಬಗೆಹರಿಸಬೇಕಾದುದು ಕೇಂದ್ರ ಸರಕಾರ

ಕೆ.ಆರ್.ಶ್ರೀಯಾನ್

ಕರ್ನಾಟಕ ವಿಧಾನ ಸಭೆಯಲ್ಲಿ ಬಿಜೆಪಿಯ ಶಾಸಕ ಡಿ.ವಿ.ಸದಾನಂದ ಗೌಡ ಹಾಗೂ ಪ್ರಭಾಕರ ಬಂಗೇರ ಅವರು ಬೀಡಿ ಕಾರ್ಮಿಕರಿಗೆ ವಾರ ಪೂರ್ತಿ ಕೆಲಸದ ಜೊತೆಗೆ ಪರ್ಯಾಯ ಕೆಲಸ ಒದಗಿಸುವ ಕುರಿತು ಮಂಡಿಸಿದ ಗಮನ ಸೆಳೆಯುವ ಸೂಚನೆಗೆ ಕಾರ್ಮಿಕ ಸಚಿವ ಕಮರುಲ್ ಇಸ್ಲಾಮ್ ಹೇಳಿಕೆ ನೀಡುತ್ತಾ ಬೀಡಿ ಕಾರ್ಮಿಕರಿಗೆ ವಾರವಿಡೀ ಕೆಲಸ ಮತ್ತು ಪರ್ಯಾಯ ಕೆಲಸ ದೊರಕಿಸಿಕೊಡುವ ಬಗ್ಗೆ ಸದ್ಯದಲ್ಲೇ ಅಧಿಕಾರಿಗಳ ಸಭೆ ಕರೆಯುವುದಾಗಿ ತಿಳಿಸಿದ್ದಾರೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಇದು ಕಾರ್ಮಿಕರನ್ನು ದಾರಿತಪ್ಪಿಸುವ ಪ್ರಯತ್ನವಲ್ಲದೆ ಮತ್ತೇನೂ ಅಲ್ಲ.

4 ಲಕ್ಷ ಬೀಡಿ ಕಾರ್ಮಿಕರಿಗೆ ಬದಲಿ ಉದ್ಯೋಗ ಕೊಡಲು ರಾಜ್ಯ ಸರಕಾರದ ಅಧಿಕಾರಿಗಳ ಸಭೆಯಲ್ಲಿ ಪರಿಹಾರ ಸಿಗುವುದೆಂಬುದನ್ನು ಯಾರೂ ನಂಬಲು ಸಾಧ್ಯವಿಲ್ಲ. ರಾಜ್ಯ ಸರಕಾರದ ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ ಹೀಗೆ ಪ್ರತಿಯೊಂದು ಇಲಾಖೆಯಲ್ಲಿಯೂ ಮಹಿಳೆಯರಿಗೆ ಇರುವ ಉದ್ಯೋಗಾವಕಾಶದ ಬಗ್ಗೆ ಮಾಹಿತಿ ಪಡೆದು ಯೋಜನೆ ರೂಪಿಸಲಾಗುವುದು ಮತ್ತು ಅವರಿಗೆ ಕುಶಲತೆಯ ತರಬೇತಿ ಸಹ ನೀಡಲಾಗುವುದೆಂದೂ ಹೇಳಿದ್ದಾರೆ.

ಕಳೆದ ಫೆಬ್ರವರಿ 25 ರಂದು ನಾಗರೀಕ ಸೇವಾ ಟ್ರಸ್ಟ್‌ನವರು ಏರ್ಪಡಿಸಿದ್ದ ಬೀಡಿ ಕಾರ್ಮಿಕರ ರ್‍ಯಾಲಿಯಲ್ಲಿ ಕೆಲವು ಬೇಡಿಕೆಗಳನ್ನು ಇಟ್ಟುಕೊಂಡು ಅವುಗಳನ್ನು ಪಡೆಯುವ ಬಗ್ಗೆ ಪ್ರಚಾರ ಮಾಡಿದರು. ಬೀಡಿ ಕೈಗಾರಿಕೆ ಮತ್ತು ಕಾರ್ಮಿಕರು ಎದುರಿಸುತ್ತಿರುವ ಕೆಲಸದ ಸಮಸ್ಯೆಗಳು ಇತ್ಯಾದಿಗಳು ಕೇಂದ್ರ ಸರಕಾರದ ನೀತಿಯಿಂದಾಗಿ ಉದ್ಭವಿಸಿವೆ ಎಂಬುದನ್ನು ಮರೆಮಾಚಲು ಬಿಜೆಪಿ ಶಾಸಕರು ಅದನ್ನು ವಿಧಾನಸಭೆಯಲ್ಲಿ ಎತ್ತಿದ್ದಾರೆ. ಮಿನಿಸಿಗರೇಟು ನಿಷೇಧ ಹಾಗೂ ಸೆಂಟ್ರಲ್ ಎಕ್ಸೈಸ್ ರಿಯಾಯಿತಿ ರದ್ದುಪಡಿಸುವ ವಿಚಾರವಾಗಲೀ, 20 ಲಕ್ಷದ ಬೀಡಿ ಸಂಸ್ಥೆಗಳಿಗೆ ಕೊಟ್ಟಿರುವ ರಿಯಾಯಿತಿಯನ್ನು ರದ್ದುಪಡಿಸುವುದಾಗಲೀ, ದಕ್ಷಿಣ ಭಾರತದ ಅಥವಾ ರಾಷ್ಟ್ರೀಯ ಮಟ್ಟದಲ್ಲಿ ಬೀಡಿ ಕಾರ್ಮಿಕರಿಗೆ ಏಕರೂಪದ ಕನಿಷ್ಠ ವೇತನ ಜಾರಿಗೆ ತರುವ ಪ್ರಶ್ನೆಯಾಗಲೀ ಇವೆಲ್ಲಾ ಕೇಂದ್ರ ಸರಕಾರ ಮಾಡಬೇಕಾದ ಕೆಲಸಗಳು.

ಬೀಡಿ ಕೈಗಾರಿಕೆ ಮತ್ತು ಕಾರ್ಮಿಕರನ್ನು ಸಂಕಷ್ಟಕ್ಕೆ ಗುರಿಪಡಿಸುವ ಕೇಂದ್ರದ ನೀತಿಯ ವಿರುದ್ಧ ತೀವ್ರ ಹೋರಾಟ ಮಾಡುವುದರ ಬದಲು ರಾಜ್ಯ ಸರಕಾರ ಬದಲಿ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುವುದರಿಂದ ಜಿಲ್ಲೆಯ 4 ಲಕ್ಷಕ್ಕೂ ಮಿಕ್ಕಿರುವ ಬೀಡಿ ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ಸಿಗಲಾರದು. ಬೀಡಿಯನ್ನು ತಯಾರಿಸುವ ಸಂಸ್ಥೆಗಳಲ್ಲಿ ದೊಡ್ಡ ಸಂಖ್ಯೆಯ ಬೀಡಿ ತಯಾರಿಸುವ ಮತ್ತು ಸಣ್ಣ ಸಂಖ್ಯೆಯ ಬೀಡಿ ತಯಾರಿಸುವ ಸಂಸ್ಥೆಗಳೆಂಬ ವ್ಯತ್ಯಾಸವನ್ನು ತಂದು ಸಣ್ಣ ಬೀಡಿ ಸಂಸ್ಥೆಗಳಿಗೆ ಅಬಕಾರಿ ತೆರಿಗೆ ಮತ್ತು ಸೆಸ್ಸ್‌ನಿಂದ ವಿನಾಯತಿ ನೀಡಿರುವ ನೀತಿಯಿಂದಾಗಿ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ವಾತಾವರಣ ನಿರ್ಮಾಣವಾಗಿದ್ದು ಬ್ರಾಂಡ್ ಬೀಡಿಗಳ ಮಾರುಕಟ್ಟೆಗೆ ಸಣ್ಣ ಬೀಡಿಗಳು ತಮಗೆ ಸಿಕ್ಕಿರುವ ರಿಯಾಯಿತಿಯನ್ನು ದುರುಪಯೋಗ ಮಾಡಿ ಸರಕಾರಕ್ಕೆ ಕೊಡಬೇಕಾದ ತೆರಿಗೆ ಮತ್ತು ಕಾರ್ಮಿಕರಿಗೆ ಕೊಡಬೇಕಾದ ಸವಲತ್ತುಗಳನ್ನು ವಂಚಿಸಿ ಕಡಿಮೆ ದರಕ್ಕೆ ಬೀಡಿಗಳನ್ನು ಮಾರಾಟ ಮಾಡುವುದರಿಂದ ಸಮಸ್ಯೆ ಉದ್ಭವವಾಗಿದೆ ಎಂಬುದನ್ನು ಮರೆಮಾಚಲು ಸಾಧ್ಯವಿಲ್ಲ. ಈ ಸಮಸ್ಯೆ ಪರಿಹಾರವಾಗಬೇಕಾದರೆ ಬೀಡಿಯ ಮೇಲಿನ ಅಬಕಾರಿ ಸುಂಕ ಮತ್ತು ವೆಲ್ಫೇರ್ ಸೆಸ್ಸನ್ನು 1979ಕ್ಕೆ ಹಿಂದೆ ಇದ್ದ ರೀತಿಯಲ್ಲಿ ಹೊಗೆಸೊಪ್ಪಿನ ಮೇಲೆ ಹಾಕುವ ಮತ್ತು ವೇರ್‌ಹೌಸಿನಿಂದಲೇ ವಸೂಲು ಮಾಡುವ ಪದ್ಧತಿಯನ್ನು ಮರಳಿ ಜಾರಿಗೊಳಿಸಲು ಸಂಬಂಧಪಟ್ಟ ಕಾಯಿದೆಗಳಿಗೆ ತಿದ್ದುಪಡಿ ತರಬೇಕು. ಇದನ್ನು ಮಾಬೇಕಾದದ್ದು ಕೇಂದ್ರ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ. ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿ ಶಾಸಕರು ಕರ್ನಾಟಕ ವಿಧಾನಸಭೆಯಲ್ಲಿ ವ್ಯರ್ಥ ಕೂಗೆಬ್ಬಿಸುವ ಬದಲು ಕೇಂದ್ರದಲ್ಲಿರುವ ತಮ್ಮದೇ ಸರಕಾರದ ಮೇಲೆ ಒತ್ತಡ ಹಾಕಿ ತಮ್ಮ ಪ್ರಾಮಾಣಿಕತೆಯನ್ನು ತೋರಿಸಲಿ.

ಬೀಡಿ ಕೈಗಾರಿಕೆಯಲ್ಲಿ ಲಕ್ಷಗಟ್ಟಲೆ ಕುಟುಂಬಗಳು ದುಡಿಯುತ್ತಿದ್ದು ಇದಕ್ಕೆ ರಾಜ್ಯ ಸರಕಾರದ ವಿವಿಧ ಇಲಾಖೆಗಳಿಂದ ಸಿಗಬಹುದಾದ ಸವಲತ್ತುಗಳು ಎಂದಿಗೂ ಪರ್ಯಾಯ ವ್ಯವಸ್ಥೆಯಾಗಿ ಬರಲಾರದು ಆದ್ದರಿಂದ ನಾಗರೀಕ ಸೇವಾಟ್ರಸ್ಟ್‌ನವರ ವೇದಿಕೆಯಲ್ಲಿ ಭಾಗವಹಿಸಿದ ಶಾಸಕರು ವಿಧಾನ ಸಭೆಯಲ್ಲಿ ಗಮನ ಸೆಳೆದ ಸೂಚನೆಗಳು ಬೀಡಿ ಕಾರ್ಮಿಕರ ನಿಜವಾದ ಸಮಸ್ಯೆಗಳು ಹಾಗೂ ಈ ಕೈಗಾರಿಕೆಯನ್ನು ಉಳಿಸುವ ಹಾಗೂ ತಮ್ಮ ಕೆಲಸದ ಭದ್ರತೆಯನ್ನು ರಕ್ಷಿಸಿಕೊಳ್ಳಲು ಮಾಡಬೇಕಾದ ಚಳುವಳಿಯ ದಿಕ್ಕುತಪ್ಪಿಸುವುದೇ ಇವರ ಈ ಪ್ರಚಾರದ ಹಿಂದಿನ ಉದ್ದೇಶವಾಗಿದೆ. ○

ಇರಾಕ್ ಮೇಲಿನ ಯುದ್ಧ ವಿರೋಧಿಸಲು-ಜನದ್ರೋಹಿ ಬಜೆಟ್ ವಿರುದ್ಧ

ಪ್ರಬಲ ಆಂದೋಲನ ನಡೆಸಲು ಸಿಪಿಐ(ಎಂ) ಕರೆ

ಇರಾಕ್ ಮೇಲಿನ ಅಮೇರಿಕಾದ ಯುದ್ಧವನ್ನು ವಿರೋಧಿಸಿ ವ್ಯಾಪಕವಾದ ಪ್ರತಿಭಟನೆಯನ್ನು ನಡೆಸಲು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ತೀರ್ಮಾನಿಸಿದೆ. ಈಗಾಗಲೇ ರಾಜ್ಯಾದಾದ್ಯಂತ ಹಲವಾರು ಕಡೆ ಯುದ್ಧ ವಿರೋಧಿ ಕಾರ್ಯಕ್ರಮಗಳು ಜರುಗುತ್ತಿದ್ದು, ಅವುಗಳನ್ನು ಇನ್ನೂ ತೀವ್ರಗೊಳಿಸಿ ವಿಶಾಲವಾದ ಜನಸಮೂಹಗಳನ್ನು ಪಾಲ್ಗೊಳಿಸಲಾಗುವುದು. ಬೃಹತ್ ಮೆರವಣಿಗೆ, ರ‍್ಯಾಲಿ, ಬಹಿರಂಗ ಸಭೆಗಳು, ಅಲ್ಲದೆ ರಾಜ್ಯದ ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ, ಗ್ರಾಮ ಮಟ್ಟದಲ್ಲಿ ನಗರಗಳ ವಿವಿಧ ವಿಸ್ತರಣೆಗಳಲ್ಲಿ ಫ್ಯಾಕ್ಟರಿಗಳ ಮುಂದೆ ಯುದ್ಧವಿರೋಧಿ ಪಾದಯಾತ್ರೆ, ಬೀದಿ ಬದಿ ಸಭೆಗಳು, ಅಲ್ಲದೇ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಚಾರಸಂಕಿರಣಗಳು ಜರುಗಲಿವೆ. ಜನತಾದಳ(ಎಸ್.) ಮತ್ತು ಎಡಪಕ್ಷಗಳು ಮಾರ್ಚ್ 31 ರಂದು ಯುದ್ಧ ವಿರೋಧಿ ರ‍್ಯಾಲಿ ನಡೆಸಲು ರಾಷ್ಟ್ರಮಟ್ಟದಲ್ಲಿ ಕರೆ ನೀಡಿವೆ. ಬೆಂಗಳೂರಿನಲ್ಲಿ ಸಹ ರ‍್ಯಾಲಿ ನಡೆಯಲಿದೆ.

ಮಾರ್ಚ್ 23 ರಂದು ಕಾಂ. ನಿತ್ಯಾನಂದಸ್ವಾಮಿ ಯವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಸಭೆ ಸೇರಿದ್ದ ಪಕ್ಷದ ರಾಜ್ಯ ಸಮಿತಿಯು ಪ್ರಸಕ್ತ ರಾಜಕೀಯ ವಿದ್ಯಮಾನಗಳನ್ನು ಅವಲೋಕಿಸಿತಲ್ಲದೇ, ಜನತೆ ಜ್ವಲಂತ ಪ್ರಶ್ನೆಗಳ ಇತ್ಯರ್ಥಕ್ಕಾಗಿ ಹಾಗೂ ಸರ್ಕಾರದ ನೀತಿಗಳ ವಿರುದ್ಧ ತೀವ್ರ ಚಳುವಳಿ ನಡೆಸಲು ನಿರ್ಧರಿಸಿತು.

ಕೇಂದ್ರ-ರಾಜ್ಯ ಸರ್ಕಾರಗಳ ಜನದ್ರೋಹಿ ಬಜೆಟ್‌ಗಳ ವಿರುದ್ಧ ಪ್ರತಿಭಟನಾ ಸಪ್ತಾಹ - ಏಪ್ರಿಲ್ 1 ರಿಂದ 7 ರವರೆಗೆ

ಈಗಾಗಲೇ ಹೆಚ್ಚುತ್ತಲೇ ಇರುವ ಭೀಕರ ಬರಗಾಲ, ನಿರುದ್ಯೋಗ, ಪಡಿತರ ಆಹಾರಧಾನ್ಯಗಳ ವಿತರಣೆಯಲ್ಲಿ ವಂಚನೆ, ಗಂಭೀರ ಕೃಷಿ ಬಿಕ್ಕಟ್ಟಿನಂತಹ ತೀವ್ರ ಸಮಸ್ಯೆಗಳಿಂದ ಜನತೆ ತತ್ತರಿಸುತ್ತಿರುವಾಗ, ಇಂತಹ ಜನ ವಿಭಾಗಗಳಿಗೆ ಇನಿತೂ ಪರಿಹಾರ ನೀಡದೇ, ಕೇಂದ್ರ-ರಾಜ್ಯ ಸರ್ಕಾರಗಳು ತೀವ್ರ ತೆರನಾದ ಧಾಳಿಯನ್ನು ಬಜೆಟ್ ಮೂಲಕ ನಡೆಸಿವೆ. ಈ ಜನದ್ರೋಹದ ಬಜೆಟ್‌ಗಳ ವಿರುದ್ಧ ತೀವ್ರತರವಾದ ಪ್ರತಿಭಟನೆ, ಜನಜಾಗೃತಿ, ಪ್ರಚಾರಾಂದೋಲನವನ್ನು ನಡೆಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಸಭೆಯು ನಿರ್ಧರಿಸಿದೆ. ಅದರಂತೆ **ಏಪ್ರಿಲ್ 1 ರಿಂದ 7 ರವರೆಗೆ ರಾಜ್ಯಾದ್ಯಂತ ಜನ ವಂಚನೆಯ ಬಜೆಟ್ ವಿರೋಧಿ ಸಪ್ತಾಹ** ನಡೆಸಲಾಗುವುದು. ಈ ಅವಧಿಯಲ್ಲಿ ಪಕ್ಷದ ಘಟಕಗಳು ನೂರಾರು ಮೆರವಣಿಗೆ, ಬಹಿರಂಗ ಸಭೆಗಳನ್ನು ನಡೆಸಲಿದೆ. ಪ್ರತಿಯೊಂದು ತಾಲ್ಲೂಕು-ಪ್ರಮುಖ ಹೋಬಳಿ- ಗ್ರಾಮ ಮಟ್ಟದಲ್ಲಿಯೂ ವ್ಯಾಪಕ ಪ್ರಚಾರ ಕಾರ್ಯ ಕೈಗೊಳ್ಳಲಾಗುವುದು. ಪ್ರಮುಖ ಸಭೆಗಳಲ್ಲಿ ಪಕ್ಷದ ರಾಜ್ಯ ಮುಖಂಡರು ಪಾಲ್ಗೊಳ್ಳುವರು.

ವಿದ್ಯುತ್ ನೀತಿ ಹಾಗೂ ವಿದ್ಯುತ್ ಸಮಸ್ಯೆಗಳ ವಿರುದ್ಧ ನಿಲ್ಲದ ಹೋರಾಟ ಅಗತ್ಯ : ವಿದ್ಯುತ್ ದರಗಳ ವಿಪರೀತ ಏರಿಕೆಯ ಕೆಪಿಟಿಸಿಎಲ್ ನ ಪ್ರಸ್ತಾಪಗಳ ವಿರುದ್ಧ ಪ್ರಬಲ ಪ್ರತಿಭಟನೆಯಲ್ಲಿ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಗಳು ರಾಜ್ಯಾದ್ಯಂತ ಎಸ್ಕಾಂಗಳ ಮುಂದೆ ನಡೆಸಿದವು. ಇದನ್ನು ಲಕ್ಷಿಸಿ ಕೆಇಆರ್‌ಸಿ ದರಗಳ ಹೆಚ್ಚಳವನ್ನು ಕಡಿಮೆ ಮಾಡಿತ್ತು. ಸಿಪಿಐ(ಎಂ) ಪಕ್ಷ ಕೆ.ಇ.ಆರ್.ಸಿ. ಮುಂದೆ ಮಾಡಿದ ವಾದವನ್ನು ಪರಿಗಣಿಸಿ ಮತ್ತು ಖಾಸಗಿ ಕಂಪನಿಗಳಿಂದ ಹೆಚ್ಚುವಿದ್ಯುತ್ ಖರೀದಿಯ ಕೆಪಿಟಿಸಿಎಲ್‌ನ ಪ್ರಸ್ತಾಪವನ್ನು ತಿರಸ್ಕರಿಸಿತ್ತು. ಆದರೆ ಕೃಷ್ಣರ ಸರ್ಕಾರ ತನ್ನ ಬಜೆಟ್‌ನಲ್ಲಿ ಶೇ 5 ತೆರಿಗೆ ಹಾಕುವ ಮೂಲಕ ಮತ್ತೆ ದಾಳಿ ನಡೆಸಿದೆ. ಮಾತ್ರವಲ್ಲ ಕೆಪಿಟಿಸಿಎಲ್ ಮೂಲಕ ಖಾಸಗಿ ಕಂಪನಿಗಳಿಂದ ಹೆಚ್ಚು ವಿದ್ಯುತ್ ಖರೀದಿಸಲು **ಪುನರ್ ಅವಲೋಕನ ಅರ್ಜಿ** ಹಾಕಿರುವುದನ್ನು ಸಿಪಿಐ(ಎಂ) ಖಂಡಿಸಿ ಈ ಅರ್ಜಿಯನ್ನು ವಾಪಸ್ ಪಡೆಯಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ವಿದ್ಯುತ್ ಕ್ಷೇತ್ರದ ಖಾಸಗೀಕರಣ ಒಳಗೊಂಡು ವಿದ್ಯುತ್ ದರ ಏರಿಕೆ ಹೊರೆ ವಿರುದ್ಧ ನಿರಂತರ ಹೋರಾಟ ಮುಂದುವರಿಸಲು ಸಿಪಿಐ(ಎಂ) ನಿರ್ಧರಿಸಿದೆ.

ಪಂಚಾಯತ್ ನೌಕರರ ಮೇಲೆ ಪೋಲೀಸ್ ಧಾಳಿ : 12 ತಿಂಗಳಿಗಿಂತ ಹೆಚ್ಚಿನ ತಮ್ಮ ವೇತನವನ್ನು ನೀಡಬೇಕೆಂದು ಒತ್ತಾಯಿಸಿ ಶಾಂತಿಯುತ ಪ್ರದರ್ಶನ ನಡೆಸುತ್ತಿದ್ದ ರಾಯಚೂರಿನ ಗ್ರಾಮ ಪಂಚಾಯತ್ ನೌಕರರ ಮೇಲೆ ಪೋಲೀಸರು ತೀವ್ರವಾದ ಧಾಳಿ ನಡೆಸಿರುವುದನ್ನು ಸಿಪಿಐ(ಎಂ) ಉಗ್ರವಾಗಿ ಖಂಡಿಸಿದೆ. ಈ ಲಾಠಿ ಚಾರ್ಜ್‌ನಲ್ಲಿ ಒಬ್ಬ ನೌಕರರ ತಲೆ ಒಡೆದು, ಜೀವನ್ಮರಣದ ಸ್ಥಿತಿಯಲ್ಲಿದ್ದಾರೆ. ಈ ಘಟನೆಯಲ್ಲಿ ಭಾಗಿಯಾದ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ವೆಂಕಪ್ಪನನ್ನು ಸಸ್ಪೆಂಡ್ ಮಾಡಿ ಕೂಲಂಕುಶ ತನಿಖೆ ನಡೆಸಲು, ಕೂಡಲೇ ನೌಕರರ ಸಂಬಳ ಬಿಡುಗಡೆ ಮಾಡಲು ಕ್ರಮ ವಹಿಸಬೇಕೆಂದು ಸಿಪಿಐ(ಎಂ) ಮುಖ್ಯಮಂತ್ರಿಗಳಿಗೆ ಆಗ್ರಹಿಸಿದೆ. ಇಂತಹದ್ದೇ ಸ್ಥಿತಿಯಿಂದ ಸಾಲ ಮಾಡಿ ತೀರಿಸಲಾಗದೇ ಗುಲಬರ್ಗಾದ ಗ್ರಾ.ಪಂ. ನೌಕರ ಆತ್ಮಹತ್ಯೆ ಮಾಡಿಕೊಂಡಿದ್ದು ಗಮನಿಸಬೇಕು. ಹಾಗೇ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಗ್ರಾ. ಪಂ. ನೌಕರರಿಗೆ 6 ತಿಂಗಳಿಂದ 2 ವರುಷಗಳ ಸಂಬಳ ನೀಡದೇ ಇರುವಂತಹ ಧಾರುಣ ಪರಿಸ್ಥಿತಿ ಇದೆ. ಈ ಎಲ್ಲಾ ಅಂಶಗಳನ್ನು ಸರ್ಕಾರ ಇತ್ಯರ್ಥಪಡಿಸಬೇಕಿದೆ.

ನಕಲಿ ಔಷಧಿ ಹಗರಣ ಬಯಲು: ಸಚಿವರು, ಅಧಿಕಾರಿಗಳ ರಾಜಿನಾಮೆಗೆ ಆಗ್ರಹ: ಆಳವಾದ ತನಿಖೆಗೆ ಒತ್ತಾಯ

ಕರ್ನಾಟಕ ಔಷದಿ ನಿಯಂತ್ರಣ ಇಲಾಖೆ ಮಾಡಿದ 300 ಕೋಟಿರೂ ಅಧಿಕ ಮೊತ್ತದ ನಕಲಿ ಔಷಧಿ ಖರೀದಿಯ ಈ ಹಗರಣವನ್ನು ಲೋಕಾಯುಕ್ತರು ಬಯಲಿಗೆಳೆದಿದ್ದು ಅದರ ವಿವರಗಳು ಅತ್ಯಂತ ಆತಂಕಕಾರಿಯಾಗಿವೆ. ಇಡೀ ವ್ಯವಹಾರವನ್ನು ಆಳವಾದ ತನಿಖೆಗೊಪ್ಪಿಸಿ ಉಗ್ರ ಕ್ರಮ ಕೈಗೊಳ್ಳಬೇಕೆಂದು ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರನ್ನು ಸಿಪಿಐ(ಎಂ) ಆಗ್ರಹಿಸಿದೆ. ಈ ಕೂಡಲೇ ಆರೋಗ್ಯ ಸಚಿವರು ಮತ್ತು ಹೊಣೆಗಾರಿಕೆಯ ಅಧಿಕಾರಿಗಳು ರಾಜೀನಾಮೆ ನೀಡಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ಕೃಷ್ಣರ ಬಜೆಟ್ ....

ಪುಟ 3 ರಿಂದ

ಕೈ ಹಾಕಿಲ್ಲ ಎನ್ನುವುದು ಒಂದು ಮುಖ್ಯ ಕಾರಣ.


ರಾಜ್ಯದ ನೀರಾವರಿ, ವಿದ್ಯುತ್, ಶಿಕ್ಷಣ, ಆರೋಗ್ಯ, ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳು, ಪ್ರಾದೇಶಿಕ ಅಸಮಾನತೆಯ ನಿವಾರಣೆ ಇವುಗಳಿಗೆ ಬೇಕಾದ ಅಪಾರ ಹಣ ಸಂಪನ್ಮೂಲದ ಸಂಗ್ರಹದತ್ತ ಸರ್ಕಾರ ದೃಷ್ಟಿ ಹರಿಸಿಯೇ ಇಲ್ಲ. ಎಲ್ಲವೂ ಖಾಗೀಕರಣ ಎಂಬ ನೆಲೆಯಲ್ಲಿ ಈ ಕಾರ್ಯಗಳಿಗಾಗಿ ಸರ್ಕಾರ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವ ಒತ್ತಡಕ್ಕೆ ಒಳಗಾಗಿಲ್ಲ. ರಾಜ್ಯದ ಶ್ರೀಮಂತರ ಉಪಭೋಗಕ್ಕೆ ಹೆಚ್ಚು, ಹೆಚ್ಚು ಉತ್ತೇಜನ ನೀಡುವುದೇ ನೀತಿಯಾದುದರಿಂದ ಅವುಗಳ ಮೇಲೆ ತೆರಿಗೆ ಹೆಚ್ಚಿಸಿ, ಸಂಪನ್ಮೂಲ ಸಂಗ್ರಹಿಸುವ ಗೋಜಿಗೆ ಸರ್ಕಾರ ಹೋಗಿಲ್ಲ. ಅದೇ ರೀತಿ ಶ್ರೀಮಂತ ರೈತರ ಕೃಷಿ ಬಂಡವಾಳ ಶಾಹಿಗಳು ಹಾಗೂ ಭೂಮಾಲಕರಿಂದ ಕೃಷಿ ಆದಾಯ ತೆರಿಗೆ ಹಾಗೂ ಭೂ ಕಂದಾಯವನ್ನು ಸಂಗ್ರಹಿಸಲು ವಿಪುಲ ಅವಕಾಶವಿದ್ದರೂ ಬಳಸಿಕೊಳ್ಳುವ ಪ್ರಯತ್ನವನ್ನೇ ಸರ್ಕಾರ ಮಾಡಿಲ್ಲ.

ಹಾಗಾದರೆ ರಾಜ್ಯ ಅಭಿವೃದ್ಧಿ ಕಾರ್ಯದ ಗತಿಯೇನು? ಎಂದು ಯಾರಿಗಾದರೂ ಸಂಶಯ ಬರುತ್ತದೆ. ಅದಕ್ಕೆ ಕೃಷ್ಣರ ಸರ್ಕಾರ ಕಂಡುಕೊಂಡಿರುವ ಪರಿಹಾರ ಸಾಲ, ಸಾಲ, ಸಾಲ. ವಿಶ್ವ ಬ್ಯಾಂಕಿನಿಂದ ಸಾಲ, ಏಷ್ಯನ್ ಅಭಿವೃದ್ಧಿ ಬ್ಯಾಂಕಿನಿಂದ ಸಾಲ, ಶ್ರೀಮಂತ ದೇಶಗಳಿಂದ ಸಾಲ, ಕೇಂದ್ರ ಸರ್ಕಾರದಿಂದ ಅವರ ಸಂಸ್ಥೆಗಳಿಂದ ಸಾಲ, ಎಲ್ಲ ಸೇರಿ ಮುಖ್ಯಮಂತ್ರಿಗಳೇ ನೀಡಿದ ಅಂಕಿ ಅಂಶಗಳಂತೆ 38,140ಕೋಟಿಗಳಷ್ಟು ಸಾಲದ ಹೊರೆ ಹೊತ್ತಿದೆ.

ಈಗಾಗಲೇ ಮಾಡಿಕೊಂಡಿರುವ ಸಾಲದ ಒಪ್ಪಂದಗಳಂತೆ ಈ ಸಾಲದ ಹೊರೆ 2005 ರ ವೇಳೆಗೆ 46,560 ಕೋಟಿ ರೂಗಳಿಗೇರಲಿದೆ. ಕೃಷ್ಣ ಸರ್ಕಾರದ ಅಧಿಕಾರಕ್ಕೆ ಬರುವ ಮೊದಲು ಇದ್ದ ಸಾಲದ ಹೊರೆ ಕೇವಲ 10,446 ಕೋಟಿರೂಗಳು. ಈ ಮೂರು ವರ್ಷಗಳಲ್ಲಿಯೇ 28000 ಕೋಟಿ ರೂಗಳಿಗೂ ಹೆಚ್ಚು ಸಾಲಕ್ಕಾಗಿ ಸರ್ಕಾರ ಕೈ ಚಾಚಿದೆ. ಇದರಿಂದಾಗಿ ಮುಂದಿನ ವರ್ಷಗಳಲ್ಲಿ ದುಬಾರಿ ಬೆಲೆಯನ್ನು ಹೆಚ್ಚಿನತೆರಿಗೆ ಹಾಗೂ ವಿದ್ಯುತ್, ನೀರಾವರಿ ದರ, ಶಿಕ್ಷಣ ಶುಲ್ಕಗಳ ಮೂಲಕ ಕರ್ನಾಟಕದ ಜನತೆ ತೆರಬೇಕಾಗುತ್ತದೆ.

ಪ್ರಾದೇಶಿಕ ಅಸಮಾನತೆ

ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ತೀವ್ರವಾಗಿದೆ ಎಂಬ ಸಂಗತಿ ಹೊಸದೇನಲ್ಲ. ಆ ಬಗ್ಗೆ ಅಸಮಾಧಾನ ಭುಗಿಲೆದ್ದು ರಾಜ್ಯವನ್ನು ವಿಭಜಿಸಬೇಕೆಂಬ ಚಳುವಳಿಯಾಗಿ ರೂಪುಗೊಂಡಿರುವುದು, ಈ ಹಿನ್ನೆಲೆಯಲ್ಲಿಯೇ ಪ್ರಾದೇಶಿಕ ಅಸಮಾನತೆಯ ನಿವಾರಣೆಗಾಗಿ ನೇಮಿಸಿದ ಉನ್ನತಾಧಿಕಾರ ಸಮಿತಿ ತನ್ನ ವರದಿ ನೀಡಿರುವುದೂ ತಿಳಿದ ಸಂಗತಿ. ಆದರೆ ಪ್ರಾದೇಶಿಕ ಅಸಮಾನತೆಯ ಮೂಲ ಕಾರಣವಾದ ಪಾಳೆಯಗಾರಿ ಭೂ ಸಂಬಂಧಗಳನ್ನು ತೊಡೆಯದೆ, ಭೂಸುಧಾರಣೆಯ ಜಾರಿಯಲ್ಲಿ ಉಂಟಾದ ಅಗಾಧ ಅಸಮಾನತೆಯನ್ನು ನಿವಾರಿಸದೇ ಪ್ರಾದೇಶಿಕ ಅಸಮಾನತೆಯ ನಿವಾರಣೆಯ ಮಾತನ್ನಾಡುವುದರಲ್ಲಿ ಅರ್ಥವೇ ಇಲ್ಲ. ಅದೇ ಸಮಯದಲ್ಲಿ ಆ ಪ್ರದೇಶದಲ್ಲಿರುವ ತೀವ್ರ ಬಡತನ, ನಿರಕ್ಷರತೆಗಳಿಗೆ ಕಾರಣವಾದ ಕೃಷಿ ಕೂಲಿಕಾರರ ವಿಪುಲ ಸಂಖ್ಯೆಗೆ ಸಾಕಷ್ಟು ಕೆಲಸವನ್ನು ಕನಿಷ್ಠ ಕೂಲಿಯನ್ನು ಒದಗಿಸದೇ ಬೇರೆ ಯಾವ ಮಾರ್ಗವೂ ಇಲ್ಲ. ಆದರೆ ಕೃಷಿ ಬಂಡವಾಳ ಶಾಹಿಗಳು ಮಾತ್ರ ಕಣ್ಣಿಗೆ ಕಾಣುವ ಕೃಷ್ಣರವರಿಗೆ ಕೂಲಿಕಾರರ ಬಡರೈತರ, ಮತ್ತು ಮಹಿಳೆಯರ ಈ ಕೊರಗು ಬೇಕಿಲ್ಲ.



ಪ್ರಾದೇಶಿಕ ಅಸಮಾನತೆಯ ನಿವಾರಣೆಗೆಂದು ಮೂಗಿಗೆ ತುಪ್ಪ ಹಚ್ಚುವಂತೆ ಎರಡು ಮೂರು ಕಛೇರಿಗಳನ್ನು ವಿಶ್ವವಿದ್ಯಾಲಯ ಕೇಂದ್ರಗಳನ್ನು ಸ್ಥಾಪಿಸಿದರೆ ಸಾಕು ಆ ಮೂಲಕ ಆ ಪ್ರದೇಶಗಳ ಭೂಮಾಲಕರನ್ನು ತೃಪ್ತಿಗೊಳಿಸಿದರೆ ಸಾಕು ಎನ್ನುವ ನೀತಿಯನ್ನು ಕೃಷ್ಣರ ಬಜೆಟ್ ಅನುಸರಿಸಿದೆ. ಪ್ರಾದೇಶಿಕ ಅಸಮಾನತೆಯ ನೈಜ ಸಮಸ್ಯೆಗಳ ಬಗ್ಗೆ ನಿಸ್ಸೀಮ ನಿರ್ಲಕ್ಷ್ಯದ ವಿರುದ್ಧ ಹಿಂದುಳಿದ ಪ್ರದೇಶಗಳ ಜನರು ಹಾಗೂ ಕರ್ನಾಟಕದ ಎಲ್ಲಾ ಜನತೆ ದನಿ ಎತ್ತಬೇಕಾಗಿದೆ.

ಇರಾಕ್ ಮೇಲಿನ ಯುದ್ಧ ಆರಂಭಗೊಂಡು ವಾರವೊಂದು ಕಳೆಯಿತು. 2-3 ದಿನಗಳಲ್ಲೇ ಇಡೀ ಇರಾಕನ್ನು ವಶಪಡಿಸಿಕೊಳ್ಳುವುದಾಗಿ ಹೇಳುತ್ತಿದ್ದ ಅಮೇರಿಕಾ, ಬ್ರಿಟನ್ ಪಡೆಗಳು ಈಗ ತೀವ್ರವಾದ ಪ್ರತಿರೋಧವನ್ನು ಎದುರಿಸುತ್ತಿವೆ. ಅಲ್ಲಿ ಮಾತ್ರವಲ್ಲ ತನ್ನ ದೇಶಗೊಳಗೂ-ಹೊರಜಗತ್ತಿನಲ್ಲೂ......, ಅಮೆರಿಕಾ-ಬ್ರಿಟನ್‌ನಗಳಲ್ಲಿ ಪ್ರತಿಭಟನಾ ಚಳುವಳಿ ಈಗ ನಾಗರೀಕ ಅಸಹಕಾರ, ಚಳುವಳಿಯಾಗಿ ಮಾರ್ಪಾಡಾಗುತ್ತಿದೆ.

ತೈಲಕ್ಕಾಗಿ ರಕ್ತಪಾತ ಬೇಡ


ಮಾರ್ಚ್-31 ರಂದು ಬೃಹತ್ ಪ್ರತಿಭಟನೆಗೆ ಸಜ್ಜಾಗಿ

ಯುದ್ಧವಿರೋಧಿ ಪ್ರತಿಭಟನೆಯ ತೊರೆಗಳು ಸಾಗರವಾಗಿ ಬೋರ್ಗರೆಯಲಿ

- ಸುರ್ಜಿತ್

"ಅಮೇರಿಕ ಬ್ರಿಟನ್‌ಗಳ ಇರಾಕ್ ಯುದ್ಧದ ನಿಜವಾದ ಉದ್ದೇಶಗಳು ಮತ್ತು ಅದು ಮನುಕುಲದ ಭವಿಷ್ಯಕ್ಕೆ ಒಡ್ಡಿರುವ ಅಭಿಪ್ರಾಯ ಜಗತ್ತಿನ ಜನತೆಗೆ ಹಗಲಿನಷ್ಟು ಸ್ಪಷ್ಟವಾಗಿದೆ. ಆದ್ದರಿಂದ ಇಂತಹ ಪ್ರಭಲ ಪ್ರತಿಭಟನೆ ವ್ಯಕ್ತವಾಗುತ್ತಿದೆ.

ನಾವು ಇಂದು ಏಕ ದ್ರುವೀಯ ಜಗತ್ತಿನಲ್ಲಿ



ಬದುಕುತ್ತಿದ್ದೇವೆ. ಅದರಿಂದ ಎಲ್ಲಾ ಕಷ್ಟ-ಕಾರ್ಪಣ್ಯಗಳನ್ನು ಅನುಭವಿಸುತ್ತಿದ್ದೇವೆ. ಅಲಿಪ್ತ ಚಳುವಳಿ ಅದರ ಮಹತ್ವ ಕಳೆದುಕೊಂಡಿರದಿದ್ದರೂ, ನಿಸ್ತೇಜವಾಗಿದೆ. ಆದರೆ ಹಿಂದೆ ಇದ್ದಂತೆ, ಅಮೇರಿಕಾದ ಅಟ್ಟಹಾಸಕ್ಕೆ ಕಡಿವಾಣ ಹಾಕುವ ಸೋವಿಯತ್ ಒಕ್ಕೂಟದಂತಹ ಶಕ್ತಿ ಇಂದು ಇಲ್ಲ. ವಿಶ್ವ ಸಂಸ್ಥೆಯನ್ನು ಅಮೇರಿಕನ್-ಬ್ರಿಟೀಷ್ ಸಾಮ್ರಾಜ್ಯಶಾಹಿಗಳು ನಿರ್ಲಕ್ಷಿಸಿರುವುದರಿಂದ, ಅದು ಹಿಂದೆ ಲೀಗ್ ಆಫ್ ನೇಶನ್ಸ್ ನಶಿಸಿಹೋದಂತೆ ಆಗುವ ಅಪಾಯ ಇದೆ. ಈ ಸನ್ನಿವೇಶದಲ್ಲಿ ಜಾಗತಿಕ ಯಜಮಾನಿಕೆ ಸ್ಥಾಪಿಸುವ ಸಾಮ್ರಾಜ್ಯಶಾಹಿ ಹುನ್ನಾರಗಳಿಗೆ ಜನತೆಯೇ ಕಡಿವಾಣ ಹಾಕಬೇಕಿದೆ. ಶಾಂತಿ, ಸಮೃದ್ದಿ ಮತ್ತು ಬೆಳವಣಿಗೆ ಕಾಪಾಡಿಕೊಳ್ಳಲು ಬೇರೆ ಯಾವುದೇ ದಾರಿ ಇಲ್ಲ.

ಇಲ್ಲೇ ಭಾರತ ಸರ್ಕಾರದ ನಾಲಾಯಕ್ಕು ಪಾತ್ರ ಕಣ್ಣಿಗೆ ಹೊಡೆಯುತ್ತದೆ. ಅಲಿಪ್ತ ಚಳುವಳಿ ಮತ್ತು ಅಂತರಾಷ್ಟ್ರೀಯ ವಿದ್ಯಮಾನಗಳಲ್ಲಿ ಭಾರತ ಪ್ರಬಲ ಶಕ್ತಿಯಾದರೂ, ಈವರೆಗೆ ಸರ್ಕಾರ ಯುದ್ಧದ ವಿರುದ್ಧ ಇತರ ದೇಶಗಳನ್ನು ಅಣಿನೆರೆಸುವುದರಲ್ಲಿ ತೊಡಗಲು ನಿರಾಕರಿಸಿದೆ. ಮಾರ್ಚ್ 22 ರ ಸರ್ವ-ಪಕ್ಷ ಸಭೆಯಲ್ಲಿ ವಿರೋಧ ಪಕ್ಷಗಳ ಭಾಷೆ, ಸರ್ಕಾರದ ಭಾಷೆಯಾಗಲಾರದೆಂದು ಸರ್ಕಾರ ಹೇಳಿತು. ಆದರೆ ಈ ದೇಶದ ಜನತೆ ಸರ್ಕಾರದ ಭಾಷೆ ಜನತೆಯ ಭಾಷೆ ಆಗಲಾರದು ಎಂದು ಸ್ಪಷ್ಟವಾಗಿ ಸಾರಬೇಕಾಗಿದೆ. ನಮ್ಮ ಜನತೆ ಅಮೇರಿಕದ ಆಕ್ರಮಣವನ್ನು ಸ್ಪಷ್ಟವಾಗಿ ಖಂಡಿಸಿದ್ದಾರೆ. ಆದರೆ ಅದು ಸಾಲದು. ಮಹಾನ್ ಪ್ರತಿಭಟನೆ ಕಾರ್ಯಾಚರಣೆ ಮಾಡಬೇಕಾದ ಸಮಯ ಇದು.

ಮಾರ್ಚ್ 31 ರಂದು ಹಲವು ಪಕ್ಷಗಳು ಮತ್ತು ಪ್ರಮುಖ ವ್ಯಕ್ತಿಗಳ ಕರೆಯ ಮೇರೆಗೆ ಮಹಾನ್ ಪ್ರತಿಭಟನೆ ನಡೆಯಲಿದೆ. ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳು ತಮ್ಮದೇ ಪ್ರತಿಭಟನಾ ಪಕ್ಷ ಅಥವಾ ವಾರದ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಕೇರಳ ಮತ್ತಿತರ ರಾಜ್ಯಗಳಲ್ಲೂ ದೊಡ್ಡ ಕಾರ್ಯಾಚರಣೆ ಯೋಜಿಸಲಾಗಿದೆ. ಭಾರತದ ಜನತೆಯ ಯುದ್ಧ-ವಿರೋಧಿ ಆಶಯಗಳನ್ನು ಪ್ರತಿನಿಧಿಸುವ ಈ ಪ್ರತಿಭಟನೆಯ ತೊರೆಗಳು ಸೇರಿ ಸಾಗರದಂತೆ ಆರ್ಭಟಿಸಬೇಕಾಗಿದೆ. ಇಂದಿನ ಈ ಸಂದಿಗ್ಧ ಅಂತರಾಷ್ಟ್ರೀಯ ಪರಿಸ್ಥಿತಿಯಲ್ಲಿ ಈ ರೀತಿ ಮಾತ್ರ ಭಾರತದ ಜನತೆ ತಮ್ಮ ಪಾತ್ರ ವಹಿಸಲು ಸಾಧ್ಯ. ನಮ್ಮ ಸರ್ಕಾರವನ್ನು ಎಚ್ಚರಿಸಲು ಸಾಧ್ಯ.

ಕಂಗಾಲಾಗಿರುವ ಬುಶ್-ಬ್ಲೇರ್

ಕೆಲವೇ ದಿನಗಳಲ್ಲಿ ಸದ್ದಾಂ ಹುಸೇನ್ ಮತ್ತು ಇರಾಕಿ ನಾಯಕತ್ವ ನಾಶ ಮಾಡಿ ದೊಡ್ಡ ಪ್ರಮಾಣದಲ್ಲಿ ಸೈನಿಕರ ಶರಣಾಗತಿ, ನಾಗರೀಕರ ಹರ್ಷೋದ್ಗಾರದ ಸ್ವಾಗತ ಎಲ್ಲದರ ಕನಸು ಭಗ್ನವಾಗಿದೆ. ಮೊದಲ ದಿನಗಳ ಇರಾಕಿ ಪ್ರತಿರೋಧದಿಂದ ಕಂಗಾಲಾಗಿದ್ದಾರೆ. ಅವರ ಜನರಲ್‌ಗಳೂ ಅಷ್ಟೆ. ಅಮೇರಿಕನ್ ಸೈನಿಕರ ಹೆಣ, ಬಂಧಿಗಳಾಗಿದ್ದನ್ನು ಇರಾಕಿ ಟಿವಿ ತೋರಿಸಿದ್ದು ಅವರಿಗೆ ಗಾಬರಿ ಹುಟ್ಟಿಸಿದೆ. ಹಿಡಿಮೆಯಾಗದ ಇನ್ನೂ ಪ್ರಖರವಾಗುತ್ತಿರುವ ಯುದ್ಧವಿರೋಧಿ ಚಳುವಳಿ ಸಹ ಗಾಬರಿ ಹುಟ್ಟಿಸಿದೆ. ಕ್ಯಾಂಪ್ ಡೇವಿಡ್‌ನಲ್ಲಿ ಶೃಂಗಸಭೆ ನಡೆಸಿದ ಇಬ್ಬರೂ ಯುದ್ಧ ಹಲವು ತಿಂಗಳುಗಳ ಕಾಲ ನಡೆಯಬಹುದು. ಎಲ್ಲಾ ತ್ಯಾಗಕ್ಕೂ ಸಿದ್ಧ ರಾಗಿರಬೇಕು ಎಂದು ಜಂಟಿ ಪತ್ರಿಕಾ ಗೋಷ್ಠಿ ಯಲ್ಲಿ ಹೇಳಿದ್ದು ಜನರು ಇನ್ನಷ್ಟು ರೋಷ ಹುಟ್ಟಿಸಿದೆ. ಅದೇ ರೀತಿ ಇಡೀ ಇರಾಕ್ ಯುದ್ಧದ ವೆಚ್ಚ 7500 ಕೋಟಿ ಡಾಲರು ಆಗಬಹುದು ಎಂದು ಅಧ್ಯಕ್ಷ ಬುಶ್ ಪಾರ್ಲಿಮೆಂಟಿಗೆ ಮಂಡಿಸಿದ್ದೂ ಕೋಲಾಹಲಕ್ಕೆ ಕಾರಣವಾಗಿದೆ. ಯುದ್ಧದ ನಿಜ ಚಿತ್ರ ಅಮೇರಿಕನ್ನರ ಮುಂದಿದೆ ಈಗ. ವಿಶ್ವಸಂಸ್ಥೆ ಮಹಾಕಾರ್ಯದರ್ಶಿಗೆ ಸಹ ಧೈರ್ಯ ಬಂದು ಇರಾಕಿ ಮಾನವತಾ ಬಿಕ್ಕಟ್ಟಿಗೆ ಅಮೇರಿಕವೇ ಹೊಣೆ. ಅಮೇರಿಕವೇ ಅದರ ವೆಚ್ಚ ಹೊರಬೇಕು ಎಂದು ಒತ್ತಾಯಿಸಿದ್ದಾರೆ. ಇರಾಕಿ ಯುದ್ಧದ ಬಗ್ಗೆ ಭದ್ರತಾ ಸಮಿತಿ ಪುನಃ ಚರ್ಚೆ ಆರಂಭಿಸಿದೆ. ಆ ಚರ್ಚೆಯಲ್ಲಿ ದೇಶಗಳ ಪ್ರತಿನಿಧಿ ಆದ ಮೇಲೆ ಪ್ರತಿನಿಧಿಗಳು ಬುಶ್- ಬ್ಲೇರ್ ನೀತಿಯನ್ನು ಕಟುವಾಗಿ ಟೀಕಿಸಿದ್ದಾರೆ.

ಇತ್ತ ಯುದ್ಧಾನಂತರ 'ಪುನರ್ರಚನೆ'ಗೆ ಬುಶ್ ಕಾಂಟ್ರಾಕ್ಟ್ ಹಂಚಲು ಆರಂಭಿಸಿದ್ದು ಬ್ರಿಟೀಷರು ಹುಬ್ಬೇರಿಸುವಂತೆ ಮಾಡಿದೆ. ಬುಶ್ ಬ್ಲೇರ್ ಶೃಂಗ ಸಭೆಯಲ್ಲಿ ಈ 'ಲೂಟಿ'ಯನ್ನು ಹಂಚಿಕೊಳ್ಳುವುದು ಹೇಗೆ ಎಂಬ ಬಗೆಗೂ ಚರ್ಚೆ ನಡೆಯಿತಂತೆ. ನಮ್ಮ ಸಿಐಐನ ಉದ್ಯಮಿಗಳು ಈ ಲೂಟಿಯಲ್ಲಿ ಪಾಲು ಸಿಗಬಹುದೇ ಎಂದು ಹಲುಬುತ್ತಿದ್ದಾರಂತೆ.!!

ಶರತ್‌ಚಂದ್ರ

ರಣರಂಗದಲ್ಲಿ....

ಅಮೇರಿಕನ್- ಬ್ರಿಟನ್ ಸೈನ್ಯ ಬಾಗ್ದಾದ್ ಮೇಲೆ ಭೀಕರ ಬಾಂಬ್ ದಾಳಿಯಿಂದ ಯುದ್ಧ ಆರಂಭಿಸಿದವು. ಕೆಲವೇ ಗಂಟೆಗಳಲ್ಲಿ ಸಾವಿರಾರು ಪಡೆಗಳನ್ನು ದಕ್ಷಿಣ ಇರಾಕಿನಿಂದ ನುಗ್ಗಿಸಲಾಯಿತು. ಮೊದಲ ದಿನವೇ ಬಾಗ್ದಾದ್ ಮೇಲಿನ ದಾಳಿಯಲ್ಲಿ ಸದ್ದಾಂ ಹುಸೇನ್ ಮತ್ತು ಇರಾಕಿ ಉಚ್ಚ ನಾಯಕತ್ವ ಸತ್ತಿದ್ದಾರೆ. ಇರಾಕಿನ ಒಂದು ಡಿವಿಜನ್ ಶರಣಾಗತವಾಗಿದೆ. ಸಾವಿರಾರು ಇರಾಕಿ ಜನ ಅಮೇರಿಕದ ಸೈನ್ಯವನ್ನು ಸ್ವಾಗತಿಸಿದ್ದಾರೆ ಎಂದೆಲ್ಲಾ ಹೇಳಿದ್ದು ಕೆಲವೇ ಗಂಟೆಗಳಲ್ಲಿ ಬೊಗಳೆ ಎಂದು ಸಾಬೀತಾಗಿದೆ. ಇದೇ ರೀತಿ 2-3 ದಿನಗಳಲ್ಲಿ ಅಮೇರಿಕನ್ ಸೈನ್ಯ ತುಕಡಿ ಸುತ್ತುವರೆಯುತ್ತಿದೆ. ಉಮ್ ಕಾಸ್ರ್ ಈಗಾಗಲೇ ಅಮೇರಿಕಾದ ವಶವಾಗಿದೆ ಎಂದು ಹೇಳಲಾಯಿತು. ಅದೂ ಬೊಗಳೆ ಎಂದು ಸಿದ್ಧವಾಗಿದೆ.

ಈ ಬಾರಿಯ ಯುದ್ಧದಲ್ಲಿ ಅತ್ಯಂತ ನಿಖರವಾಗಿ ಮಿಲಿಟರಿ ಗುರಿಗಳಿಗೆ ಮಾತ್ರ ಹೊಡೆಯಬಲ್ಲ ಅತ್ಯಾಧುನಿಕ ಕ್ಷಿಪಣಿಗಳಿವೆ. ಅತ್ಯಾದುನಿಕ ಉಪಕರಣಗಳ ಸಹಾಯದಿಂದ ತಪ್ಪು ಗುರಿಗಳಿಗೆ ಹೊಡೆಯುವ ಸಾಧ್ಯತೆಯೇ ಇಲ್ಲ ಎಂದು ಹೇಳಲಾಯಿತು. ಬಾಗ್ದಾದ್‌ನ ಮತ್ತು ಇತರ ನಗರಗಳ ಹಲವು ಜನನಿಬಿಡ ಪ್ರದೇಶಗಳ ಮೇಲೆ ಕ್ಷಿಪಣಿ ದಾಳಿ ನಡೆಯಿತು. ಬಾಗ್ದಾದ್, ಬಸ್ರಾ ಮತ್ತಿತರ ಪ್ರಮುಖ ನಗರಗಳ ವಿದ್ಯುತ್, ನೀರು ವ್ಯವಸ್ಥೆ ಬಾಂಬ್ ಧಾಳಿಯಿಂದ ನಾಶವಾಗಿದೆ ಅದಕ್ಕಿಂತಲೂ ಹೆಚ್ಚಾಗಿ ಅಮೇರಿಕ ಬ್ರಿಟನ್ ಕ್ಷಿಪಣಿಗಳು ತಮ್ಮದೇ ಹೆಲಿಕಾಪ್ಟರುಗಳನ್ನು ಹೊಡೆದುರುಳಿಸಿದ ಕ್ಷಿಪಣಿ ಎಸೆಯುವ ಲಾಂಚರ್‌ಗಳ ಮೇಲೆ ವಿಮಾನದಾಳಿ ನಡೆದ ವರದಿಯಾಗಿ ನಗೆಪಾಟಲಾಗಿದೆ.

ಈ ನಡುವೆ ಇರಾಕಿಗಳು ಹೊಡೆದುರುಳಿಸಿದ ಅಮೇರಿಕನ್ ವಿಮಾನದ ಚಿತ್ರವನ್ನು ಮತ್ತು ಯುದ್ಧದಲ್ಲಿ ಸೆರೆ ಹಿಡಿದ ಅಮೇರಿಕನ್ ಸೈನಿಕರನ್ನು ಟಿವಿಯಲ್ಲಿ ತೋರಿಸಿದ ಮೇಲೆ ಅಮೇರಿಕನ್ ಸೈನ್ಯದ ವಕ್ತಾರರ ಬೊಗಳೆಗೆ ಕಡಿವಾಣ ಬಿದ್ದಿದೆ. ಆದರೂ ಸುಳ್ಳುಗಳ ಸರಮಾಲೆ ಸಿಡಿಯುತ್ತಲೇ ಇದೆ.

ಈ ನಡುವೆ ವಿಮಾನ - ಕ್ಷಿಪಣಿದಾಳಿ ಇರಾಕ್‌ನ ಪ್ರಮುಖ ನಗರಗಳಲ್ಲಿ ಮಿಲಿಟರಿ ನಾಗರಿಕ ಎರಡೂ ಗುರಿಗಳಿಗೆ ಭೀಕರ ಹಾನಿ ಮಾಡಿವೆ ಎಂಬುದಕ್ಕೆ ಸಂಶಯವಿಲ್ಲ. ಹಲವು ತುಕಡಿಗಳು ಇರಾಕ್‌ನ ಒಳಗೆ ಕ್ಷಿಪ್ರಗತಿಯಲ್ಲಿ ಸಾಗಿ ಪ್ರಮುಖ ನಗರಗಳ ಹತ್ತಿರ ಬಂದಿದೆ. ದಾರಿಯಲ್ಲಿ ಹಲವು ಕಡೆ ತೀವ್ರ ಇರಾಕಿ ಪ್ರತಿರೋಧ ಕಂಡು ಬಂದಿದೆ. ನಗರಗಳ ಸುತ್ತಮುತ್ತಲ ಪ್ರದೇಶದಲ್ಲಂತೂ ತೀವ್ರ ಪ್ರತಿರೋಧ ಕಂಡು ಬಂದಿದೆ. ಮರುಭೂಮಿಯ ಬಿರುಗಾಳಿ ಸಹ ಅಮೇರಿಕನ್ ಸೈನ್ಯದ ಮುನ್ನಡೆ ತೀವ್ರ ಹಿಂಜರಿತ ತಂದಿದೆ.


ಉತ್ತರ ಇರಾಕಿನಲ್ಲಿ ಸಾವಿರದಷ್ಟು ಪಾರಾಟ್ರೋಪರ್‌ಗಳನ್ನು ಇಳಿಸುವ ಮೂಲಕ ಇನ್ನೊಂದು ಯುದ್ಧಭೂಮಿಯನ್ನು ಅಮೇರಿಕ ತೆರೆದಿದೆ. ಆದರೆ ಎಲ್ಲೆಡೆ ಅಮೇರಿಕನ್ ಸೈನ್ಯಕ್ಕೆ ತೀವ್ರ ಪ್ರತಿರೋಧ ಕಂಡುಬಂದಿದೆ. ಹತಾಶರಾಗಿ ಶರಣಾಗತರಾಗುವುದಾಗಲಿ, ಪಲಾಯನ ಮಾಡುವುದಾಗಲಿ ಕಂಡುಬಂದಿಲ್ಲ. ಸದ್ಯಕ್ಕಂತೂ ರಣರಂಗದಲ್ಲಿ ಬುಶ್, ಬ್ಲೇರ್ ಗ್ಯಾಂಗ್‌ನ ಲೆಕ್ಕಾಚಾರ ತಲೆಕೆಳಗಾಗಿದೆ. ಈ ನಡುವೆ ಅಮೇರಿಕದ ಮಾತು ಉಲ್ಲಂಘಿಸಿ ತುರ್ಕಿ ಸೈನ್ಯ ಉತ್ತರ ಇರಾಕ್ ಪ್ರವೇಶಿಸಿದೆ ಎಂದೂ ಸುದ್ದಿಯಾಗಿದೆ.

ಯುದ್ಧ-ವಿರೋಧ ಅಸಹಕಾರ ಚಳುವಳಿಯತ್ತ

ಇರಾಕಿನ ಮೇಲೆ ಅಮೇರಿಕನ್-ಬ್ರಿಟನ್ ಆಕ್ರಮಣ ಆರಂಭವಾದಾಗಿಂದ ಪ್ರತಿದಿನ ಜಗತ್ತಿನಾದ್ಯಂತ ಬೃಹತ್ ಪ್ರತಿಭಟನೆಗಳು ನಡೆದಿವೆ. ಯುರೋಪು, ಅಮೇರಿಕಗಳಲ್ಲದೆ ಏಶ್ಯಾ, ಆಫ್ರಿಕಾಗಳಲ್ಲೂ ವ್ಯಾಪಕವಾಗಿ ಪ್ರತಿಭಟನೆಗಳಾಗಿವೆ. ಅಮೇರಿಕನ್ ರಾಯಭಾರ ಕಚೇರಿ, ಅಮೇರಿಕನ್ ಧ್ವಜಗಳು, ಮಾಕ್ ಡೊನಾಲ್ಡ್ ಮುಂತಾದ ಯಾವುದೇ ಪ್ರತೀಕಗಳು ಪ್ರತಿಭಟನಾಕಾರ ರೊಚ್ಚಿಗೆ ಬಲಿಯಾಗುತ್ತಿವೆ.

ಅಮೇರಿಕದಲ್ಲಿ ಯುದ್ಧ ಆರಂಭವಾದ ಕೆಲವು ದಿನಗಳಲ್ಲಿ ಯುದ್ಧ-ವಿರೋಧಿ ಚಳುವಳಿ ಹಲವು ಕಡೆ ತಂತ್ರಗಳನ್ನು ಬದಲಾಯಿಸಿ ಹೊಸ ರೂಪಗಳನ್ನು ಅಳವಡಿಸುತ್ತಿದೆ. ಆದರೆ ಚಳುವಳಿಯ ಪ್ರಖರತೆ, ಜನರ ಪಾಲ್ಗೊಳ್ಳುವಿಕೆ ಕಡಿಮೆಯಾಗಿಲ್ಲ. ನ್ಯೂಯಾರ್ಕ್‌ನಲ್ಲಿ ನೂರಾರು ಪ್ರತಿಭಟನಾಕಾರರು ಇವತ್ತೂ (ಮಾ-27) ಸಹ ರಸ್ತೆಗಳಲ್ಲಿ ಮಲಗಿ ರಸ್ತೆ ತಡೆ ಮಾಡಿದರು. ಪೋಲೀಸರು 'ರಸ್ತೆ ತಡೆ'ಗಾರರನ್ನು ಬಂಧಿಸುತ್ತಿದ್ದಂತೆ ಇನ್ನಷ್ಟು ಪ್ರತಿಭಟನಾಕಾರರು ಬರುತ್ತಿದ್ದರು.

ಸಾನ್‌ಫ್ರಾನ್ಸಿಸ್ಕೋ ಮತ್ತು ನ್ಯಾಯಾರ್ಕ್ ಎರಡರಲ್ಲೂ ಯುದ್ಧಕ್ಕೆ ಸಂಬಂಧಪಟ್ಟ ಕಂಪನಿಗಳು ಮತ್ತು ಕೇಂದ್ರ ಸರ್ಕಾರದ ಕಚೇರಿಗಳ ಪಿಕೆಟಿಂಗ್‌ನ ರೂಪವನ್ನು ಚಳುವಳಿ ತಾಳಿದೆ. ಮಾರ್ಚ್-27 ರಂದು ಸಾನ್‌ಫ್ರಾನ್ಸಿಸ್ಕೋದಲ್ಲಿ ನೂರಾರು ಪ್ರದರ್ಶನಕಾರರು ಕೇಂದ್ರಸರ್ಕಾರ ಕಛೇರಿ ಮತ್ತು ಕಲೆಕ್ಟರ್ ಎಂಬ ರಕ್ಷಣಾ ಕಂಪನಿ ವಹಿವಾಟಿನ ಸಂಸ್ಥೆಯ ಮುಂದೆ ಪಿಕೆಟಿಂಗ್ ನಡೆಸಿದರು.



ವಾಶಿಂಗ್‌ಟನ್‌ನಲ್ಲಿ ನಡೆದ ಪ್ರದರ್ಶನದಲ್ಲಿ ಬಂಧಿತರಾದ ನೂರಾರು ಚಳುವಳಿಕಾರರಲ್ಲಿ ಇಬ್ಬರು ನೋಬೆಲ್ ಶಾಂತಿ ಪ್ರಶಸ್ತಿ ವಿಜೇತರು, ಇಬ್ಬರು ಲಾರ್ಡ್ ಬಿಷಪ್‌ಗಳು ಮತ್ತು 'ವಿಯೆಟ್ನಾಮ್'ದಲ್ಲಿ 'ಪೆಂಟಗಾನ್ ಪೇಪರ್ಸ್' ಎಂಬ ಸರ್ಕಾರಿ ದಸ್ತಾವೇಜು ಬಯಲು ಮಾಡಿದ ಪ್ರಸಿದ್ಧ ಲೇಖಕ ಎಲಿಸ್‌ಬರ್ಗ್ ಬಂಧನಕ್ಕೊಳಗಾದವರು ಸೇರಿದ್ದರು.

ಬ್ರಿಟನ್‌ನಲ್ಲೂ ಯುದ್ಧ-ವಿರೋಧಿ ಚಳುವಳಿ ಸಾರ್ವತ್ರಿಕ ಅಸಹಕಾರ ಚಳುವಳಿ ರೂಪ ತಾಳುತ್ತಿದೆ. ಯುರೋಪಿನಾದ್ಯಂತ ಅಮೇರಿಕನ್ ಬ್ರಿಟೀಷ್ ಕಂಪನಿಗಳ ಸರಕುಗಳನ್ನು ಬಹಿಷ್ಕಾರ ಮಾಡುವ ಚಳುವಳಿ ಹಲವು ಕಡೆ ಆರಂಭವಾಗಿದೆ. ಬೆಲ್ಜಿಯಂ ರಾಜಧಾನಿ ಬ್ರಸ್ಸೆಲ್ಸ್‌ನಲ್ಲಿ ಯುರೋಪಿಯನ್ ಪಾರ್ಲಿಮೆಂಟ್ ಕೆಲವು ಸದಸ್ಯರು ಅಮೇರಿಕನ್ ಕಂಪನಿ ಟೆಕ್ಸಾರೇ ಪೆಟ್ರೋಲ್ ಸ್ಟೇಶನ್ ಪಿಕೆಟ್ ಮಾಡುವ ಮೂಲಕ ಈ ಕಾರ್ಯಕ್ರಮ ಆರಂಭಿಸಿದರು.

‘ಈ ಅನಾಗರಿಕ ಯುದ್ಧ ನಿಲ್ಲಿಸಿ’

ಉತ್ತರ ಕನ್ನಡ ಸಾಹಿತಿಗಳ ಒಕ್ಕೊರಲ ಆಗ್ರಹ

ಇರಾಕ್ ಮೇಲಿನ ಅಮೇರಿಕಾದ ಯುದ್ಧಕೋರತನಕ್ಕೆ ಬಲವಾದ ಪ್ರತಿರೋಧ ವ್ಯಕ್ತಪಡಿಸಿರುವ ಉತ್ತರ ಕನ್ನಡ ಜಿಲ್ಲೆಯ ಲೇಖಕರು ವಿವರವಾದ ಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ.

ಈ ಯುದ್ಧ ಶಾಂತಿ ವಿರೋಧಿಯೂ ಅನಾಗರಿಕತ್ವದಿಂದ ಕೂಡಿದ್ದು ಆಗಿದೆ. ಆದ್ದರಿಂದ ಅಮೇರಿಕಾದ ಈ ಯುದ್ಧವನ್ನು ನಾವು ಬಲವಾಗಿ ಖಂಡಿಸುತ್ತೇವೆಲ್ಲದೆ ಕೂಡಲೇ ಯುದ್ಧ ನಿಲ್ಲಿಸಿ ಶಾಂತಿ ಪ್ರಕ್ರಿಯೆಯನ್ನು ನಡೆಸಲು ವಿಶ್ವಸಂಸ್ಥೆ ಅಮೇರಿಕಾಯ ಮೇಲೆ ಹೆಚ್ಚಿನ ಒತ್ತಡ ಹೇರಬೇಕೆಂದು ಒತ್ತಾಯಿಸುತ್ತೇವೆ” ಎಂದು ಘೋಷಿಸಿ ಆ ಪತ್ರಕ್ಕೆ ಸಹಿ ಹಾಕಿದ್ದಾರೆ.

ಎಸ್.ಆರ್.ನಾಯಕ(ಹೊನ್ನಾವರ), ವಿಷ್ಣು ನಾಯ್ಕ (ಅಂಕೋಲಾ), ವಿ.ಜೆ.ನಾಯಕ (ಅಂಕೋಲಾ), ಶಂಭು ಹೆಗಡೆ, ಕೆರೆಮನೆ(ಹೊನ್ನಾವರ), ಬಿ.ಎ.ಸನದಿ (ಕುಮಟಾ), ಬಿ.ಪಿ.ರಾಮಯ್ಯ(ಕುಮಟಾ), ಶಾಂತಾರಾಮ ನಾಯಕ, ಹಿಚ್ಕಡ (ಅಂಕೋಲಾ), ಜೈರಾಮ ಹೆಗಡೆ (ಸಿರ್ಸಿ), ಶಾಂತಿ ನಾಯಕ(ಹೊನ್ನಾವರ), ಜಯಶ್ರಿ ಹೆಗಡೆ, ಕಣ್ಣಿ(ಹೊನ್ನಾವರ), ಎಂ.ಜಿ.ಹೆಗಡೆ (ಕುಮಟಾ), ನಜೀರ್ ಚಂದಾವರ (ಸಿರ್ಸಿ), ಮೋಹನ ಕುರಡಗಿ (ಯಲ್ಲಾಪುರ), ಶಂಕರ ಸಿ.ಎ. (ದಾಂಡೇಲಿ), ಗಂಗಾಧರ ಹಿರೇಗುತ್ತಿ (ಕಾರವಾರ), ವಿರಣ ಭಟ್ (ಕುಮಟಾ), ಮಹೇಶ ಅಡಕೊಳಿ (ಕುಮಟಾ), ಡಾ.ಆರ್.ವಿ.ಭಂಡಾರಿ (ಹೊನ್ನಾವರ), ವಿಠ್ಠಲ ಪೆರುಮನೆ (ಬಂಕಿಕೊಡ್ಲ), ಶ್ರೀಪಾದ ಹೆಗಡೆ ಕಣ್ಣಿ (ಹೊನ್ನಾವರ), ಶ್ರಿಪಾದ ಶೆಟ್ಟಿ (ಹೊನ್ನಾವರ), ಸಿ.ಆರ್.ಶ್ಯಾನಭಾಗ(ಸಿರ್ಸಿ), ವಿಡಂಬಾರಿ (ಸಿರ್ಸಿ), ಮಾಸ್ತಿ ಗೌಡ(ಹೊನ್ನಾವರ), ಪರಶುರಾಮ ಪಶ್ಚಾಪುರ (ಕಾರವಾರ) , ಎಸ್.ಬಿ.ಜೋಗುರ(ಕಾರವಾರ), ಆರ್.ಜಿ.ಗುಂದಿ(ಅಂಕೋಲಾ), ಜಮೀರುಲ್ಲಾ ಶರೀಫ್(ಭಟ್ಕಳ), ಶ್ಯಾಮ ಹುದ್ದಾರ (ಅಂಕೋಲಾ), ಮೋಹನ ಹಬ್ಬು (ಅಂಕೋಲಾ), ಶಿವಾನಂದ ಹೆಗಡೆ, ಕೆರೆಮನೆ (ಹೊನ್ನಾವರ), ವಿಠ್ಠಲ ಭಂಡಾರಿ (ಹೊನ್ನಾವರ)



ಇರಾಕ್ ಯುದ್ಧದ ವಿರುದ್ಧ ತುಮಕೂರಿನಲ್ಲಿ ಪ್ರತಿಭಟನೆ

ಅಮೇರಿಕಾ ಸಾಮ್ರಾಜ್ಯಶಾಹಿಯ ಇರಾಕ್ ಮೇಲೆ ನಡೆಸುತ್ತಿರುವ ಅಮಾನವೀಯ ಯುದ್ಧ ವಿರೋಧಿಸಿ ತುಮಕೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ವಿವಿಧ ಸಂಘಟನೆಗಳಿಂದ 800ಕ್ಕೂ ಹೆಚ್ಚು ನಾಗರೀಕರು ಭಾಗವಹಿಸಿದ್ದ ಈ ಪ್ರತಿಭಟನೆಯಲ್ಲಿ ಹಲವಾರು ವಿಜ್ಞಾನಿಗಳು, ಅಧ್ಯಾಪಕರು, ಬುದ್ದಿಜೀವಿಗಳು ಭಾಗವಹಿಸಿದ್ದು ಮಾತ್ರವಲ್ಲದೆ, ದುಡಿಯುವ ಜನತೆ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಹೆಸರಾಂತ ವಿಜ್ಞಾನಿ ಡಾ.ಸವ್ಯಸಾಚಿ ಚಟರ್ಜಿ, ಮುಗ್ಧ ಜನರ ಹತ್ಯೆಗಳಾಗುತ್ತಿರುವ ಅಮೇರಿಕಾವು ಇಡೀ ಜಗತ್ತಿಗೆ ಒಡೆಯನಾಗಬೇಕೆಂದು ದುರುದ್ದೇಶ ಹೊಂದಿದೆ ಎಂದು ಆರೋಪಿಸಿದರು.

ಇರಾಕ್‌ನ ತೈಲ ಸಂಪನ್ಮೂಲದ ಮೇಲೆ ಕಣ್ಣಿಟ್ಟಿರುವ ಅಮೇರಿಕಾ ಜನರ ಸಾವಿಗೆ ಕುರುಡಾಗಿದೆ. ಜಗತ್ತಿನೆಲ್ಲೆಡೆ ನಡೆಯುತ್ತಿರುವ ಯುದ್ಧ ವಿರೋಧಿ ಪ್ರತಿಭಟನೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರು ಭಾಗವಹಿಸಿ ಅಮೇರಿಕಾ ಮತ್ತು ಮಿತ್ರರಾಷ್ಟ್ರಗಳ ನೀತಿಯನ್ನು ಖಂಡಿಸಬೇಕೆಂದು ಇತರ ಮುಖಂಡರು ಮಾತನಾಡಿದರು.


ಸಿಐಟಿಯುನ ಹಿರಿಯ ನಾಯಕ ಮಹಮ್ಮದ್ ದಸ್ತಗೀರ್ ಸಿಐಟಿಯು ರಾಜ್ಯ ಕಾರ್ಯದರ್ಶಿ ಸಯ್ಯದ್ ಮುಜೀಬ್, ಬೆಂಗಳೂರು ವಿಶ್ವವಿದ್ಯಾಲಯದ ಅಧ್ಯಾಪಕರ ಸಂಘದ ಉಪಾಧ್ಯಕ್ಷ ಪ್ರೊ.ಜಯಪ್ರಕಾಶ್, ಬಿಜಿವಿಎಸ್‌ನ ರಾಜ್ಯ ಕಾರ್ಯದರ್ಶಿ ಇ.ಬಸವರಾಜು, ವರ್ಲ್ಡ್ ಸೋಷಿಯಲ್ ಫೋರಂನ ಎನ್.ಎ.ಖಾನ್, ಸಿಐಟಿಯು ನ ಹಿರಿಯ ಮುಖಂಡ ವಿ.ಕೋದಂಡ ರಾಮು ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿಯ ಅಲ್ತಾಫ್, ಕೆ.ಪಿ.ಆರ್.ಎಸ್‌ನ ಮುಖಂಡ ಬಿ.ಉಮೇಶ್ ಶಾಂತಿ ಮತ್ತು ಸೌಹಾರ್ದ ಸಂಘಟನೆಯ ಟಿ.ಆರ್.ರೇವಣ್ಣ, ಎಸ್.ಎಫ್.ಐ, ಡಿ.ವೈ.ಎಫ್.ಐ ಮುಖಂಡರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಯುದ್ಧಾಸಕ್ತ ಸುದ್ದಿ, ದೃಶ್ಯ ಭರಾಟೆ

ಆಸ್ಕರ್ ಪ್ರಶಸ್ತಿ ಸಮಾರಂಭದಲ್ಲಿ ಖಂಡನೆ

ಮಾರ್ಚ್ 23 ಎಂದರೆ ಆಸ್ಕರ್ ಪ್ರಶಸ್ತಿ ಪ್ರಧಾನ ದಿನ. ಸಿನೆಮಾ ಪ್ರಿಯರು ಯಾವ ಚಿತ್ರಕ್ಕೆ. ನಟ ನಟಿಯರಿಗೆ ಪ್ರಶಸ್ತಿ ಬರುತ್ತದೆ ಎಂದು ಕುತೂಹಲದಿಂದ ಕಾಯುತ್ತಾರೆ. ಅಮೇರಿಕದ ಚಲನಚಿತ್ರ ಅಕಾಡೆಮಿಯ ಈ ಅದ್ದೂರಿ ಸಮಾರಂಭ ಟೆಲಿವಿಷನ್‌ನಿಂದಾಗಿ ಇಡೀ ಜಗತ್ತಿನಾದ್ಯಂತ ನೇರ ಪ್ರಸಾರವಾಗುತ್ತದೆ. ಈ ಬಾರಿಯ ಆಸ್ಕರ್‌ನಲ್ಲಿ ಅಮೇರಿಕದ ಅಧ್ಯಕ್ಷ ಬುಷ್ ಇರಾಕಿನ ಮೇಲೆ ನಡೆಸಿರುವ ಆಕ್ರಮಣದ ಛಾಯೇ ದಟ್ಟವಾಗಿಯೇ ಇತ್ತು. ಪ್ರಶಸ್ತಿಯನ್ನು ಪಡೆಯಲು ಬಂದ ಹೆಚ್ಚು ಕಡಿಮೆ ಎಲ್ಲರೂ ಅಮೇರಿಕದ ಇರಾಕಿ ಆಕ್ರಮಣವನ್ನು ಖಂಡಿಸಿದರು. ಆದರೆ ‘ಪಿಯಾನೋಯಿಸ್ಟ್’ ಸಿನೆಮಾದಲ್ಲಿನ ಅಭಿನಯಕ್ಕಾಗಿ ಶ್ರೇಷ್ಟ ನಾಯಕನ ಪ್ರಶಸ್ತಿ ಪಡೆದ ಅಡ್ರಿಯನ್ ಬ್ರಾಡಿ ಮಾಡಿದ ಪುಟ್ಟ ಭಾಷಣ ಮನಕರಗುವಂತಿತ್ತು. ‘ನನ್ನ ಪ್ರೀತಿಯ ಸೈನಿಕ ಸ್ನೆಹಿತನೊಬ್ಬ ಈಗ ಕುವೈತ್‌ನಲ್ಲಿ ನಿರರ್ಥಕ ಯುದ್ಧದಲ್ಲಿ ಭಾಗಿಯಾಗಿದ್ದಾನೆ. ಬುಷ್ ನನಗವನು ಬೇಕು. ಬುಷ್ ಒಬ್ಬ ಅವಿವೇಕಿ’ ಎಂದು ವೇದಿಕೆಯಿಂದ ಘೋಷಿಸಿದ. ‘ಪಿಯಾನೋಯಿಸ್ಟ್’ ಯುದ್ಧದ ನಿರರ್ಥಕತೆ ಮತ್ತು ಕ್ರೌರ್ಯವನ್ನು ಹೇಳುವ ಚಿತ್ರ. ಸ್ಟಾರ್ ಮೂವೀಸ್ ಚಾನೆಲ್ ಪ್ರಸಾರ ಮಾಡಿದ ಕಾರ್ಯಕ್ರಮ ಗಂಭೀರತೆ, ಹಾಸ್ಯದಿಂದ ಕೂಡಿತ್ತು.

- ಪ್ರೊ .ಬಿ.ಎ.ಶ್ರೀಧರ



ಮಾರ್ಚ್ 27 ರ ಬೆಂಗಳೂರಿನ ಟೌನ್‌ಹಾಲ್ ಎದುರು ವಿವಿಧ ಸಂಘಟನೆಗಳ ಕಾರ್ಯಕರ್ತರು, ಬರಹಗಾರರು, ಬುದ್ದಿಜೀವಿಗಳು, ಅದ್ಯಾಪಕರು, ವಿಜ್ಞಾನಿಗಳು ಪಾಲ್ಗೊಂಡು ಮೇಣದ ಬತ್ತಿ ಉರಿಸುವ ಮೂಲಕ ಶಾಂತಿ ಸಂದೇಶ ಸಾರಿದರು.





ಕಲಾವಿದರು ತಮ್ಮ ಕುಂಚದಿಂದ ಯುದ್ಧ ವಿರೋಧ ಸಂದೇಶ ಸಾರಿದರು

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH